ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 14 ಏಪ್ರಿಲ್ 4, 2004 ಬೆಲೆ ರೂ. 3.00






ಭಗತ್‌ಸಿಂಗ್ ಸ್ಮರಣೆ

ಮಹಿಳಾ ಮತದಾರರ ಒಲವು-ನಿಲುವು

ಮುಸಲ್ಮಾನರು ಬಿಜೆಪಿ ಸೇರುತ್ತಿದ್ದಾರೆಯೇ?



- ಹಿತಾನುಭವದ ಭಾರತದಲ್ಲಿ ಕಿಡ್ನಿ ಮಾರುವವರಿದ್ದಾರೆ !
- NDTV ಚುನಾವಣಾ ಸಮೀಕ್ಷೆ
- ಹಮಾಸ್ ನಾಯಕ ಯಾಸೀನ್ ಹತ್ಯೆ



ಪೋಸ್ಟರ್ 'ಕೋಮುವಾದ'

ತುರ್ತು ಪರಿಸ್ಥಿತಿಯಲ್ಲಿ ಆರ್‌ಎಸ್‌ಎಸ್

ಕರ್ನಾಟಕದಲ್ಲಿ ಬಿಜೆಪಿಯೆಂದರೆ ಎ.ಕೆ.ಸುಬ್ಬಯ್ಯ ಎನ್ನುವ ಕಾಲವಿತ್ತು. ರಾಜ್ಯದಲ್ಲಿ ಸಂಘ ಪರಿವಾರದ ಬೀಜಗಳಿಗೆ ನೆಲ ಹದ ಮಾಡಿ ಬಿತ್ತಿದ ಸುಬ್ಬಯ್ಯನವರು ಮೊಳಕೆಯೊಡೆದ ಬೀಜಗಳು ವಿಷ ವೃಕ್ಷವಾಗಿ ಬೆಳೆಯುತ್ತಿರುವುದನ್ನು ಕಣ್ಣಾರೆ ಕಂಡು, ಉಂಡು ಬೆಚ್ಚಿದವರು. ಈ ವಿಷ ವೃಕ್ಷಗಳ ಮೂಲವನ್ನೇ ಹುಡುಕಿ, ಅವುಗಳನ್ನು ಕಿತ್ತೆಸೆಯಲು ನಿಂತು ತಮ್ಮ ಅನುಭವಗಳನ್ನು ಇಲ್ಲಿ ಹೇಳಿದ್ದಾರೆ.

ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲಿ ಆರ್.ಎಸ್.ಎಸ್.ನದೇ ಸಿಂಹಪಾಲು ಎನ್ನುವ ನಂಬಿಕೆ ಹಲವರದು. ಆದರೆ ತುರ್ತು ಪರಿಸ್ಥಿತಿಯ ವಿರುದ್ಧ ಆರ್.ಎಸ್.ಎಸ್. ತನ್ನ ಕಿರುಬೆರಳನ್ನು ಸಹ ಎತ್ತಲಿಲ್ಲ. ಮಾತ್ರವಲ್ಲದೆ ಶ್ರೀಮತಿ ಇಂದಿರಾಗಾಂಧಿಯವರಲ್ಲಿ ಶರಣು ಹೋಗಿ ಪರಿಸ್ಥಿತಿಯಿಂದ ಪಾರಾಗಬೇಕೆಂದು ಆರ್.ಎಸ್.ಎಸ್. ಸರ್ವ ಪ್ರಯತ್ನ ನಡೆಸಿತ್ತೆಂಬುದು ಬಯಲಾದರೆ ಹಲವರಿಗೆ ದಿಗ್ಭ್ರಮೆಯಾದೀತು.

ತುರ್ತು ಪರಿಸ್ಥಿತಿಯಲ್ಲಿ ಅವರು ನಡೆಸಿದ ಭೂಗತ ಚಟುವಟಿಕೆಯ ಅಂಗವಾಗಿ ಹೊರಡಿಸಿದ ಎಲ್ಲಾ ಸಾಹಿತ್ಯದಲ್ಲಿ ಆರ್.ಎಸ್.ಎಸ್. ಮೇಲಿನ ನಿರ್ಬಂಧ ತೆಗೆದುಹಾಕಿ ಜೈಲಿನಲ್ಲಿದ್ದ ಆರ್.ಎಸ್.ಎಸ್‌ನವರ ಬಿಡುಗಡೆಯ ಬಗ್ಗೆ ಒತ್ತಾಯಿಸಲಾಗಿದೆಯೇ ವಿನಹ ತುರ್ತು ಪರಿಸ್ಥಿತಿ ರದ್ದಾಗಲಿ ಎನ್ನುವ ಒತ್ತಾಯ ಎಲ್ಲೂ ಕಂಡುಬರುವುದಿಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಜೊತೆ ರಾಜಿ ಮಾಡಿಕೊಂಡು ಆರ್.ಎಸ್.ಎಸ್. ಮೇಲಿನ ನಿರ್ಬಂಧ ರದ್ದುಪಡಿಸಬೇಕೆಂದು ಸಹ ಭಾರೀ ಪ್ರಯತ್ನ ನಡೆದಿದೆಯೆಂಬುದು ನನಗೆ ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿ ಇದ್ದಾಗಲೇ ತಿಳಿದಿರುವ ಅಂಶವಾಗಿದೆ. ಅದಕ್ಕಾಗಿ ಕನ್ಯಾಕುಮಾರಿಯ ವಿವೇಕಾನಂದ ಶಿಲಾ ಸ್ಮಾರಕದ ಜವಾಬ್ದಾರಿಯಲ್ಲಿದ್ದ ಶ್ರೀ ಏಕನಾಥ ರಾನಡೆಯವರನ್ನು ನಿಯುಕ್ತಿ ಮಾಡಲಾಗಿತ್ತು. ಶ್ರೀ ರಾನಡೆಯವರು ಉತ್ತಮ ವ್ಯವಹಾರ ಜ್ಞಾನವುಳ್ಳವರೆಂದೂ ಆರ್.ಎಸ್.ಎಸ್. ವಲಯದ ವಿಶ್ವಾಸವಾಗಿತ್ತು. ಶ್ರೀ ರಾನಡೆಯವರು ನವದೆಹಲಿಗೆ ಈ ರಾಯಭಾರಕ್ಕಾಗಿ ತೆರಳಿ ಶ್ರೀಮತಿ ಇಂದಿರಾ ಮತ್ತು ಸಂಜಯಗಾಂಧಿಯವರನ್ನು ಭೇಟಿಯಾಗಲು ಅದೆಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಿಲ್ಲವೆಂದು ಆರ್.ಎಸ್.ಎಸ್. ವರಿಷ್ಠರು ಶ್ರೀ ಎಲ್.ಕೆ.ಅದ್ವಾನಿಯವರೊಡನೆ ಬೆಂಗಳೂರು ಕೇಂದ್ರ ಬಂಧೀಖಾನೆಯಲ್ಲಿ ಚರ್ಚಿಸುತ್ತಿದ್ದಾಗ ನನಗೆ ದೃಢವಾಯಿತು. ಇಂಥ ಮಾತುಕತೆ ಮುಂದವರಿಯಬೇಕಾದರೆ ಪರದೇಶಕ್ಕೆ ತಪ್ಪಿಸಿಕೊಂಡು ಹೋಗಿ ತುರ್ತು ಪರಿಸ್ಥಿತಿಯ ವಿರುದ್ಧ ಚಟುವಟಿಕೆ ನಡೆಸುತ್ತಿದ್ದ ಡಾ.ಸುಬ್ರಹ್ಮಣ್ಯ ಸ್ವಾಮಿಯವರ ಶರಣಾಗತಿಯಾಗಬೇಕೆಂದು ಕಾಂಗ್ರೆ ವಲಯದಿಂದ ಶರತ್ತು ಹಾಕಲ್ಪಟ್ಟಿತೆಂದು ಸಹ ತಿಳಿಯಿತು. ಡಾ. ಸುಬ್ರಹ್ಮಣ್ಯಸ್ವಾಮಿಯವರು ಭಾರತದಿಂದ ಎರಡನೇ ಬಾರಿ ತಪ್ಪಿಸಿಕೊಂಡು ಹೋದುದು ಇದೇ ಕಾರಣಕ್ಕಾಗಿ ಎಂಬ ಅಂಶ ಇನ್ನೂ ಬಯಲಾಗಿಲ್ಲ. ಹೀಗೆ ಎರಡನೇ ಬಾರಿ ಹೋಗಿರದಿದ್ದರೆ ಆರ್.ಎಸ್.ಎಸ್.ನವರೇ ಇವರನ್ನು ಹಿಡಿದೊಪ್ಪಿಸುತ್ತಿದ್ದರು.



ಆರ್.ಎಸ್.ಎಸ್.ನ ಸರ್ವೋಚ್ಚ ನಾಯಕ ಶ್ರೀ ಬಾಳಾಸಾಬ್ ದೇವರಸ್‌ರವರು ಮಹಾರಾಷ್ಟ್ರದ ಎರವಾಡ ಜೈಲಿನಿಂದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಎರಡು ಪತ್ರಗಳನ್ನು ಬರೆದಿದ್ದು, ಆ ಪತ್ರದ ವಿವರವೆಲ್ಲಾ ನಂತರ ಮಹಾರಾಷ್ಟ್ರ ವಿಧಾನಸಭೆಯ ಮೂಲಕ ಸಂಪೂರ್ಣ ಬಯಲಾಗಿದೆ. ಆದರೂ ಈ ಪತ್ರಗಳಲ್ಲಿ ಅಡಕವಾಗಿದ್ದ ಅಂಶವನ್ನು ಬಹಳಷ್ಟು ಜನ ಗಮನಿಸಿಲ್ಲವೆನ್ನಬಹುದು. ಆರ್.ಎಸ್.ಎಸ್. ಒರ್ ಅಬಾಯಂ' ಎನ್ನುವ ದ್ರಾವಿಡ ಕಳಗಂನ ಶ್ರೀ ವೀರಮಣಿ ಬರೆದ ಪುಸ್ತಕದಲ್ಲಿ ಬಾಳಾಸಾಬ್ ದೇವರಸ್‌ರವರ ಮೇಲ್ಕಾಣಿಸಿದ ಪತ್ರಗಳ ಬಗ್ಗೆ ಉಲ್ಲೇಖಿಸಲಾಗಿದೆ. ಈ ಪತ್ರವನ್ನು ಅರ್ಥ ಮಾಡಿಕೊಂಡರೆ ಯಾರಿಗಾದರೂ ಅವುಗಳು ಶರಣಾಗತಿ ಪತ್ರಗಳಾಗಿದ್ದವೆಂದು ಗೊತ್ತಾಗುತ್ತದೆ. ಒಂದು ಪತ್ರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮಗಳ ಬಗ್ಗೆ ಪ್ರಶಂಸಿಸಿ, ಆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜೈಲಿನಲ್ಲಿರುವ ಸಾವಿರಾರು ಆರ್.ಎಸ್.ಎಸ್ ಮಂದಿಯನ್ನು ಬಿಡುಗಡೆ ಮಾಡಿ ಬಳಸಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ. ಇನ್ನೊಂದು ಪತ್ರದ ಪ್ರಾರಂಭದಲ್ಲಿಯೇ ಶ್ರೀಮತಿ ಇಂದಿರಾಗಾಂಧಿಯವರು ಲೋಕಸಭಾ ಸದಸ್ಯತ್ವ ರದ್ದಾದುದರ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಜಯಗಳಿಸಿದ್ದಕ್ಕೆ ಅಭಿನಂದನೆ ಸಲ್ಲಿಸಲಾಗಿದೆ. ಈ ಮೇಲ್ಮನವಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಗೆಲ್ಲುವುದಕ್ಕೆ ಕಾನೂನನ್ನೇ ಪೂರ್ವಾನ್ವಯವಾಗಿ ಬದಲಾಯಿಸಿದ್ದನ್ನು ಇಡೀ ರಾಷ್ಟ್ರದಲ್ಲಿ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಒಕ್ಕೊರಳಿನಿಂದ ಖಂಡಿಸುತ್ತಿದ್ದಾಗ, ಅಕ್ರಮ ಮಾರ್ಗದಿಂದ ಗಳಿಸಿದ ಈ ಗೆಲುವಿಗೆ ಭಾರೀ ಬಲಶಾಲಿ ಸಂಘಟನೆಯೆಂದು ಹೇಳಿಕೊಳ್ಳುತ್ತಿರುವ ಆರ್.ಎಸ್.ಎಸ್. ಸರ್ವೋಚ್ಚ ನಾಯಕ ಬಾಳಾಸಾಬ್ ದೇವರಸ್, ಅಭಿನಂದನೆ ಸಲ್ಲಿಸಿ ಜೈಲಿನಿಂದ ಪತ್ರ ಬರೆದುದರ ಔಚಿತ್ಯವೇನು? ಇದು ಶರಣಾಗತಿ ಪತ್ರ ಅಲ್ಲವೆ? ಶ್ರೀ ಏಕನಾಥ ರಾನಡೆಯವರು ಶ್ರೀಮತಿ ಇಂದಿರಾಗಾಂಧಿಯವರೊಡನೆ ರಾಜಿ ಪಂಚಾಯತಿಯ ರಾಯಭಾರಕ್ಕಾಗಿ ತೆರಳುತ್ತಿದ್ದ ಹಿನ್ನೆಲೆಯಲ್ಲಿ ಅನುಕೂಲಕರ ಭೂಮಿಕೆ ತಯಾರು ಮಾಡುವುದಕ್ಕಾಗಿಯೇ ಈ ಪತ್ರಗಳನ್ನು ಬರೆಯಲಾಯಿತೆಂಬುದು ನಾನು ಆಮೇಲೆ ಕೆಲವು ಆರ್.ಎಸ್.ಎಸ್. ವರಿಷ್ಠರೊಡನೆ ನಡೆಸಿದ ಖಾಸಗಿ ಚರ್ಚೆಯ ಕಾಲದಲ್ಲಿ ತಿಳಿದುಬಂತು.

ತುರ್ತು ಪರಿಸ್ಥಿತಿಯ ಅವಧಿಯಲ್ಲಿ ನಾನು ಆರ್.ಎಸ್.ಎಸ್‌ನವರೊಡನೆ ಸುಮಾರು 18 ತಿಂಗಳು ಜೈಲಿನೊಳಗಿದ್ದೆ. ಹೆಚ್ಚಿನ ಕಾಲ ಬೆಂಗಳೂರು ಕೇಂದ್ರ ಬಂಧಿಖಾನೆಯಲ್ಲಿದ್ದೆ. ಜೈಲಿನಲ್ಲಿದ್ದ ಆರ್.ಎಸ್.ಎಸ್.ನ ಪೂರ್ಣ ಸಮಯದ ಪ್ರಚಾರಕರು ಮಾತ್ರ ಸಂತೋಷವಾಗಿದ್ದರು. ಏಕೆಂದರೆ ಅವರಿಗೆ ಹೊರಗಡೆಗಿಂತ ಜೈಲೇ ಚೆನ್ನಾಗಿತ್ತು. ಹೊರಗಡೆ ಯಾವ ರೀತಿಯ ಚಟುವಟಿಕೆ ನಡೆಸುತ್ತಿದ್ದರೋ, ಅದೆಲ್ಲವನ್ನೂ ಅವರು ಜೈಲಿನೊಳಗೆ ನಡೆಸುತ್ತಿದ್ದರು. ಹೊರಗಡೆ ಭೂಗತವಾಗಿ ಬದುಕುವುದಕ್ಕಿಂತ ಜೈಲು ಅವರಿಗೆ ಉತ್ತಮವಾಗಿತ್ತು. ಆದರೆ ಬಹುಸಂಖ್ಯೆಯಲ್ಲಿದ್ದ ಪೂರ್ಣ ಸಮಯದವರಲ್ಲದ ಆರ್.ಎಸ್.ಎಸ್. ವ್ಯಕ್ತಿಗಳು ಸಂಪೂರ್ಣ ಕುಸಿದುಬಿದ್ದು, ಗೋಳೋ ಎಂದು ಅಳುತ್ತಿದ್ದ ದೃಶ್ಯ ಅಪರೂಪವೇನಾಗಿರಲಿಲ್ಲ. ಕೆಲವರಿಗಂತೂ ತಲೇನೇ ಕೆಟ್ಟು ಹುಚ್ಚರಾಗಿದ್ದರು. ತಪ್ಪೊಪ್ಪಿಗೆ ಬರೆದುಕೊಟ್ಟರೆ ಬಿಡುಗಡೆಯಾಗುವ ಸಂಭವವಿದ್ದಿದ್ದರೆ, ಬಹುತೇಕ ಎಲ್ಲಾ ಆರ್.ಎಸ್.ಎಸ್ ಜನ ಶರಣಾಗತಿ ಪತ್ರ ಬರೆದುಕೊಟ್ಟು ಜೈಲಿನಿಂದ ಹೊರಹೋಗುತ್ತಿದ್ದರು. ತಪ್ಪೊಪ್ಪಿಗೆ ಬರೆದುಕೊಟ್ಟರೂ ಜೈಲಿನಿಂದ ಬಿಡುಗಡೆಯಾಗುವ ಸಂಭವವಿಲ್ಲದಿದ್ದುದು ಅವರ ಮರ್ಯಾದೆ ಉಳಿಸಿತೆನ್ನಬಹುದು. ಜೈಲಿನಲ್ಲಿ ಆರ್.ಎಸ್.ಎಸ್‌ನವರ ಸಂಖ್ಯೆ ಉಳಿದವರಿಗಿಂತ ಹೆಚ್ಚಾಗಿತ್ತು. ಆರ್.ಎಸ್.ಎಸ್.ನವರನ್ನು ಸಿಕ್ಕಿದಲ್ಲೆಲ್ಲಾ ಅನಾವಶ್ಯಕವಾಗಿ ಹಿಡಿದು ಹಾಕಿದ್ದು ಇದಕ್ಕೆ ಕಾರಣ. ಇವರು ಜೈಲಿನಲ್ಲಿ ಎಷ್ಟೊಂದು ಹತಾಶರಾಗಿದ್ದರೆನ್ನುವುದು ಅನೇಕರಿಗೆ ತಿಳಿದೇ ಇಲ್ಲ. ಬೆಂಗಳೂರಿನಲ್ಲಿ ಆರ್.ಎಸ್.ಎಸ್. ಅಧ್ವರ್ಯರಲ್ಲೊಬ್ಬರನ್ನು ಪೊಲೀಸರು 'ಡಿಫೆನ್ಸ್ ಆಫ್ ಇಂಡಿಯಾ ರೂಲ್' ಪ್ರಕಾರ ಹಿಡಿದು ಜೈಲಿಗ ತಂದಿದ್ದರು, ಇವರು ಇಂಜಿನಿಯರಿಂಗ್ ಕಾಲೇಜೊಂದರಲ್ಲಿ ಗಣಿತ ಶಾಸ್ತ್ರದ ಬೋಧಕರಾಗಿದ್ದಾರೆ. ಇವರು ಮೀಸಾ ಬಂಧಿಯಾಗಿಲ್ಲದ ಕಾರಣ ಕೆಲವೇ ಸಮಯದಲ್ಲಿ ಬಿಡುಗಡೆ ನ್ಯಾಯಾಲಯದ ಮೂಲಕ ಸಾಧ್ಯವಿತ್ತು. ಆದರೂ ಇವರು ಜೈಲಿನಲ್ಲಿ ಒಬ್ಬ ಅಬಲೆಯಂತೆ ಅಳುತ್ತಾ ಗೋಳಾಡುತ್ತಿದ್ದುದು ಆರ್.ಎಸ್.ಎಸ್.ನವರ ಮನೋಬಲಕ್ಕೆ ಕನ್ನಡಿ ಹಿಡಿದಂತಿತ್ತು. ಇವರ ಎರಡನೇ ಹೆಂಡತಿ ಮಗುವಿನೊಂದಿಗೆ ಜೈಲಿನಲ್ಲಿ ಈ ಗಂಡನ ಸಂದರ್ಶನಕ್ಕೆ ಬಂದಾಗಲಂತೂ ಅವರನ್ನು ನೋಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ತನ್ನ ಎರಡನೇ ಹೆಂಡತಿ ಮತ್ತು ಮಗುವನ್ನು ಹಗಲು ಹೊತ್ತಾದರೂ ಜೈಲಿನಲ್ಲಿ ತನ್ನೊಡನೆ ಇರುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಈತ ಜೈಲು ಅಧಿಕಾರಿಗಳನ್ನು ಕಾಡಿಸುತ್ತಿದ್ದ. ಜೈಲಿನಲ್ಲಿ ಆರ್.ಎಸ್.ಎಸ್.ನವರು ಯಾವ ರೀತಿ ಇದ್ದರೆನ್ನುವುದಕ್ಕೆ ಇದೊಂದು ಕೈಗನ್ನಡಿ ಮಾತ್ರ. ಸಾರ್ವತ್ರಿಕವಾಗಿ ಇವರ ನಡವಳಿಕೆ ಹೀಗೆಯೇ ಇತ್ತು, ಆದರೆ, ಆರ್.ಎಸ್.ಎಸ್. ಲೆಕ್ಕದಲ್ಲಿದ್ದರೂ, ನೇರವಾಗಿ ಆರ್.ಎಸ್.ಎಸ್. ನವರಾಗಿರದೆ, ಜನಸಂಘದಲ್ಲಿ ದುಡಿಯುತ್ತಿದ್ದವರು ನೈತಿಕವಾಗಿ ಈ ರೀತಿ ಕುಸಿದಿರಲಿಲ್ಲ. ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಸತ್ಯಾಗ್ರಹದಲ್ಲಿ ಕಟ್ಟಾ ಆರ್.ಎಸ್.ಎಸ್.ನವರು ಹೆಚ್ಚು ಮಂದಿ ಭಾಗವಹಿಸಿರಲಿಲ್ಲವೆನ್ನುವುದು ವಸ್ತುಸ್ಥಿತಿ. ಬೆಂಗಳೂರು ನಗರದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಸೇರಿದವರು ಸುಮಾರು ಮುನ್ನೂರೈವತ್ತು ಮಂದಿ ಮಾತ್ರ. ಇವರೆಲ್ಲಾ ನೇರ ಆರ್.ಎಸ್.ಎಸ್.ನವರಾಗಿರದೇ ಜನಸಂಘದಲ್ಲಿ ಸಕ್ರಿಯರಾಗಿದ್ದವರು. ಅಂದ ಮೇಲೆ ಬೆಂಗಳೂರು ನಗರದಲ್ಲಿ ಆರ್.ಎಸ್.ಎಸ್. ಸಮಾರಂಭಗಳಲ್ಲಿ ಬೂಟು ಧರಿಸಿ ಪಥಸಂಚಲನ ಮಾಡುವ ಸುಮಾರು ಹತ್ತು ಸಾವಿರ ಜನ ಎಲ್ಲಿ ಹೋಗಿದ್ದರು? ಇವರೇಕೆ ಸತ್ಯಾಗ್ರಹದಲ್ಲಿ ಭಾಗವಹಿಸಲಿಲ್ಲವೆಂಬ ಪ್ರಶ್ನೆ ಸಹ ಉದ್ಭವಿಸುತ್ತದೆ. ನಿಜಸ್ಥಿತಿ ಹೇಳಬೇಕಿದ್ದರೆ, ತುರ್ತು ಪರಿಸ್ಥಿತಿಯ ವಿರುದ್ಧದ ಸತ್ಯಾಗ್ರಹದಲ್ಲಿ ಜನಸಂಘದಲ್ಲಿ ಕೆಲಸ ಮಾಡುತ್ತಿದ್ದವರೇ ಹೆಚ್ಚಿನಂಶ ಜನ ಭಾಗವಹಿಸಿದ್ದರು. ಬರೇ ಆರ್.ಎಸ್.ಎಸ್. ನಿಕಟವರ್ತಿಗಳು ದೂರವೇ ಉಳಿದಿದ್ದರು. ಇತರ ಪಕ್ಷಗಳು ಹಾಗೂ ಸಂಘ ಸಂಸ್ಥೆಗಳಿಗೆ ಸೇರಿದ್ದವರು ಜೈಲಿನಲ್ಲಿ ಆರ್.ಎಸ್.ಎಸ್.ನವರಿಗಿಂತ ಕಮ್ಮಿ ಸಂಖ್ಯೆಯಲ್ಲಿದ್ದರೆಂಬುದರ ಬಗ್ಗೆ ಅನೇಕ ಅಂಕಿ ಅಂಶಗಳನ್ನು ಮುಂದೊಡ್ಡಿ ತಾವೇ ಹೋರಾಟ ಮಾಡಿದ್ದೆಂದು ಆರ್.ಎಸ್.ಎಸ್.ನವರು ವಿಫಲತೆಯನ್ನು ಮುಚ್ಚಿಕೊಳ್ಳುತ್ತಾರೆ. ಆದರೆ ಕಡಿಮೆ ಸಂಖ್ಯೆಯಲ್ಲಿದ್ದರೂ ಬೇರೆಯವರು ಆರ್.ಎಸ್.ಎಸ್.ನವರಂತೆ ಮನೋಬಲ ಕಳೆದುಕೊಂಡು ಕುಸಿದು ಬಿದ್ದಿರಲಿಲ್ಲ. ಬದಲಾಗಿ ಹೋರಾಟದ ಕಿಚ್ಚು ಅವರಲ್ಲಿ ಎದ್ದು ಕಾಣುತ್ತಿತ್ತು.

ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಜೈಲಿನಲ್ಲಿ ಆರ್.ಎಸ್.ಎಸ್.ನವರ ವರ್ತನೆ ಹೇಗಿತ್ತೆಂಬುದರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದರೆ ಅವರ ನಿಜ ರೂಪದ ಪರಿಚಯವಾದೀತು. ಜನಸಂಘದ ವತಿಯಿಂದ ಜೈಲು ಸೇರಿದವರೆಲ್ಲರೂ, ನಾನೂ ಸೇರಿ ಆರ್.ಎಸ್.ಎಸ್. ಪಟ್ಟಿಯಲ್ಲಿದ್ದುದರಿಂದ ಜೈಲಿನಲ್ಲಿ ಉಳಿದವರಿಗಿಂತ ಇವರ ಸಂಖ್ಯೆ

ಪುಟ 4 ಕ್ಕೆ

ನಾನು ಬೆಂಗಳೂರು ಜೈಲಿನಲ್ಲಿದ್ದಾಗ, ಮಂಗಳೂರು ಪಕ್ಕದ ಕಲ್ಲಡ್ಕ ಎಂಬ ಊರಿನಲ್ಲಿ ಇಸ್ಮಾಯಿಲ್ ಎನ್ನುವ ಮುಸಲ್ಮಾನರೊಬ್ಬರ ಕೊಲೆಯಾಯಿತು. ಈ ಕೊಲೆ ಮಾಡಿದವರು ಆರ್.ಎಸ್.ಎಸ್‌ನವರೆಂದು ಅಂದಿನ ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸುರವರು ಆರೋಪ ಮಾಡಿದಾಗ, ನನಗದನ್ನು ನಂಬುವುದು ಸಾಧ್ಯವಾಗಲಿಲ್ಲ. ಈ ಬಗ್ಗೆ ಸಿ.ಓ.ಡಿ. ತನಿಖೆ ಪ್ರಾರಂಭವಾಗಿ ಕೆಲವು ದಿವಸಗಳಲ್ಲಿ ಈ ತನಿಖೆಯ ಸಂಬಂಧದಲ್ಲಿ ಪೊಲೀಸ್ ದೌರ್ಜನ್ಯಕ್ಕೊಳಗಾದ ಅನೇಕ ಜನ ತರುಣರು ಬೆಂಗಳೂರು ಜೈಲಿಗೆ ಬಂದರು. ಅವರೆಲ್ಲರೂ ಪಡುತ್ತಿದ್ದ ಸಂಕಟ, ಅನುಭವಿಸುತ್ತಿದ್ದ ನೋವು ಅತೀವವಾಗಿತ್ತು. ಹೀಗೆ ದೌರ್ಜನ್ಯಕ್ಕೊಳಗಾದವರೆಲ್ಲರೂ ಆರ್.ಎಸ್.ಎಸ್.ನವರಾಗಿದ್ದರು. ಒಂದು ಕೊಲೆಯ ಪ್ರಕರಣದ ದುರ್ಲಾಭ ಪಡೆದು ತನ್ನ ರಾಜಕೀಯ ಎದುರಾಳಿಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ಶ್ರೀ ದೇವರಾಜ ಅರಸರು ತೊಡಗಿದ್ದರೆಂದು ನಾನು ಅಂದು ನಂಬಿದ್ದೆ. ಕೊಲೆಯ ತನಿಖೆ ಪೂರ್ಣವಾಗಿ ಕೆಲವರ ಮೇಲೆ ಮೊಕದ್ದಮೆ ಹೂಡಲ್ಪಟ್ಟರೂ, ನ್ಯಾಯಾಲಯದಲ್ಲಿ ಆರೋಪ ಸಾಬೀತಾಗಲಿಲ್ಲವಾದರೂ, ಆರೋಪಿಗಳಾಗಿದ್ದವರೆಲ್ಲರೂ ಆರ್.ಎಸ್.ಎಸ್.ಗೆ ಸೇರಿದ್ದರು. ಆರ್.ಎಸ್.ಎಸ್.ನವರಿಂದ ಈ ಕೊಲೆ ನಡೆದಿಲ್ಲವೆಂದೂ, ಶ್ರೀ ದೇವರಾಜ ಅರಸರವರು ರಾಜಕೀಯ ಕಾರಣಗಳಿಂದ ಆರ್.ಎಸ್.ಎಸ್‌ನವರ ಮೇಲೆ ಪ್ರಚಾರ ನಡೆಸಿದ್ದಾರೆಂದೂ, ನಾನು ಅಂದು ಪ್ರಾಮಾಣಿಕವಾಗಿಯೇ ನಂಬಿದ್ದೆ. ನನಗೆ ಸತ್ಯಾಂಶದ ಅರಿವಾದದ್ದು 'ಕನ್ನಡ ನಾಡು' ಪಕ್ಷದ ರಚನೆಗಾಗಿ ಕಲ್ಲಡ್ಕ ಭಾಗದಿಂದಲೂ ಸಹ ಆರ್.ಎಸ್.ಎಸ್. ವಿರುದ್ಧ ಬಂಡೆದ್ದು, ಕೆಲವು ತರುಣರು ಈ ಪಕ್ಷ ಸೇರಿ ನನಗೆ ಕಲ್ಲಡ್ಕ ಕೊಲೆಯ ವಿವರ ನೀಡಿದಾಗಲೆ. ಹಲವಾರು ಕಡೆ ಆರ್.ಎಸ್.ಎಸ್.ನವರು ಗುಪ್ತ ಸಭೆ ಸೇರಿ, ಈ ಕೊಲೆಯ ಪಿತೂರಿ ನಡೆಸಿದ್ದರೆಂದೂ, ಈ ಕೊಲೆಯಲ್ಲಿ ಮಂಗಳೂರಿನಿಂದ ಸುಳ್ಯದವರೆಗೆ ಇರುವ ಕೆಲವು ಪ್ರಮುಖ ಆರ್.ಎಸ್.ಎಸ್. ಮನೆಯೊಂದಕ್ಕೆ ಸೇರಿದ್ದ ಹೆಣ್ಣೊಂದರ ಸಂಬಂಧದಲ್ಲಿ ಈ ಕೊಲೆಯಾಯಿತೆಂದು ಸಹ ಗೊತ್ತಾಯಿತು.

ಮುಸಲ್ಮಾನರು ಬಿಜೆಪಿ ಸೇರುತ್ತಿದ್ದಾರೆಯೇ?

ಎಲ್ಲರೂ ಬಿಜೆಪಿ ಸೇರಿಯಾಯ್ತು. ಇನ್ನು ಉಳಿದವನೆಂದರೆ ವೀರಪ್ಪನ್ ಮಾತ್ರ! ಆತನನ್ನು ಕರ್ನಾಟಕದ ಬಿಜೆಪಿಗೆ ಸೇರಿಸಬೇಕೋ, ತಮಿಳುನಾಡಿನ ಬಿಜೆಪಿಗೆ ಸೇರಿಸಬೇಕೋ ಎಂಬ ವಿವಾದವನ್ನು ಬಿಜೆಪಿಯ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯ ಅಜೆಂಡಾದಲ್ಲಿ ಸೇರಿಸಿದ ಬಳಿಕವೂ ಅದು ಇತ್ಯರ್ಥವಾಗದೆ ಉಳಿದಿರುವುದರಿಂದ ವೀರಪ್ಪನ್ ವನವಾಸ ಮುಕ್ತಾಯಗೊಳ್ಳಲಿಲ್ಲವಂತೆ! ಇರಲಿ.

ಮುಸಲ್ಮಾನರು ಸಾಲುಸಾಲಾಗಿ ಬಿಜೆಪಿ ಸೇರುತ್ತಿದ್ದಾರೆ ಎಂದು ಪತ್ರಿಕೆಗಳು ಬರೆಯುತ್ತಿವೆ. ಏನು ಸಮಾಚಾರ ಇರಬಹುದು?

ಮುಸಲ್ಮಾನರು ಬಿಜೆಪಿಗೆ ಸೇರುತ್ತಿದ್ದರೆ ಆಶ್ಚರ್ಯ, ಆತಂಕ ಪಡಬೇಕಾದ ಪ್ರಶ್ನೆ ಇಲ್ಲ. ಪ್ರಜಾಪ್ರಭುತ್ವದಲ್ಲಿ ಅವರಿಗೆ ಯಾವುದೇ ಪಕ್ಷವನ್ನು ಬೆಂಬಲಿಸುವ ಹಕ್ಕಿದೆ. ಆದರೆ ಮುಸಲ್ಮಾನರು ಭಾರೀ ಸಂಖ್ಯೆಯಲ್ಲಿ ಬಿಜೆಪಿ ಸೇರುತ್ತಿದ್ದಾರೆ, ಅದ್ವಾನಿಯವರ ರಥಯಾತ್ರೆಯನ್ನು ಸ್ವಾಗತಿಸಲು ನೂರಾರು ಸಂಖ್ಯೆಯಲ್ಲಿ ಸೇರುತ್ತಿದ್ದಾರೆ ಎಂಬ ಅಬ್ಬರದ ಪ್ರಚಾರ ನಡೆದಿದೆ. ಇದು ಎಷ್ಟರ ಮಟ್ಟಿಗೆ ನಿಜ?

ಮುಸ್ಲಿಂ ವಿರೋಧಿ ಎಂಬ ಕಳಂಕವನ್ನು ತೊಡೆದು ಹಾಕಲು ಬಿಜೆಪಿ ಮೊದಲಿನಿಂದಲೂ ಪ್ರಯತ್ನಿಸುತ್ತಿದೆ. ಮೊದಲು ಅರಿಫ್ ಬೇಗ್ ಎಂಬವರನ್ನು ಅದು ಪ್ರದರ್ಶನಕ್ಕೆ ಇಟ್ಟಿತ್ತು. ಅನಂತರ ಸಿಕಂದರ್ ಭಕ್ತ್ ಆಗಮಿಸಿದರು. ನಮ್ಮ ಸಾಹಿತಿ ಚಂದ್ರಶೇಖರ್ ಪಾಟೀಲರ ಮಾತುಗಳಲ್ಲಿ ಹೇಳುವುದಾದರೆ ಅವರು ಬಿಜೆಪಿಯ 'ಭಕ್ತ ಸಿಕಂದರ್' ಆಗಿದ್ದರು. ಈಗ ಮುಕ್ತಾರ್ ಅಬ್ಬಾಸ್ ನಕ್ವಿ ಎನ್ನುವವರೊಬ್ಬರು ಓಡಾಡುತ್ತಿದ್ದಾರೆ. ಇವರು ಬಿಜೆಪಿಯ ಜಾಹೀರಾತು ಬೋರ್ಡುಗಳು. ಅವರ 182 ಸಂಸತ್ ಸದಸ್ಯರಲ್ಲಿ ಷಹನವಾಜ್ ಹುಸೇನ್ ಒಬ್ಬರೇ ಮುಸ್ಲಿಂ. ಕರ್ನಾಟಕದ ವಿಧಾನಸಭಾ ಚುನಾವಣೆಗೆ ಅನಂತ ಕುಮಾರ್ ಪ್ರಕಟಿಸಿರುವ 125 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಪ್ರೊ. ಮುಮ್ತಾಜ್ ಅಲಿ ಖಾನ್ ಒಬ್ಬರೇ ಮುಸಲ್ಮಾನರು. ಮುಸಲ್ಮಾನರು ಬಿಜೆಪಿಯನ್ನು ನಂಬುವುದಿಲ್ಲ. ಬೇರೆ ರಾಜಕೀಯ ಪಕ್ಷಗಳಂತೆ ಅದೂ ಒಂದು ರಾಜಕೀಯ ಪಕ್ಷ ಎಂದು ಒಪ್ಪಿಕೊಳ್ಳಲು ಮುಸಲ್ಮಾನರಿಗೆ ಸಾಧ್ಯವಾಗುತ್ತಿಲ್ಲ.

ಅದಾಗ್ಯೂ, ಪ್ರತಿದಿನ ಮುಸ್ಲಿಂ ನಾಯಕರು ಬಿಜೆಪಿ ಸೇರುತ್ತಿದ್ದಾರೆ ಎಂದು ಬಿಂಬಿಸಲಾಗುತ್ತಿದೆ. ಆರೀಫ್ ಮುಹಮ್ಮದ್ ಖಾನ್ ಮತ್ತು ನಜ್ಮಾ ಹೆಪ್ತುಲ್ಲಾರಂತಹ ಪ್ರಚಾರದಲ್ಲಿರುವ ಕೆಲವು ಮುಸ್ಲಿಂ ವ್ಯಕ್ತಿಗಳು ಬಿಜೆಪಿ ತೆಕ್ಕೆಗೆ ಬಿದ್ದಾಕ್ಷಣ ಮುಸಲ್ಮಾನರೆಲ್ಲ ಬಿಜೆಪಿ ಸೇರಲು ಕ್ಯೂ ಹಚ್ಚಿದ್ದಾರೆ ಎಂದಾಗುವುದಿಲ್ಲ. ಇವರು ಭಾರತದ ಮುಸಲ್ಮಾನರ ಪ್ರತಿನಿಧಿಗಳೆಂದು ಸಹ ಭಾವಿಸಲಾಗುವುದಿಲ್ಲ. ಇಂದು ರಾಜಕೀಯ ಸಂದರ್ಭಸಾದಕತನ ಸರ್ವವ್ಯಾಪಿಯಾಗಿದೆ. ಇತರ ವಿಭಾಗಗಳಲ್ಲಿ ಇರುವಂತೆ ಮುಸ್ಲಿಂ ಸಮುದಾಯದ ನಡುವೆಯೂ ಈ ಸಂದರ್ಭಸಾಧಕತನ ವ್ಯಾಪಕವಾಗಿ ಇದೆ. ಅಧಿಕಾರದ ಸೆಳೆತಕ್ಕೆ ಒಳಗಾದ ಮುಸಲ್ಮಾನರೂ ಆಳುವ ಪಕ್ಷವನ್ನು ಅಪ್ಪಿಕೊಳ್ಳಬಹುದು. ಆರಿಫ್‌ಗೆ ಮಂತ್ರಿಯಾಗುವ ಕನಸು, ನಜ್ಮಾಗೆ ಕಾಂಗ್ರೆಸ್ಸಿನಲ್ಲಿ ಕೈಗೂಡದ ಉಪರಾಷ್ಟ್ರಪತಿ ಸ್ಥಾನವನ್ನು ಬಿಜೆಪಿಯಲ್ಲಾದರೂ ಗಿಟ್ಟಿಸಿಕೊಳ್ಳುವ ಆಸೆ. ಆರಿಫ್ ಮತ್ತು ನಜ್ಮಾ ಅವರಂತಹ ಶ್ರೀಮಂತ ಮುಸಲ್ಮಾನರು ಬಿಜೆಪಿಯೇತರ ಸರ್ಕಾರಗಳಲ್ಲಿ ಸುದೀರ್ಘಕಾಲ ಅಧಿಕಾರದ ಸುಖವನ್ನು ಉಂಡಿದ್ದಾರೆ. ಅಧಿಕಾರ ಹೋಗುತ್ತದೆ ಎಂದಾಗ ಅವರು ಚಡಪಡಿಸುತ್ತಾರೆ. ಒಮ್ಮೆ ಅಧಿಕಾರದ ರುಚಿ ಉಂಡವರಿಗೆ ಅಧಿಕಾರ ಇಲ್ಲದೆ ಇರಲು ಬಹಳ ಕಷ್ಟ! ಆಗ ಇಂತವರು ಕೋಮುವಾದಿ ಬಿಜೆಪಿಯೊಂದಿಗೂ ಕೈ ಜೋಡಿಸಲು ಮುಂದಾಗುತ್ತಾರೆ.

ಚುನಾವಣೆಗಳಲ್ಲಿ ಮುಸಲ್ಮಾನರು ಬಿಜೆಪಿಗೆ ಓಟೂ ಹಾಕುತ್ತಾರೆ. ಗುಜರಾತ್‌ನಲ್ಲಿ 2000ಕ್ಕೂ ಹೆಚ್ಚು ಮುಸಲ್ಮಾನರನ್ನು ಸಾಯಿಸಿದ ನಂತರ ನಡೆದ ಚುನಾವಣೆಯಲ್ಲಿ ಮುಸಲ್ಮಾನರು ಬಿಜೆಪಿಗೆ ಓಟ್ ಹಾಕಿದ್ದಾರೆ ಎಂಬ ವರದಿಗಳಿವೆ. ಗುಜರಾತ್‌ನಲ್ಲಿ ಮುಸಲ್ಮಾನರು ನರೇಂದ್ರ ಮೋದಿಗೆ ಯಾಕೆ ಓಟ್ ಹಾಕಿರಬಹುದು ಎಂಬುದಕ್ಕೆ ವಿವರಣೆ ಬೇಕಾಗಿಲ್ಲ. ಬಲವಂತವಾಗಿ ಓಟ್ ಹಾಕಿಸಲಾಗಿದೆ. ಸರ್ಕಾರವೇ ಮುಂದೆ ನಿಂತು ಅವರ ಮನೆಗಳನ್ನು ಭಸ್ಮ ಮಾಡಿರುವಾಗ, ಮಕ್ಕಳು ಮಹಿಳೆಯರು ಎನ್ನುವ ಕನಿಕರ ತೋರದೆ ಕೊಚ್ಚಿ ಕೊಚ್ಚಿ ಹಾಕಿರುವಾಗ, ಬದುಕಿ ಉಳಿದವರ ಮನೋಸ್ಥಿತಿ ಏನಾಗಿರಬಹುದು. ಜೀವ ಉಳಿಸಿಕೊಳ್ಳುವ ಆತಂಕ ಅವರನ್ನು ಬಿಜೆಪಿಗೆ ಓಟು ಹಾಕುವಂತೆ ಬಲವಂತಪಡಿಸಿದೆ. ಹೆಚ್ಚುತ್ತಿರುವ ಭಜರಂಗದಳದವರ ಪುಂಡಾಟಿಕೆ, ಹಿಂದೂ ಸಮಾಜೋತ್ಸವಗಳಲ್ಲಿ ಮುಸಲ್ಮಾನರ ವಿರುದ್ಧ ಅವರ ಉದ್ರೇಕಕಾರಿ ಮಾತುಗಳನ್ನು ನೋಡಿ, ಕೇಳಿ ಭೀತಿಗೊಳಗಾಗುವ ಮುಸಲ್ಮಾನರು ಬಿಜೆಪಿಗೆ ಓಟು ಹಾಕುವುದರಲ್ಲಿ ಆಶ್ಚರ್ಯವೇನಿದೆ? ಬೆದರಿಕೆಯ ತಂತ್ರ ಯಶಸ್ವಿಯಾಗಿರುವುದರಿಂದಲೇ ಗುಜರಾತ್ ಪ್ರಯೋಗವನ್ನು ದೇಶದ ಬೇರೆ ಭಾಗಗಳಿಗೂ ವಿಸ್ತರಿಸಲು ಸಂಘಪರಿವಾರದ ರಕ್ತಪಿಪಾಸುಗಳು ಹವಣಿಸುತ್ತಿರುವುದು.

ಬಿಜೆಪಿ ಎಂದರೆ ಒಂದು ಬಿರುಗಾಳಿ. ಅದಕ್ಕೆ ಜನತೆಯ ನಡುವೆ ಪ್ರೀತಿಯ ಬೇರುಗಳಿಲ್ಲ. ಬಹುಸಂಖ್ಯಾತ ಹಿಂದು ಕೋಮುವಾದವನ್ನು ಅದು ಪ್ರತಿಪಾದಿಸುತ್ತಿದ್ದರೂ ಬಹುಸಂಖ್ಯಾತ ಹಿಂದುಗಳ ಬೆಂಬಲಗಳಿಸುವುದು ಸಾಧ್ಯವಿಲ್ಲ ಎಂದು ಬಿಜೆಪಿಗೆ ಚೆನ್ನಾಗಿ ಗೊತ್ತಿದೆ. ಈ ಭೀತಿ ಅದನ್ನು ಕಾಡುತ್ತಿದೆ. ಅಧಿಕಾರಕ್ಕೆ ಬರಲು ಅದು ಯಾರ ಕಾಲು ಹಿಡಿಯಲು ತಯಾರಾಗುತ್ತದೆ. ಶೇಕಡಾ 13ರಷ್ಟಿರುವ ಮುಸಲ್ಮಾನರ ಮತಗಳತ್ತ ಅದು ಜೊಲ್ಲು ಸುರಿಸಲಾರಂಭಿಸಿದೆ. ದೇಶದ 100ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳೇ ನಿರ್ಣಾಯಕ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಮಧ್ಯಪ್ರದೇಶ, ಛತ್ತೀಸ್‌ಘಡ ಮತ್ತು ರಾಜಾಸ್ತಾನದ ಆದಿವಾಸಿ ಮತಗಳನ್ನು



ಬುಟ್ಟಿಗೆ ಹಾಕಿಕೊಂಡಂತೆ ಮುಸಲ್ಮಾನರ ಒಂದು ಭಾಗವನ್ನಾದರೂ ತನ್ನೆಡೆಗೆ ಸೆಳೆದುಕೊಳ್ಳಲು ಬಿಜೆಪಿ ಪ್ರಯಾಸ ಮಾಡುತ್ತಿದೆ. ಪ್ರಧಾನಿ ವಾಜಪೇಯಿ ಮುಸ್ಲಿಂ ಉಡುಗೆ ಧರಿಸಿ ಚುನಾವಣಾ ವೇದಿಕೆಗಳಲ್ಲಿ ಮಿಂಚುತ್ತಾರೆ! ಉಪಪ್ರಧಾನಿ ಆದ್ವಾನಿ ಬುರ್ಖಾ ತೊಟ್ಟ ಮುಸ್ಲಿಂ ಮಹಿಳೆಯರಿಗೆ ತಮ್ಮ ಕರಾಚಿ ಉರ್ದು ಭಾಷೆಯಲ್ಲಿ ಪ್ರವಚನ ನೀಡುತ್ತಾರೆ!

ಬಿಜೆಪಿ ಬದಲಾಗಿದೆ ಎಂದು ಯಾರಾದರೂ ಭಾವಿಸಿದ್ದರೆ ಅದು ದೊಡ್ಡ ಮೋಸ. ಬಿಜೆಪಿ ಆರ್‌ಎಸ್‌ಎಸ್‌ನ ರಾಜಕೀಯ ಆಯುಧ. ಹಿಂದು ರಾಷ್ಟ್ರ ಸ್ಥಾಪನೆ ಅದರ ಗುರಿ. ಮುಸಲ್ಮಾನರಿಗಾಗಲಿ, ಕ್ರಿಶ್ಚಿಯನ್ನರಿಗಾಗಲಿ ಅಲ್ಲಿ ಜಾಗ ಇಲ್ಲ. ಶೂದ್ರರಾಗಲಿ, ಪಂಚಮರಾಗಲಿ ವೇದಗಳ ಕಾಲದಲ್ಲಿ ಇದ್ದಂತೆ ಸವರ್ಣೀಯರ ಕೃಪಾಕಟಾಕ್ಷದಲ್ಲಿ ಬದುಕಬೇಕು. ಇದು ಆರ್.ಎಸ್.ಎಸ್ ಧೋರಣೆ. ಇದರಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಹಾಗಿದ್ದರೆ ಬಿಜೆಪಿ ಹೇಗೆ ಬದಲಾಗಲು ಸಾಧ್ಯ? ಹೋಗಲಿ ಅಯೋಧ್ಯೆ ವಿಷಯದಲ್ಲಿ ಅವರ ಧೋರಣೆ ಬದಲಾಗಿದೆಯಾ? ಇನ್ನೊಂದು ಸಮುದಾಯಕ್ಕೆ ಸೇರಿದ ಅವರ ಪ್ರಾರ್ಥನಾ ಮಂದಿರವನ್ನು ಧ್ವಂಸಗೊಳಿಸಿದ್ದರ ಬಗ್ಗೆ ಬಿಜೆಪಿಗೆ ಪಶ್ಚಾತ್ತಾಪ ಉಂಟಾಗಿದೆಯಾ? ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲಿ ನ್ಯಾಯಾಲಯದ ಉಸ್ತುವಾರಿಯಲ್ಲಿ ಉತ್ಖನನ ಕಾರ್ಯವನ್ನೂ ಪೂರ್ಣಗೊಳಿಸಿದ ನಂತರ ನ್ಯಾಯಾಲಯದ ತೀರ್ಪಿಗೆ ತಲೆಬಾಗಲು ಇವರು ಸಿದ್ಧರಿದ್ದಾರಾ? ಗುಜರಾತ್‌ನಲ್ಲಿ ಇವರು ನಡೆಸಿದ ಭೀಬತ್ಸ ನರಮೇಧಕ್ಕೆ ಇವರು ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾರಾ? ಗರ್ಭಿಣಿಯರ ಹೊಟ್ಟೆ ಸೀಳಿ ಭ್ರೂಣಗಳನ್ನು ಹೊರಗೆಳೆದು ಕತ್ತಿಗೆ ಸಿಕ್ಕಿಸಿ, ಮೆರೆದಾಡಿದ ರಾಕ್ಷಸೀತನಕ್ಕೆ ಇವರು ಕಣ್ಣೀರು ಹಾಕಿದ್ದಾರಾ? ದೇಶದ ಸರ್ವೋಚ್ಚ ನ್ಯಾಯಾಲಯವೇ ಇವರಿಗೆ ಛೀಮಾರಿ ಹಾಕಿದ ನಂತರವೂ ಗುಜರಾತ್‌ನ ಮುಸಲ್ಮಾನರಿಗೆ ನ್ಯಾಯ ಒದಗಿಸಲು ಇವರು ಮುಂದೆ ಬಂದಿದ್ದಾರಾ? ಬಿಜೆಪಿ ಗೊಸುಂಬೆಯಂತೆ ಆಗಾಗ ತನ್ನ ಬಣ್ಣ ಬದಲಾಯಿಸಿಕೊಳ್ಳಬಹುದು. ಅದರೆ ಚಿರತೆ ತನ್ನ ಪಂಜವನ್ನು ಕಳೆದುಕೊಳ್ಳುವುದೆ?

ಬಿಜೆಪಿಗೆ ಮುಸಲ್ಮಾನರ ಮತಗಳಿಗಿಂತಲೂ ಹಿಂದುಗಳ ಮತಗಳ ಚಿಂತೆಯಾಗಿದೆ. ಅರೆಸ್ಸೆಸ್ ಪ್ರತಿಪಾದಿಸುವ ಆಕ್ರಮಣಕಾರಿ ಹಿಂದುತ್ವವನ್ನು ಹಿಂದುಗಳೇ ಒಪ್ಪುವುದಿಲ್ಲ. ಸ್ವಾಮಿ ವಿವೇಕಾನಂದರಂತಹ ಉದಾರವಾದಿ ಸಂತರ ಪ್ರಭಾವಕ್ಕೆ ಒಳಗಾಗದವರು ಹಿಟ್ಲರನ ಆದರ್ಶಗಳಿಗೆ ಆಕರ್ಷಿತರಾಗುವುದಿಲ್ಲ. ಇಂತಹ ಪ್ರಗತಿಶೀಲ ಹಿಂದುಗಳ ಮನಸ್ಸಿನಲ್ಲಿ ದ್ವಂದ್ವ ಹುಟ್ಟಿಸಲು, ಕಾಂಗ್ರೆಸ್ ಮತ್ತು ಇತರ ಪಕ್ಷಗಳೊಂದಿಗೆ ಹೋಗುತ್ತಿರುವ ಹಿಂದುಗಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ಬಿಜೆಪಿ ಮುಸ್ಲಿಂ ಪರ ಮುಖವಾಡವನ್ನು ಹಾಕಿಕೊಳ್ಳುತ್ತಿದೆ. ದೇಶಪ್ರೇಮಿ ಭಾರತೀಯರು, ಅವರು ಹಿಂದುಗಳಾಗಿರಬಹುದು ಅಥವಾ ಹಿಂದುಯೇತರರು, ಬಿಜೆಪಿಯನ್ನು ಅದರ ಕೋಮುವಾದಿ ಸಿದ್ಧಾಂತಕ್ಕಾಗಿ ತಿರಸ್ಕರಿಸುತ್ತಾ ಬಂದಿದ್ದಾರೆ. ಇವರನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಈ ಕಸರತ್ತನ್ನು ನಡೆಸುತ್ತಿದೆ, ಬೆಕ್ಕು ಸನ್ಯಾಸಿಯಾಗಲು ಹೊರಟಂತೆ!

■ ನಿತ್ಯಾನಂದಸ್ವಾಮಿ

ಭಗತ್‌ಸಿಂಗ್ ಸ್ಮರಣೆ



1931 ಮಾರ್ಚ್ 23, ಸಂಜೆಯ ನಸುಬೆಳಕಲ್ಲಿ, ಸೆಲ್‌ನಲ್ಲಿದ್ದ ಕೈದಿಗಳು ತಮ್ಮ ಸೆಲ್‌ಗಳ ಎದುರಿಗಿದ್ದ ದಾರಿಯಿಂದ ಕೇಳಿ ಬರಬಹುದಾದ ಹೆಜ್ಜೆ ಸಪ್ಪಳಕ್ಕಾಗಿ ಕಾದಿದ್ದರು....: ಎರಡು ಗಂಟೆಗಳ ಕಾಲ ಯಾರೊಬ್ಬರೂ ಈ ದಾರಿಯಲ್ಲಿ ನಡೆದು ಬರಲಿಲ್ಲ. ಬೀಗ ಹಾಕಿರುವುದನ್ನು ಮತ್ತೊಮ್ಮೆ ಪರೀಕ್ಷಿಸುವುದಕ್ಕಾಗಿ ಬರುತ್ತಿದ್ದ ವಾರ್ಡನ್ ಕೂಡ ಇವತ್ತು ಇತ್ತ ತಲೆ ಹಾಕಲಿಲ್ಲ.

ಜೈಲಿನ ಗಂಟೆ ಸರಿಯಾಗಿ ಆರು ಬಾರಿಸಿದಾಗ ದೂರದಲ್ಲಿ ಮೇಲುದನಿಯನ್ನು ಕೇಳಿದರು. ಭಾರವಾದ ಬೂಟುಗಳ ಸದ್ದು, ಪರಿಚಿತ ಹಾಡುಗಳ ಪಲ್ಲವಿಗಳು ಅದರೊಂದಿಗೆ ನುಸುಳಿದವು... ಆದರೆ ಆ ಶಬ್ದಗಳು ಆ ಸಂಜೆಯ ನಿಶ್ಯಬ್ದದಲ್ಲಿ ಕರಗಿಹೋದವು... ನಂತರ ಒಂದು ಕ್ಷಣ ಇನ್‌ಕ್ವಿಲಾಬ್ ಜಿಂದಾಬಾದ್, ಹಿಂದೂಸ್ತಾನ್ ಆಜಾದ್ ಹೋ ಘೋಷಣೆಗಳು ಜೈಲಿನ ಈ ಕಗ್ಗಲ್ಲ ಗೋಡೆಗಳನ್ನು ಸೀಳಿಬಂದವು.

ಈಗ ಎಲ್ಲವೂ ಶಾಂತ. ಬಹು ಹೊತ್ತಿನ ನಂತರ ಜೈಲರ್ ಚರತ್‌ಸಿಂಗ್ ಬಂದವನೇ ಜೋರಾಗಿ ಅಳತೊಡಗಿದ. ತನ್ನ 30 ವರ್ಷಗಳ ಸೇವೆಯಲ್ಲಿ ಆತ ಅನೇಕ ಮರಣ ದಂಡನೆಗಳನ್ನು ನೋಡಿದ್ದ ಆದರೆ ಯಾರೊಬ್ಬರೂ ಈ ಮೂವರು ಯುವಕರಂತೆ ಗಲ್ಲುಗಂಭವನ್ನು ಇಷ್ಟು ಧೈರ್ಯವಾಗಿ ನಗುನಗುತ್ತ ಏರಿರಲಿಲ್ಲ.

ಕೊನೆಗೂ ಬ್ರಿಟಿಷರ ಕ್ರೂರ ಆಡಳಿತ ಈ ಮೂರು 'ಹೂಗಳನ್ನು' ಕಿತ್ತು ಹೊಸಕಿ ಹಾಕಿತು. ಆದರೆ 1947 ರ ಆಗಸ್ಟ್ 15 ರಂದು, ಭಗತ್ ಸಿಂಗ್ ರಾಜಗುರು- ಸುಖದೇವ್ ಹುತಾತ್ಮರಾದ 16 ವರ್ಷಗಳ ನಂತರ ಕೊನೆಯ ಇಂಗ್ಲೀಷ್ ಸೈನಿಕ್ ಭಾರತ ಕಡಲತೀರವನ್ನು ತೊರೆಯುವಂತಹ ಸ್ಥಿತಿ ಬಂತು.

ನೇಣುಗಂಭ ಶಿಕ್ಷೆಯನ್ನು ಬ್ರಿಟೀಷ್ ನ್ಯಾಯಾಲಯ ನೀಡಿದಾಗ ಭಗತ್‌ಸಿಂಗ್ ಹೇಳಿದರು. ನಮ್ಮ ಉದ್ದೇಶ ಒಂದಲ್ಲ ಒಂದು ದಿನ ಜಯಗಳಿಸುತ್ತದೆ. ಸ್ವಾತಂತ್ರ್ಯದ ಪಂಜು ಉರಿಯಬೇಕಾದರೆ ಹಲವರು ಪ್ರಾಣತ್ಯಾಗ ಮಾಡಬೇಕಾದುದ್ದು ಅನಿವಾರ್ಯ.

ಭಾರತದ ಸ್ವಾತಂತ್ರ್ಯ ಚಳುವಳಿಯ 'ಕೆಂಪು ಸೂರ್ಯ' ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು ಬ್ರಿಟೀಷರ ನೇಣುಗುಂಭವನ್ನೇರಿ

ಪುಟ 4 ಕ್ಕೆ

ವಿದ್ಯಾರ್ಥಿಗಳಿಂದಲೇ ಉದ್ಘಾಟನೆಗೊಂಡ ಕಾಲೇಜು ಕಟ್ಟಡ

ಕಾಲೇಜ್ ಕಟ್ಟಡಕ್ಕೆ ಹಾಕಲಾಗಿದ್ದ ಬೀಗವನ್ನು ಮುರಿದು ನೂತನ ಕಾಲೇಜ್ ಕಟ್ಟಡವನ್ನು ವಿದ್ಯಾರ್ಥಿಗಳೇ ಉದ್ಘಾಟಿಸಿದ ರೋಚಕ ಘಟನೆ ಹಾವೇರಿ ಜಿಲ್ಲೆಯ ಹಾನಗಲ್ಲಿನಲ್ಲಿ ನಡೆದಿದೆ. ಇಲ್ಲಿಯ ಜನತಾ ಶಿಕ್ಷಣ ಸಹಕಾರಿ ಸಂಸ್ಥೆಯು ನಡೆಸುತ್ತಿರುವ ಶ್ರೀ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ನೂತನ ಕಟ್ಟಡ ಪೂರ್ಣಗೊಂಡು ಐದಾರು ತಿಂಗಳು ಕಳೆದಿದ್ದರೂ ಆಡಳಿತ ಮಂಡಳಿಯಲ್ಲಿನ ಕಾಂಗ್ರೆಸ್ ಮತ್ತು ಸಂಯುಕ್ತ ಜನತಾದಳಕ್ಕೆ ಸೇರಿದ ಸದಸ್ಯರ ನಡುವಿನ ರಾಜಕೀಯ ತಿಕ್ಕಾಟದಿಂದಾಗಿ ಕಟ್ಟಡದ ಉದ್ಘಾಟನೆ ನೆನೆಗುದಿಗೆ ಬಿದ್ದಿತ್ತು. ಕಟ್ಟಡ ಪೂರ್ಣಗೊಂಡಿದ್ದರೂ ಅದರ ಉಪಯೋಗವನ್ನು ಪಡೆಯಲಾಗದೆ ರೋಸಿಹೋದ ವಿದ್ಯಾರ್ಥಿಗಳು ಎಸ್.ಎಫ್.ಐ ನೇತೃತ್ವದಲ್ಲಿ ವಿನೂತನವಾಗಿ ಉದ್ಘಾಟಿಸಿ, ಉಪನ್ಯಾಸಕರನ್ನು ಅಲ್ಲಿಗೇ ಬರುವಂತೆ ಮಾಡಿ ತರಗತಿಗಳನ್ನು ಆರಂಭಿಸಿದ್ದು ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ.

ಕಳೆದ 24 ವರ್ಷಗಳಿಂದ ಕಾಲೇಜ್ ಕಟ್ಟಡ ನಿರ್ಮಾಣದ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ದುಬಾರಿ ಡೊನೇಷನ್ ವಸೂಲಿ ಮಾಡಲಾಗುತ್ತಿತ್ತು. ಎಸ್‌ಎಫ್‌ಐ ಮುಖಂಡ ಹಾಗೂ ಸದರೀ ಕಾಲೇಜಿನ ವಿದ್ಯಾರ್ಥಿಯಾಗಿದ್ದ ವಿಜಯಕುಮಾರ್ ದೊಡ್ಡಮನಿ ಅವರ ನೇತೃತ್ವದಲ್ಲಿ ಕಳೆದ 2 ವರ್ಷಗಳಿಂದ ನಡೆಸಲಾದ ಹೋರಾಟದ ಫಲವಾಗಿ ಆಡಳಿತ ಮಂಡಳಿ ಕಾಲೇಜ್ ಕಟ್ಟಡವನ್ನು ಕಟ್ಟಲಾರಂಭಿಸಿತು. ಎಸ್‌ಎಫ್‌ಐ ಹೋರಾಟದಿಂದ ಸುಮಾರು 3 ಲಕ್ಷ ರೂ.ಬೆಲೆಬಾಳುವ ಕ್ರೀಡಾ ಸಾಮಗ್ರಿಗಳನ್ನು ಸುಮಾರು 50 ಸಾವಿರ ರೂ. ಮೌಲ್ಯದ ಗ್ರಂಥ ಭಂಡಾರವನ್ನು ಪಡೆಯಲು ಸಾಧ್ಯವಾಯಿತು. ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮುಗಿಯುವವರೆಗೂ ಗ್ರಂಥಾಲಯದಿಂದ ಪುಸ್ತಕಗಳು ದೊರೆಯುವಂತಾಯಿತು. ಈ ನಡುವೆ ಸಂಸ್ಥೆಯೊಳಗಿನ ರಾಜಕೀಯ ತಿಕ್ಕಾಟ ಉಲ್ಬಣಗೊಂಡು ಸಂಸ್ಥೆಯ ಆಡಳಿತ ಸರ್ಕಾರದ ವಶವಾಯಿತು. ಆಡಳಿತಾಧಿಕಾರಿಗಳ ನೇಮಕವಾಯಿತು.

ಕಾಲೇಜ್ ಕಟ್ಟಡವನ್ನು ತುರ್ತು ಪೂರ್ಣಗೊಳಿಸಬೇಕೆಂದೂ, ವಿದ್ಯಾರ್ಥಿಗಳಿಂದ ಕಟ್ಟಡ ನಿಧಿ ಸಂಗ್ರಹ ಕೈಬಿಡಬೇಕೆಂದು ಒತ್ತಾಯಿಸಿ ಹೋರಾಟ ನಡೆಸಲಾಯಿತು. ಆಡಳಿತಾಧಿಕಾರಿಗಳು ಸಂಸ್ಥೆಯ ಸರ್ವಸದಸ್ಯರ ಸಭೆ ಕರೆದು ಚರ್ಚಿಸಿದರು. 2003 ಡಿಸೆಂಬರ್ ಕೊನೆಯೊಳಗಾಗಿ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸುವುದಾಗಿಯೂ ಮುಂದಿನ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುತ್ತಿರುವ ಕಟ್ಟಡ ನಿಧಿಯನ್ನು ಅರ್ಧದಷ್ಟು ಕಡಿಮೆ ಮಾಡುವುದಾಗಿಯೂ ಭರವಸೆ ನೀಡಲಾಯಿತು.



ಕಟ್ಟಡದ ಒಂದು ಹಂತದ ಕಾಮಗಾರಿ ಪೂರ್ಣಗೊಂಡು ಕಟ್ಟಡವು ಉಪಯೋಗಕ್ಕೆ ಸಿದ್ಧವಾಯಿತು. ಆದರೆ ಅದರ ಉದ್ಘಾಟನೆಯಾಗಲಿಲ್ಲ. ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಒಂದು ಬಣ ನೂತನ ಕಟ್ಟಡದಲ್ಲಿ ಪಾಠಗಳನ್ನು ಆರಂಭಿಸುವ ಬಗ್ಗೆ ಸಹಮತ ಹೊಂದಿತ್ತು. ಆದರೆ ಇನ್ನೊಂದು ಬಣವು ತಾವು ಅಧಿಕಾರಕ್ಕೆ ಬಂದ ನಂತರವಷ್ಟೇ ಕಾಲೇಜ್ ಕಟ್ಟಡದ ಉದ್ಘಾಟನೆಯಾಗಬೇಕು ಎಂದು ಪಟ್ಟು ಹಿಡಿದಿದ್ದರು. ಸುಸಜ್ಜಿತವಾದ ಕಟ್ಟಡ ಸಿದ್ಧವಾಗಿದ್ದರೂ ಅದರ ಪ್ರಯೋಜನ ವಿದ್ಯಾರ್ಥಿಗಳಿಗೆ ಸಿಗದಂತಾಯಿತು.

ಕಾಲೇಜಿನ ಎಸ್‌ಎಫ್‌ಐ ಘಟಕ ಸಮಸ್ಯೆ ಕುರಿತು ಚರ್ಚೆ ಮಾಡಿ ಕಟ್ಟಡವನ್ನು ವಿದ್ಯಾರ್ಥಿಗಳಿಂದಲೇ ಉದ್ಘಾಟನೆ ಮಾಡಿಸಲು ನಿರ್ಧರಿಸಿತು. ಪ್ರಕರಣ ಕೋರ್ಟಿನಲ್ಲಿದೆ, ನಿಮ್ಮನ್ನು ಜೈಲಿಗೆ ಹಾಕುತ್ತಾರೆ' ಎಂದು ವಿದ್ಯಾರ್ಥಿಗಳನ್ನು ಬೆದರಿಸಲಾಯಿತು. ವಿದ್ಯಾರ್ಥಿಗಳು ಅಂಜಲಿಲ್ಲ. ಅಳುಕಲಿಲ್ಲ. ಫೆಬ್ರವರಿ 9 ರಂದು ವಿದ್ಯಾರ್ಥಿಗಳು ಹಳೆಯ ಕಟ್ಟಡದಿಂದ ಮೆರವಣಿಗೆಯಲ್ಲಿ ಹೊರಟು ಘೋಷಣೆಗಳನ್ನು ಕೂಗುತ್ತಾ ಹೊಸ ಕಟ್ಟಡಕ್ಕೆ ಬಂದರು. ಬೀಗಗಳನ್ನು ಒಡೆದು ಒಳನುಗ್ಗಿ ಅಲ್ಲೇ ಧರಣಿ ಸತ್ಯಾಗ್ರಹ ನಡೆಸಿದರು. ಮರುದಿನವೂ ಹಾಗೇ ಆಯಿತು. ಹೋರಾಟದ ಕಾವೇರುತ್ತಿದ್ದಂತೆ ಆಡಳಿತಾಧಿಕಾರಿಗಳು ಹಾಗೂ ಕಾಲೇಜ್ ಪ್ರಾಚಾರ್ಯರು ಆಗಮಿಸಿದರು. ನೆಲದ ಮೇಲೆ ಕುಳಿತಿದ್ದ ವಿದ್ಯಾರ್ಥಿಗಳಿಗೆ ಉಪನ್ಯಾಸಕರು ಪಾಠ ಹೇಳಲೇಬೇಕಾಯಿತು. ಅದೇ ದಿನ ಹಳೆಯ ಕಟ್ಟಡದಿಂದ ಎಲ್ಲ ಪೀಠೋಪಕರಣಗಳನ್ನು ಹೊಸ ಕಟ್ಟಡಕ್ಕೆ ಸಾಗಿಸಲಾಯಿತು. ವಿದ್ಯಾರ್ಥಿಗಳು ವಿಜಯೋತ್ಸವ ಆಚರಿಸಿದರು. ಪಟ್ಟಭದ್ರರಿಗೆ ಸರಿಯಾಗಿ ಮುಖಭಂಗವಾಯಿತು.

ಎಸ್‌ಎಫ್‌ಐ ಜಿಲ್ಲಾ ಮುಖಂಡರುಗಳಾದ ನಾರಾಯಣ ಕಾಳೆ, ಅಣ್ಣಪ್ಪ ಚಿಕ್ಕಣ್ಣನವರ, ಶಿವರಾಯ ದೇಸಾಯಿ, ಚಂದ್ರ ಅಕ್ಕಿವಳ್ಳಿ, ತಾಲೂಕ ಮುಖಂಡರಾದ ಪ್ರವೀಣ್ ಮಾಳಿ, ಬಿ.ಸಿ.ಪಾಟಿಲ್, ಮೈನುದ್ದೀನ್ ನಂದಿಹಳ್ಳಿ, ಶಿವಪುತ್ರ ಮಣ್ಣವಡ್ಡರ್, ಕೆ.ಟಿ.ಕಲಗೌಡ್ರ ಮತ್ತು ಡಿ.ವೈ.ಎಫ್.ಐ.ನ ತಾಲೂಕ ಸಂಚಾಲಕರಾದ ನೀಲಪ್ಪ ವಿ.ಡಿ.ಮೊದಲಾದವರು ಹೋರಾಟದ ನೇತೃತ್ವ ವಹಿಸಿದ್ದರು.

ವರದಿ - **ಅಣ್ಣಪ್ಪ ಚಿಕ್ಕಣ್ಣನವರ**
ಹಾನಗಲ್

ಭಗತ್‌ಸಿಂಗ್ ಸ್ಮರಣೆ

ಪುಟ 3 ರಿಂದ

ಈಗ 74 ವರ್ಷಗಳು ಕಳೆದವು. ಆದರೆ ಇಂತಹ ಅಪಾರವಾದ ತ್ಯಾಗಬಲಿದಾನಗಳನ್ನು ಸೌಜನ್ಯಕ್ಕಾದರೂ ನೆನಪಿಸಿಕೊಳ್ಳುವಷ್ಟು ಪುರಸೊತ್ತು ನಮ್ಮನ್ನು ಆಳುವ ಕೇಂದ್ರ ಸರ್ಕಾರಕ್ಕಿಲ್ಲ. ಬ್ರಿಟೀಷ್ ಆಳರಸರ ಮುಂದೆ ಕ್ಷಮಾಪಣೆಯ ಬೇಡಿಕೆಗಳನ್ನಿಟ್ಟು ಜೈಲಿನಿಂದ ಹೊರಬಂದ. ಸಾವರ್‌ಕರ್‌ನ ಆಳೆತ್ತರ ಫೋಟೋವನ್ನು ಸೆಂಟ್ರಲ್ ಹಾಲ್‌ನಲ್ಲಿ ಹಾಕುವ ಮೂಲಕ ಬಿಜೆಪಿ ಸರ್ಕಾರ ದೇಶಕ್ಕಾಗಿ, ಅಪಾರವಾದ ತ್ಯಾಗ - ಬಲಿದಾನಗಳನ್ನು ಮಾಡಿದ ದೇಶಪ್ರೇಮಿಗಳಿಗೆ ಅವಮಾನ ಮಾಡಿದೆ. ಇನ್ನು ನಮ್ಮ ಸುದ್ದಿಮಾಧ್ಯಮಗಳು ಸಂವೇದನಾ ದೃಷ್ಟಿಕೋನವನ್ನು ಮರೆಯುತ್ತಿವೆ. ಸಿಕ್ಕಿದ್ದಕ್ಕೆಲ್ಲಾ ಬಣ್ಣ ಹಚ್ಚಿ ಪ್ರಚಾರ ನೀಡುವ ಇವುಗಳು ದೇಶಕ್ಕಾಗಿ ತ್ಯಾಗ ಮಾಡಿದ ಜನರನ್ನು ಗೌರವಿಸುವ, ಅವರಿಗಾಗಿ ತಮ್ಮಲ್ಲಿ ಸ್ಥಾನವನ್ನು ನೀಡದಂತಹ ಮಟ್ಟಕ್ಕೆ ಅವು ಇಳಿದು ಬಿಟ್ಟಿವೆ.

ಆಳುವ ಸರ್ಕಾರ, ಸುದ್ದಿ- ಮಾಧ್ಯಮಗಳು 'ಭಗತ್‌ಸಿಂಗ್ ಮತ್ತು ಸಂಗಾತಿಗಳ-ಬಲಿದಾನವನ್ನು ನಿರ್ಲಕ್ಷಿಸಿದ್ದರೂ ದೇಶದಲ್ಲಿ ಬದಲಾವಣೆಗಾಗಿ ಕಾತರಿಸುವ ಕೋಟ್ಯಾಂತರ ಮನಸ್ಸುಗಳು ಮಾತ್ರ ಮಾರ್ಚ್ - 23 ರಂದು ಕೋಟಿ ನಮನಗಳನ್ನು ಸಲ್ಲಿಸುವುದರಲ್ಲಿ ಹಿಂದೆ ಬೀಳಲಿಲ್ಲ.

ಭಾವನಾಜೀವಿಯಲ್ಲ ಭಗತ್‌ಸಿಂಗ್

.ಅಸಮಾನತೆಯ ಬುನಾದಿಯ ಮೇಲೆ ನಿಂತಿರುವ ಈ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾವಣೆಗೊಳಪಡಿಸುವುದೇ ಭಗತ್‌ಸಿಂಗ್ ಅವರ ಉದ್ದೇಶವಾಗಿತ್ತು. ಭಗತ್‌ಸಿಂಗ್, ಒಬ್ಬ ಭಾವನಾಜೀವಿಯಾಗಿರಲಿಲ್ಲ. ಬ್ರಿಟೀಷ್ ಸಾಮ್ರಾಜ್ಯಶಾಹಿಯನ್ನು ಹೊಡೆದೋಡಿಸಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದಷ್ಟೇ ಕ್ರಾಂತಿಕಾರಿ ಹೋರಾಟದ ಸಾಫಲ್ಯವಲ್ಲವೆಂಬುದನ್ನು ಅವರು ಸ್ಪಷ್ಟವಾಗಿ ಮನಗಂಡಿದ್ದರು. ಮಾತ್ರವಲ್ಲ ರೈತ-ಕಾರ್ಮಿಕರ ಸಖ್ಯತೆಯೊಂದಿಗೆ ಸಮಾಜವಾದಿ ವ್ಯವಸ್ಥೆ ರಚನೆಯೇ ನಮ್ಮ ಅಂತಿಮ ಧ್ಯೇಯವೆಂದು ಅವರು ಸ್ಥಾಪಿಸಿದ ನೌಜವಾನ್ ಭಾರತ ಸಭಾ ಹಾಗೂ ಅನಂತರ ರಚನೆಯಾದ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯ ಕಾರ್ಯಕ್ರಮಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

'ಕ್ರಾಂತಿ' ಎಂದರೆ ರಕ್ತಗೆಂಪಿನ ಸಂಘರ್ಷವೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ವೈಯಕ್ತಿಕ ಜಿದ್ದಿಗೂ ಅಲ್ಲಿ ಅವಕಾಶವಿಲ್ಲ ಮತ್ತು ಕ್ರಾಂತಿ ಎಂದರೆ ಬಾಂಬು ಮತ್ತು ಪಿಸ್ತೂಲುಗಳ ಆರಾಧನೆಯೂ ಅಲ್ಲ ಎನ್ನುವುದನ್ನು 'ಭಗತ್‌ಸಿಂಗ್' ಸ್ಪಷ್ಟವಾಗಿ ಮನಗಂಡಿದ್ದರು. 'ಕ್ರಾಂತಿ ಎಂದರೆ ಸ್ಪಷ್ಟವಾಗಿ ಅನ್ಯಾಯದ ಬುನಾದಿಯ ಮೇಲೆ ರಚಿತವಾಗಿರುವ ಇಂದಿನ ವ್ಯವಸ್ಥೆ ಬದಲಾಗಬೇಕು. ಉತ್ಪಾದಕರು ಅಥವಾ ದುಡಿಮೆಗಾರರು ಸಮಾಜದ ಅತ್ಯಂತ ಅವ್ಯಾಕ ಅಂಗವಾಗಿದ್ದಾಗ್ಯೂ ಶೋಷಕರಿಂದ ವಂಚಿಸಲ್ಪಡುತ್ತಿದ್ದಾರೆ. ಅವರ ದುಡಿಮೆಯ ಫಲ ಅವರಿಗೆ ದಕ್ಕುತ್ತಿಲ್ಲ ಅವರ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಧಾನ್ಯ ಬೆಳೆಯುವ ರೈತ ತನ್ನ ಕುಟುಂಬದೊಡನೆ ಹಸಿವಿನಿಂದ ಸಾಯುತ್ತಿದ್ದಾನೆ. ನೇಯ್ಗೆಗಾರನಿಗೆ ತನ್ನ ಶರೀರ ಮುಚ್ಚಿಕೊಳ್ಳಲು ಕನಿಷ್ಠ ಬಟ್ಟೆಯಿಲ್ಲ. ಕಮ್ಮಾರರು - ಬಡಗಿಗಳು ಭವ್ಯವಾದ ಸೌಧಗಳನ್ನು ಕಟ್ಟುತ್ತಿದ್ದರೂ ಕೊಳಚೆ ಪ್ರದೇಶಗಳಲ್ಲಿ ಜಾತಿಭ್ರಷ್ಟರಾಗಿ ಉಳಿದಿದ್ದಾರೆ. ಸಮಾಜದ ಪರತಂತ್ರ ಜೀವಿಗಳಾದ ಬಂಡವಾಳಿಗರು ಮತ್ತು ಸಿರಿವಂತರು ಮನಸೋ ಇಚ್ಛೆಯಂತೆ ಶೋಷಣೆ ಮಾಡಿ ಗಳಿಸಿದ್ದನ್ನು ತಿಂದುಂಡು ಮೆರೆಯುತ್ತಿರುತ್ತಾರೆ.

ಈ ಅಸಮಾನತೆಯ ಸಮಾಜವನ್ನು ಕೆಡವಿ ಅದರ ಸ್ಥಾನದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ಸಮಾಜವಾದಿ ವ್ಯವಸ್ಥೆಯನ್ನು ರಚಿಸುವ ಗುರಿ ಭಗತ್‌ಸಿಂಗ್ ಅವರದಾಗಿತ್ತು.

ಈ ಕಾರಣದಿಂದಾಗಿ ಸ್ವಾತಂತ್ರ್ಯ ಗಳಿಸಿ 57 ವರ್ಷಗಳ ನಂತರವೂ ಭಗತ್‌ಸಿಂಗ್ ಕೋಟ್ಯಾಂತರ ಜನರಿಗೆ ಹತ್ತಿರವಾಗುತ್ತಾರೆ. ವಿಶೇಷವಾಗಿ ಶಿಕ್ಷಣ-ಉದ್ಯೋಗ ಹಾಗೂ ಸಮಾನತೆ ಅವಕಾಶಗಳು ಮರೀಚಿಕೆಯಾಗಿ ಕೋಟ್ಯಾಂತರ ಯುವಜನರು ನಿರುದ್ಯೋಗದಿಂದ ನರಳುತ್ತಿರುವಾಗ, ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತೆ ತನ್ನ ಕರಾಳ ಬಾಹುಗಳನ್ನು ಚಾಚಿ ದೇಶದ ಸಾರ್ವಭೌಮತ್ವಕ್ಕೆ ಗಂಭೀರ ಅಪಾಯವನ್ನೊಡ್ಡಿರುವಾಗ ಮತ್ತು ಭಾರತದ ಆಳುವ ವರ್ಗಗಳು ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಣಿತಕ್ಕೆ ಹೆಜ್ಜೆ ಹಾಕುತ್ತಿರುವ ಈ ಸನ್ನಿವೇಶದಲ್ಲಿ ಭಗತ್‌ಸಿಂಗ್ ಆದರ್ಶಗಳು ಅವರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳ ಮುಂದುವರಿಕೆ ಇವತ್ತಿನ ಅನಿವಾರ್ಯವಾಗಿದ. ಅದಕ್ಕಾಗಿ ಶ್ರಮಿಸುವ ಮತ್ತು ಜನಸಮುದಾಯವನ್ನು ಒಂದುಗೂಡಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

■ **ಕೆ.ಮಹಾಂತೇಶ್**

ತುರ್ತುಪರಿಸ್ಥಿತಿಯಲ್ಲಿ ಆರ್‌ಎಸ್‌ಎಸ್

ಪುಟ 2 ರಿಂದ


ಹೆಚ್ಚಾಗಿತ್ತು. ಈ ಪರಿಸ್ಥಿತಿಯ ದುರ್ಲಾಭ ಪಡೆದು ಆರ್.ಎಸ್.ಎಸ್.ನವರು ತಮ್ಮ ಸಂಸ್ಕೃತಿಯನ್ನು ಇತರರ ಮೇಲೆ ಹೇರಲು ಸತತ ಪ್ರಯತ್ನ ನಡೆಸುತ್ತಿದ್ದರೇ ವಿನಹ ಪ್ರಜಾತಂತ್ರದ ಉಳಿವಿನ ಬಗ್ಗೆಯಾಗಲೀ ಕಾಳಜಿ ವಹಿಸುತ್ತಿರಲಿಲ್ಲ. ಜನತಾ ಸಂಘರ್ಷ ಸಮಿತಿಯ ಹೆಸರಿನಲ್ಲಿ ಸತ್ಯಾಗ್ರಹ ನಡೆಸಿ ಜೈಲಿಗೆ ಹೋದವರು ಜೈಲಿನೊಳಗೆ ಆರ್.ಎಸ್.ಎಸ್. ಚಟುವಟಿಕೆಯನ್ನೇ ನಡೆಸುತ್ತಿದ್ದರು. ಬೆಂಗಳೂರು ಜೈಲಿನಲ್ಲೊಮ್ಮೆ ಜಯಪ್ರಕಾಶರ ಆರೋಗ್ಯ ಸುಧಾರಣೆಗೆ ಪ್ರಾರ್ಥನೆ ಸಲ್ಲಿಸಲು ಎಲ್ಲರೂ ದೇವಸ್ಥಾನದಲ್ಲಿ ಸೇರಬೇಕೆಂದು ಕರೆಬಂತು, ಎಲ್ಲರೂ ದೇವಸ್ಥಾನದಲ್ಲಿ ಸೇರಿದೆವು. ಹೀಗೆ ಸೇರಿದವರಲ್ಲಿ ಹಿಂದೂ, ಮುಸ್ಲಿಂ ಹಾಗೂ ವಿವಿಧ ಪಕ್ಷಗಳಿಗೆ, ಸಂಘ ಸಂಸ್ಥೆಗಳಿಗೆ ಸೇರಿದವರಿದ್ದರು. ಎಲ್ಲರೂ ದೇವಸ್ಥಾನದಲ್ಲಿ ಸೇರಿದ ಮೇಲೆ ಸೀಟಿ ಊದಿ ಆರ್.ಎಸ್.ಎಸ್. ಕಾರ್ಯಕ್ರಮ ನಡೆಸಲಾಯಿತು. ಆರ್.ಎಸ್.ಎಸ್.ನ ಪ್ರಾರ್ಥನೆಯನ್ನು ಎಲ್ಲರ ಮೇಲೆ ಹೇರಲಾಯಿತು. ಜೈಲಿನಲ್ಲಿ ಇವರು ನಡೆಸುತ್ತಿದ್ದದು ಇಂತದೇ ಕಾರ್ಯಕ್ರಮಗಳಾಗಿದ್ದವು. ಕಡಿಮೆ ಸಂಖ್ಯೆಯಲ್ಲಿದ್ದ ಇತರರು ಒಳಗಿಂದೊಳಗೆ ಗೊಣಗುತ್ತಾ, ಇವರ ಇಂಥ ಚಿತ್ರಹಿಂಸೆಯನ್ನು ಸಹಿಸಿಕೊಂಡು ಸುಮ್ಮನಾಗುತ್ತಿದ್ದರು.


ತುರ್ತು ಪರಿಸ್ಥಿತಿಯಲ್ಲಿ ಬಳ್ಳಾರಿ ಕೇಂದ್ರ ಬಂಧಿಖಾನೆ ಸೇರಿದ ಮೊದಲ ರಾಜಕೀಯ ಖೈದಿ ನಾನಾಗಿದ್ದೆ. ನಾನು ಸೇರಿದ ಮೇಲೆ ಶಿವಮೊಗ್ಗ, ಧಾರವಾಡ ಹಾಗೂ ಗುಲಬರ್ಗಾ ಕಡೆಯವರು ಹಲವಾರು ಜನ ಬಂದು ಸೇರಿದರು. ಇವರಲ್ಲಿ ಜನಸಂಘದವರು, ಸಮಾಜ ವಾದಿಗಳು, ಆನಂದಮಾರ್ಗಿಗಳು, ಕಳ್ಳಸಾಗಾಣಿಕೆಯವರು, ರೌಡಿಗಳು ಹೀಗೆ ಎಲ್ಲಾ ತರಹ ಮೀಸಾ ಬಂಧಿಗಳು ಒಂದೇ ಅಡುಗೆಯಲ್ಲಿ ಊಟ ಮಾಡಿಕೊಂಡು, ಹಲವಾರು ಚರ್ಚಾಕೂಟಗಳನ್ನು ನಡೆಸಿಕೊಂಡು ಒಟ್ಟಿಗೆ ಇದ್ದೆವು, ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲ. ಕೆಲವು ದಿವಸಗಳ ನಂತರ ನನ್ನನ್ನು ಬೆಂಗಳೂರು ಜೈಲಿಗೆ ವರ್ಗಾಯಿಸಲಾಯಿತು. ನಂತರ ಕೆಲವು ಆರ್.ಎಸ್.ಎಸ್. ಮುಖಂಡರುಗಳು ಅಲ್ಲಿ ಆರ್.ಎಸ್.ಎಸ್. ಚಟುವಟಿಕೆ ಪ್ರಾರಂಭಿಸಿದರು. ಎಲ್ಲರೂ ಮಂತ್ರ ಹೇಳಿ ಊಟ ಮಾಡಬೇಕೆಂದು ನಿರ್ಬಂಧ ಹೇರಲಾಯಿತು. ಹೀಗಾಗಿ ಬಳ್ಳಾರಿ ಜೈಲಿನಲ್ಲಿ ಇದ್ದ ಬೇರೆ ಬೇರೆ ವರ್ಗದ ಮೀಸಾ ಬಂಧಿಗಳು ಬೇರೆ ಬೇರೆ ಅಡುಗೆ ಪ್ರಾರಂಭಿಸಬೇಕಾಯಿತೆಂದು ನನಗೆ ವರದಿಗಳು ಬಂದವು. ಆರ್.ಎಸ್.ಎಸ್.ನವರು ತಮ್ಮ ಸಂಸ್ಕೃತಿಯನ್ನು ಬಿಟ್ಟು ಬೇರಾವ ಸಂಸ್ಕೃತಿಯನ್ನು ಸಹಿಸುವವರಲ್ಲವೆಂಬುದಕ್ಕೆ ಇದೊಂದು ಉದಾಹರಣೆ.

ಕೋಳಿ ಕೂಗದಿದ್ದರೆ ಬೆಳಗಾಗುವುದಿಲ್ಲವೇ?
ತಮಾಷೆಯೆಂದರೆ ತಾನಿಲ್ಲದಿದ್ದರೆ ಭಾರತಕ್ಕೆ
ಬೆಳಗಾಗುವುದಿಲ್ಲ ಎನ್ನುತ್ತಿದ್ದಾರೆ ವಾಜಪೇಯಿ!

ಎಂತಾ ತಮಾಷೆ!

ಕಳೆದ ಆರು ವರ್ಷಗಳಲ್ಲಿ 'ಅಪೂರ್ಣ'ವಾಗಿ ಉಳಿದ ಯೋಜನೆಗಳನ್ನು ಪೂರ್ಣಗೊಳಿಸಲಿಕ್ಕಾಗಿ ಪ್ರಧಾನಮಂತ್ರಿ ವಾಜಪೇಯಿಯವರ ಸರ್ಕಾರವನ್ನು ಮತ್ತೆ ಚುನಾಯಿಸಬೇಕಂತೆ! ತಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆರು ದೀರ್ಘ ವರ್ಷಗಳು ಅವರಿಗೆ ಸಾಕಾಗಲಿಲ್ಲವೇ ಎಂದು ನೀವು ಕೇಳಬಹುದು. ಆದರೆ ಅದಕ್ಕಿಂತಲೂ ಅನಿಷ್ಟಕಾರಿಯೆಂದರೆ ಈ 'ಅಪೂರ್ಣ'ವಾಗಿ ಉಳಿದಿರುವ ಕೆಲವು ಕೆಲಸಗಳಿಂದಾಗಿಯೇ ಅವರ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬಾರದು.






ಈ ಆರು ವರ್ಷಗಳಲ್ಲಿ ನಮ್ಮ ಭಾರತೀಯ ಗಣತಂತ್ರದ ಧರ್ಮ ನಿರಪೇಕ್ಷ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡಲು ವ್ಯವಸ್ಥಿತ ಪ್ರಯತ್ನಗಳು ನಡೆದವು. ನಮ್ಮ ಸಂಸದೀಯ ವ್ಯವಸ್ಥೆಯಲ್ಲಿನ ಪ್ರತಿಯೊಂದು ಸಂಸ್ಥೆಯನ್ನು ಬುಡಮೇಲು ಮಾಡಲಾಗಿದೆ, ಪ್ರತಿಯೊಂದು ಕಚೇರಿಯಲ್ಲಿ ಆರ್‌ಎಸ್‌ಎಸ್‌ನ್ನು ನುಗ್ಗಿಸಿ ಕೋಮುವಾದಿ ಅಜೆಂಡಾದ ಪ್ರತಿಪಾದನೆ ನಡೆದಿದೆ. ಆದರೆ ವಾಜಪೇಯಿ ಕಂಪನಿ ಎಷ್ಟೇ ಗಂಭೀರ ಪ್ರಯತ್ನ ನಡೆಸಿದರೂ ಯೋಜನೆಗಳು ಸಂಪೂರ್ಣ ಸಫಲವಾಗಿಲ್ಲ. ಆದ್ದರಿಂದ ಇದು ಅಂದರೆ ಭಾರತವನ್ನು ಒಂದು ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ ಆರ್‌ಎಸ್‌ಎಸ್‌ನ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಯೋಜನೆ 'ಅಪೂರ್ಣ'ವಾಗಿ ಉಳಿದಿದೆ. ಈ ದುಷ್ಟ ಅಜೆಂಡಾವನ್ನು ಪೂರ್ಣಗೊಳಿಸಲು ಇನ್ನೊಂದು ಅವಕಾಶವನ್ನು ಖಂಡಿತಾ ಭಾರತದ ಜನತೆ ಕೊಡುವುದಿಲ್ಲ.

ಈ ಆರು ವರ್ಷಗಳಲ್ಲಿ ಸರ್ಕಾರ ವ್ಯವಸ್ಥಿತವಾಗಿ ಆರ್ಥಿಕ ಆಸ್ತಿಗಳನ್ನು ಅತೀ ಅಗ್ಗಕ್ಕೆ ಮಾರಿ ತಿಂದಿದೆ ಹಾಗೂ ಬಹುಪಾಲು ಭಾರತೀಯರ ಮೇಲೆ ಹಿಂದೆಂದೂ ಕಾಣದಷ್ಟು ಹೊರೆಗಳನ್ನು ಹಾಕಿದೆ. ಇಂತಹ ಸರ್ಕಾರಕ್ಕೆ ಇನ್ನೊಂದು ಅವಕಾಶ ಕೊಡುವುದೆಂದರೆ ದೇಶದ ಸಂಪೂರ್ಣ ಮಾರಾಟಕ್ಕೆ, ಜನಗಳ ಬದುಕನ್ನು ಸಂಪೂರ್ಣ ನಾಶ ಮಾಡುವುದಕ್ಕೆ ಅವಕಾಶ ಕೊಟ್ಟಂತೆಯೇ?

ಇನ್ನೂ ತಮಾಷೆಯ ಸಂಗತಿಯೆಂದರೆ ತಾನಿಲ್ಲದಿದ್ದರೆ ದೇಶದಲ್ಲಿ 'ಅವ್ಯವಸ್ಥೆ' ಉಂಟಾಗುತ್ತದೆ ಎಂಬ ಕಾರಣಕ್ಕಾಗಿ ಪ್ರಧಾನ ಮಂತ್ರಿಗಳು ಚುನಾವಣಾ ಕಣದಲ್ಲಿ ಇದ್ದಾರಂತೆ! ಅವರಿಗೆ ತನ್ನ ಬಗ್ಗೆ ಏನೇ ಭ್ರಮೆಯಿರಲಿ, ಅವರ ಪಕ್ಷವಂತೂ ಅವರ ಇಮೇಜನ್ನು ಉತ್ಪ್ರೇಕ್ಷಿಸಿ ಚುನಾವಣಾ ಲಾಭ ಗಿಟ್ಟಿಸಲು ಪ್ರಯತ್ನಿಸುತ್ತಿರುವುದಂತೂ ಖಂಡಿತ. ಆದರೆ ಇದು ಅಸಹ್ಯಕರವಾದ 'ಭಾರತ ಪ್ರಕಾಶಿಸುತ್ತಿದೆ' ಜಾಹೀರಾತುಗಳಿಗೆ ತದ್ವಿರುದ್ಧವಾಗುವುದಿಲ್ಲವೇ? ಈ ಸರ್ಕಾರದ ಆರು ವರ್ಷಗಳ ನಂತರ ಭಾರತ ಈಗಿನಷ್ಟು ಹಿತಾನುಭವವನ್ನು ಹಿಂದೆಂದೂ ಪಡೆದಿರಲಿಲ್ಲವಾದರೆ, ಹಿಂದೆಂದೂ ಇಷ್ಟೊಂದು ಬಲಿಷ್ಟವಾಗಿರದಿದ್ದರೆ, ಅವ್ಯವಸ್ಥೆ ಯಾಕೆ ಬರಬೇಕು ಶ್ರೀಮಾನ್ ವಾಜಪೇಯಿಯವರೇ? ಸ್ವತಃ ವಾಜಪೇಯಿಯವರಿಗೆ ತಮ್ಮ ಸರ್ಕಾರದ ಸಾಧನೆಗಳ ಬಗ್ಗೆ ನಂಬಿಕೆ ಇಲ್ಲವೇ? ಎಂತಹಾ ತಮಾಷೆ!

ತಾನಿಲ್ಲದೆ ಏನೂ ಇಲ್ಲ ಎಂದು ನಂಬಲೂ ಪ್ರತಿಯೊಬ್ಬ ವ್ಯಕ್ತಿಗೂ ಹಕ್ಕಿದೆಯಾದರೂ, ವಾಜಪೇಯಿ ಯವರ ಮಾತುಗಳು ಫ್ರೆಂಚ್ ದೊರೆ 15ನೇ ಲೂಯಿಯನ್ನು ನೆನಪಿಸುತ್ತದೆ. ಆತ "ನನ್ನ ನಂತರ ಪ್ರಳಯ" ಎಂದಿದ್ದ. ಆತನ ರಾಜ್ಯಭಾರ ಬೋರ್ಬೊನ್ ಸಾಮ್ರಾಜ್ಯದ ವಿಘಟನೆಗೆ ಅಡಿಗಲ್ಲು ಹಾಕಿತು. ಫ್ರೆಂಚ್ ಕ್ರಾಂತಿ ಅವನ ಉತ್ತರಾಧಿಕಾರಿ 16ನೇ ಲೂಯಿಯ ಸಮಯದಲ್ಲಿ ನಡೆದರೂ ಫ್ರಾನ್ಸ್‌ನಲ್ಲಿ ಅರಸೊತ್ತಿಗೆಯನ್ನು ಕಳಚಿ ಹಾಕಿ ಗಣತಂತ್ರ ಉದಯಿಸಲು ಅಡಿಗಲ್ಲು ಹಾಕಿದ್ದು 15ನೇ ಲೂಯಿ ಎಂದು ಪರಿಗಣಿಸಲಾಗುತ್ತದೆ. 15ನೇ ಲೂಯಿಗೆ 'ಪ್ರಳಯ'ವಾಗಿದ್ದದ್ದು ಮಾನವಕುಲಕ್ಕೆ ಒಂದು ಮುನ್ನಡೆಯಾಯಿತು - ಒಂದು ಪ್ರಜಾಸತ್ತಾತ್ಮಕ ಗಣತಂತ್ರ ಸಾಮಾಜಿಕ ವ್ಯವಸ್ಥೆಯತ್ತ ಮುನ್ನಡೆ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಘೋಷಣೆಗಳನ್ನು ನೀಡಿದ ಫ್ರೆಂಚ್ ಕ್ರಾಂತಿ ಮಾನವ ನಾಗರಿಕತೆಯ ವಿಕಾಸದಲ್ಲಿ ಒಂದು ಗುಣಾತ್ಮಕ ಪ್ರಗತಿಪರ ಪಲ್ಲಟವಾಯಿತು.

ಇದೇ ರೀತಿ ವಾಜಪೇಯಿ ಹೇಳುವ ಅವ್ಯವಸ್ಥೆ ಈಗ ವಿಪರೀತ ಸೆಳೆತಕ್ಕೊಳಗಾಗಿರುವ ಭಾರತೀಯ ಗಣತಂತ್ರದ ಕ್ರೋಢೀಕರಣದ ಆಂದೋಲನವೇ ಆಗಬಹುದು. ಫ್ರೆಂಚ್ ಗಣತಂತ್ರಕ್ಕಾಗಿ ಲೂಯಿಯ ಆಳ್ವಿಕೆಯನ್ನು ಕೊನೆಗೊಳಿಸಿ ಅವನತಿಶೀಲ ಪಾಳೆಯಗಾರಿ ಅರಸೊತ್ತಿಗೆಯನ್ನು ನಾಶ ಮಾಡುವುದು ಅಗತ್ಯವಾದಂತೆ ಭಾರತದಲ್ಲೂ ಭಾರತೀಯ ಗಣತಂತ್ರ ವನ್ನು ಕ್ರೋಢೀಕರಿಸಬೇಕಾದರೆ ವಾಜಪೇಯಿ ಕಂಪನಿಯ ಆಳ್ವಿಕೆಯನ್ನು ಕೊನೆಗೊಳಿಸಬೇಕು.



ಅಡ್ವಾಣಿಯವರ 'ರಥಯಾತ್ರೆ'ಯಲ್ಲಿ ಅಯೋಧ್ಯಾ ವಿವಾದದ ಬಗ್ಗೆ ಹೆಚ್ಚಿಚ್ಚು ಒತ್ತು ಕೊಡುತ್ತಿರುವುದರ ಹಿನ್ನೆಲೆಯಲ್ಲಿ ಇದು ಇನ್ನಷ್ಟು ಅಗತ್ಯ. ಹಿಂದೀ ಭಾಷಿಕ ಪ್ರದೇಶವನ್ನು ತಲುಪುತ್ತಿರುವಂತೆ ಈ ಉಪ ಪ್ರಧಾನಮಂತ್ರಿಗಳು ಅಯೋಧ್ಯಾ ವಿವಾದದ ಮೇಲೆ ಹೆಚ್ಚಿಚ್ಚು ಗಮನ ಕೇಂದ್ರೀಕರಿಸುತ್ತಿದ್ದಾರೆ. ಅಯೋಧ್ಯೆಯಲ್ಲಿ ವಿವಾದಿತ ಸ್ಥಳದಲ್ಲಿ ರಾಮದೇವಸ್ಥಾನ ಕಟ್ಟಲು ಅವರ ಮತ ಕೇಳುತ್ತಿದ್ದಾರೆ ಮತ್ತು ಮಹಾತ್ಮ ಗಾಂಧಿಯವರ 'ರಾಮರಾಜ್ಯ' ಘೋಷಣೆಯ ಆಧಾರದಲ್ಲಿ ಭಾರತ ದೇವಸ್ಥಾನ ಕಟ್ಟಲು ಮತ ಕೇಳುತ್ತಿದ್ದಾರೆ. ಹತ್ಯೆ ನಡೆಸುವ ಆರ್‌ಎಸ್‌ಎಸ್‌ನ ಪಿತೂರಿಗೆ ಬಲಿಯಾದ ಗಾಂಧೀಜಿಯ ಹೆಸರನ್ನೇ ಉದ್ದರಿಸಿ ಬಿಜೆಪಿ ಚುನಾವಣಾ ಬೆಂಬಲವನ್ನು ಗಿಟ್ಟಿಸಲು ಎಂತಹ ನೀಚ ಮಟ್ಟಕ್ಕೂ ಇಳಿಯಲು ಸಿದ್ಧ ಎಂಬುದನ್ನು ತೋರಿಸಿದೆ.

ಅದೇನೇ ಇರಲಿ, ಮಹಾತ್ಮ ಗಾಂಧಿಯವರು ತಮ್ಮ 'ರಾಮರಾಜ್ಯ' ದ ಪರಿಕಲ್ಪನೆಯ ಬಗ್ಗೆ ಏನು ಹೇಳಿದ್ದರು ಎಂಬುದನ್ನು ನೆನಪಿಸಿಕೊಳ್ಳೋಣ -"ರಾಮರಾಜ್ಯವೆಂದರೆ ಹಿಂದೂಗಳ ರಾಜ್ಯ ಎಂದರ್ಥ ಎಂಬ ತಪ್ಪನ್ನು ಯಾರೂ ಮಾಡದಿರಲಿ. ನನ್ನ ರಾಮ ಎಂಬುದು ಖುದಾ ಅಥವಾ ಗಾಡ್‌ನ ಇನ್ನೊಂದು ಹೆಸರು. ನನಗೆ ಖುದಾಯಿ ರಾಜ್, ಕಿಂಗ್‌ಡಂ ಆಫ್ ಗಾಡ್ ಅಂದರೂ ಅದೇ" ಎಂದಿದ್ದರು ಅವರು. ಇದು ಆರ್‌ಎಸ್‌ಎಸ್ ನ 'ಹಿಂದೂರಾಷ್ಟ್ರ ಎಂಬ ಫ್ಯಾಸಿಸ್ಟ್ ಮಾದರಿಯ ಕಣ್ಣೋಟಕ್ಕೆ ತದ್ವಿರುದ್ಧವಾದದ್ದು. ಸರ್ಕಾರದಲ್ಲಿ ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿ ಬಿಜೆಪಿ ಪ್ರತಿಪಾದಿಸುತ್ತಿರುವುದು ಇದನ್ನೇ. ಗಾಂಧೀಜಿಯ ಪರಿಕಲ್ಪನೆಗೆ ಸಂಪೂರ್ಣವಾಗಿ ವಿರುದ್ಧವಾದ ಅಜೆಂಡಾವನ್ನು ಗಾಂಧೀಜಿಯ ಹೆಸರಲ್ಲೇ ಮುಂದಿಡುವುದಕ್ಕಿಂತ ದೊಡ್ಡ ಮೋಸ ಬೇರೇನಿರಲು ಸಾಧ್ಯ?

ಭಾರತೀಯ ಗಣತಂತ್ರವನ್ನು ನಿಜವಾಗಿಯೂ ಮತ್ತು ಪೂರ್ಣವಾಗಿಯೂ ಒಂದು ಧರ್ಮನಿರಪೇಕ್ಷ ಗಣತಂತ್ರವಾಗಿ ಕ್ರೋಢೀಕರಿಸಬೇಕಾದರೆ ಬಿಜೆಪಿಯನ್ನು ಅಧಿಕಾರದಿಂದ ಎಷ್ಟು ಸಾಧ್ಯವೋ ಅಷ್ಟು ದೂರ ಇಡಬೇಕು. ○

NDTV ಸಮೀಕ್ಷೆ - ಎಷ್ಟು ಸರಿ?

ಎನ್‌ಡಿಟಿವಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಎ.ಸಿ.ನೀಲ್ಸನ್ ಎಂಬ ಏಜೆನ್ಸಿಯ ನೇತೃತ್ವದಲ್ಲಿ ನಡೆಸಿದ ಚುನಾವಣಾ ಸಮೀಕ್ಷೆಯ ಫಲಿತಾಂಶ ಹೊರಬಿದ್ದಿದೆ. ಇದುವರೆಗಿನ ಚುನಾವಣಾ ಸಮೀಕ್ಷೆಗಳ ಪೈಕಿ ಇದೇ ಅತಿ ದೊಡ್ಡ ಸಮೀಕ್ಷೆ ಎಂದು ಹೇಳಲಾಗಿದೆ. ಒಟ್ಟು 543 ಲೋಕಸಭಾ ಕ್ಷೇತ್ರಗಳ ಪೈಕಿ 207 ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆಸಲಾಗಿದ್ದು 45,578 ಮತದಾರರನ್ನು ಸಂಪರ್ಕಿಸಲಾಗಿತ್ತು ಎಂದು ವರದಿಯಾಗಿದೆ.

ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ ಬಿಜೆಪಿ ನೇತೃತ್ವದ ಎನ್.ಡಿ.ಎ. ಲೋಕಸಭಾ ಚುನಾವಣೆಯಲ್ಲಿ 287ರಿಂದ 307 ಸ್ಥಾನಗಳನ್ನು ಪಡೆದು ಬಹುಮತ ಗಳಿಸಲಿದೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಕೂಟವು 143ರಿಂದ 163 ಸ್ಥಾನಗಳನ್ನೂ ಇತರರು 90ರಿಂದ 100 ಸ್ಥಾನಗಳನ್ನು ಪಡೆಯಲಿದ್ದಾರೆ ಎಂದು ಹೇಳಲಾಗಿದೆ.

ಎನ್.ಡಿ.ಎ. ಕುರಿತಾದ ಅಂಕಿಅಂಶಗಳನ್ನು ಗಮನಿಸಿದರೆ ಪ್ರಮೋದ್ ಮಹಾಜನ್‌ರಂತಹ ಬಿಜೆಪಿ ವಕ್ತಾರರು ಇತ್ತೀಚೆಗೆ ಹೇಳುತ್ತಾ ಬಂದದ್ದನ್ನೇ ಸಮೀಕ್ಷೆಯ ಬಾಯಿಯಿಂದ ಹೇಳಿಸಿದಂತೆ ಕಾಣುತ್ತದೆ. ಸಮೀಕ್ಷೆಯನ್ನು ವೈಜ್ಞಾನಿಕವಾಗಿ, ಪಕ್ಷಾತೀತವಾಗಿ ನಡೆಸಿದ್ದರೂ, ಸಮೀಕ್ಷೆ ನೈಜ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಲಾಗದು. ಮತದಾರರು ತಮ್ಮ ಅಭಿಪ್ರಾಯ ಗಳನ್ನು ಬದಲಾಯಿಸುವುದಿಲ್ಲ ಎಂದು ಹೇಳಲಾಗದು.

ಮತದಾನ ಹತ್ತಿರ ಬರುತ್ತಿದ್ದಂತೆ ತೀವ್ರಗೊಳ್ಳುವ ರಾಜಕೀಯ ಚರ್ಚೆಯಿಂದ ಮತದಾರರು ಹೊಸ ನಿರ್ಧಾರಕ್ಕೆ ಬರುವುದನ್ನು ತಳ್ಳಿ ಹಾಕಲಾಗುವುದಿಲ್ಲ. ಮಾರ್ಚ್ ಮೊದಲ ಭಾಗದಲ್ಲಿ ಈ ಸಮೀಕ್ಷೆಯನ್ನು ನಡೆಸಲಾಗಿದ್ದು ಆಗ ಇನ್ನೂ ಮೈತ್ರಿಕೂಟಗಳು, ಹೊಂದಾಣಿಕೆಗಳು ಅಂತಿಮ ವಾಗಿರಲಿಲ್ಲ, ಅಭ್ಯರ್ಥಿಗಳು ನಿರ್ಧಾರವಾಗಿರಲಿಲ್ಲ, ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು ಪ್ರಕಟವಾಗಿರಲಿಲ್ಲ. ಚುನಾವಣಾ ಪ್ರಕ್ರಿಯೆಯ ಈ ಎಲ್ಲಾ ಹಂತಗಳು ಮುಗಿಯುತ್ತಿದ್ದಂತೆ ಮತದಾರರು ಯಾವ ಪಕ್ಷಕ್ಕೆ ಮತ ನೀಡಬೇಕು ಎಂಬ ತೀರ್ಮಾನಕ್ಕೆ ಬರುವುದು ಸಹಜ.

ಎನ್.ಡಿ.ಟಿ.ವಿ. ಸಮೀಕ್ಷೆಯ ಫಲಿತಾಂಶದಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವೇನೆಂದರೆ ಸಂಪರ್ಕಿಸಲ್ಪಟ್ಟ ಮತದಾರರ ಪೈಕಿ ಬಹುಸಂಖ್ಯಾತರು ಎನ್.ಡಿ.ಎ. ಪರವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಶೇ.25.5ರಷ್ಟು ಮತದಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಿರಾಕರಿಸಿರುವುದು.(ಡೆಕ್ಕನ್ ಹೆರಾಲ್ಡ್ 27.3.2004). ಇದು ಕಡೆಗಣಿಸುವ ವಿಷಯವಲ್ಲ. ಈ ಶೇಕಡಾ 25ರಷ್ಟು ಜನರ ತೀರ್ಮಾನ ನಿರ್ಣಾಯಕವಾಗಬಹುದು. ತಮ್ಮ ಬಾಯಿಬಿಚ್ಚದ ಈ ಜನ ಮತದಾನದಲ್ಲಿ ಭಾಗವಹಿಸಿದಾಗ ಸಮೀಕ್ಷೆಯ ಫಲಿತಾಂಶ ತಲೆಕೆಳಗಾಗುವ ಸಾಧ್ಯತೆ ಇದ್ದೇ ಇದೆ.

ಅಷ್ಟು ಮಾತ್ರವಲ್ಲ. ಸಮೀಕ್ಷೆಯಲ್ಲಿ ಪಾಲ್ಗೊಂಡ ಮತದಾರರ ಪೈಕಿ ಶೇ.31.1ರಷ್ಟು ಜನ ಎನ್.ಡಿ.ಎ.ಯನ್ನು ಬೆಂಬಲಿಸಿದ್ದ ಶೇ.24.6ರಷ್ಟು ಜನ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಪರವಾಗಿ ಅಭಿಪ್ರಾಯ ನೀಡಿದ್ದಾರೆ. ಈ ಎರಡು ಅಂಕಿಅಂಶಗಳ ನಡುವಿನ ಅಂತರ ಶೇ.6.5 ಆದರೆ ಶೇ.18.8ರಷ್ಟು ಜನ ಎಡಪಕ್ಷಗಳನ್ನು ಒಳಗೊಳ್ಳುವ 'ತೃತೀಯ ರಂಗ' ವನ್ನು ಬೆಂಬಲಿಸಿದ್ದಾರೆ. ಕಾಂಗ್ರೆಸ್ ಮೈತ್ರಿಕೂಟ ಮತ್ತು ಎಡ ಮೈತ್ರಿಕೂಟಗಳಿಗೆ ಲಭಿಸಿರುವ ಶೇಕಡವಾರು ಬೆಂಬಲವನ್ನು ಒಟ್ಟಿಗೆ ಪರಿಗಣಿಸಿದಾಗ ಬಿಜೆಪಿ-ಎನ್.ಡಿ.ಎ. ಲೆಕ್ಕಾಚಾರ ತಲೆಕೆಳಗಾಗದೆ ಇರಲಾರದು.

ಎನ್.ಡಿ.ಎ. ಮರಳಿ ಅಧಿಕಾರಕ್ಕೆ ಬರುತ್ತದೆ ಎಂಬ ಅಬ್ಬರದ ಪ್ರಚಾರ - ಇದು ಮಾಧ್ಯಮಗಳ ಸೃಷ್ಟಿಯಷ್ಟೇ. ಬಿಜೆಪಿ ಇಂದು ಆಂತರಿಕ ಕಿತ್ತಾಟದಿಂದ ನರಳುತ್ತಿದೆ. ಹೇಗಾದರೂ ಮಾಡಿ ಗೆಲ್ಲಬೇಕು ಎಂದು ಸಿಕ್ಕಸಿಕ್ಕವರನ್ನು ಪಾರ್ಟಿ ಯೊಳಗೆ ಸೇರಿಸಿಕೊಳ್ಳುತ್ತಿರುವುದರಿಂದ ಪ್ರತಿ ಯೊಂದು ಕ್ಷೇತ್ರದಲ್ಲಿಯೂ ಬಂಡಾಯ ಸ್ಫೋಟಿಸ ಲಾರಂಭಿಸಿವೆ. ಪರಿಸ್ಥಿತಿ ಇನ್ನೂ ಹದಗೆಡಲಿದೆ. ಬಿಜೆಪಿ ಬೆಳೆಯಿಸಿದ ರಾಜಕೀಯ ಸಂದರ್ಭ ಸಾಧಕತನ ಈಗ ಅದಕ್ಕೆ ತಿರುಗುಬಾಣ ವಾಗುತ್ತಿದೆ. ಇಂತಹ ಸಮೀಕ್ಷೆಗಳು ಮತದಾರ ರನ್ನು ಮುಖ್ಯವಾಗಿ ವಿದ್ಯಾವಂತ ಮತದಾರರನ್ನು ಗೊಂದಲಕ್ಕೀಡುಮಾಡುತ್ತವೆ. ಹಾಗೆ ಮಾಡುವುದೇ ಇದರ ಹಿಂದಿನ ಉದ್ದೇಶವಾಗಿದೆ. ಇಂತಹ ಸಮೀಕ್ಷೆಗಳ, ಅಂಕಿಅಂಶಗಳ ಆಳಕ್ಕೆ ಇಳಿದು ವಾಸ್ತವವನ್ನು ಪತ್ತೆ ಹಚ್ಚುವ ಕೆಲಸ ನಡೆಯಬೇಕಾಗಿದೆ. ನಮ್ಮ ಗಮನವನ್ನು ಬೇರೆ ಕಡೆಗೆ ಸೆಳೆದು ಅಮೂಲ್ಯವಾದ ನಮ್ಮ ಮತಗಳನ್ನು ಕದಿಯುವವರ ಬಗ್ಗೆ ಎಚ್ಚರಿಕೆ ಅಗತ್ಯವಿದೆ.

• ಚುನಾವಣೆಗಳ ನಂತರ ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರ್ಕಾರ ಅಧಿಕಾರಕ್ಕೆ ಬರುವ ಎಲ್ಲ ಸಾಧ್ಯತೆಗಳಿವೆ ಎಂಬುದು ಗಮನಾರ್ಹವಾದ ವಿಷಯ.

ಮಹಿಳಾ ಮತದಾರರ

ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವ, ಬಾಬಾಬುಡನ್ ಗಿರಿಯನ್ನು ಇನ್ನೊಂದು ಅಯೋಧ್ಯೆ ಮಾಡಲು ಹೊರಟಿರುವ ಶಕ್ತಿಗಳು ಚುನಾವಣೆಯಲ್ಲಿ ಗೆಲ್ಲಲು ಮಹಿಳೆಯರ ಮತಗಳ ಮೇಲೆ ಕಣ್ಣಿಟ್ಟಿವೆ. ಭಾರತೀಯ ಮಹಿಳೆಯರಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 1998 ರಿಂದ ಏನು ಮಾಡುತ್ತಾ ಬಂದಿದೆ ಎಂಬುದರ ದಾಖಲೆ ಕಣ್ಮುಂದೆ ಇರುವಾಗ ಮಹಿಳೆಯರು ಬಿಜೆಪಿಗೆ ಮತ ಹಾಕುವರೆ ಎಂಬ ಪ್ರಶ್ನೆಯನ್ನು ಇಲ್ಲಿ ಪರಿಶೀಲಿಸಲಾಗಿದೆ.

ಮತ್ತೆ ಚುನಾವಣೆ ಬಂದಿದೆ. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಾರ್ವತ್ರಿಕ ಚುನಾವಣೆ ಎನ್ನುವುದೊಂದು ವಿಶೇಷ ಸಂಗತಿ ಏನಲ್ಲ. ನಮ್ಮ ದೇಶದಲ್ಲೂ ಸಂವಿಧಾನಬದ್ಧವಾಗಿ ಪ್ರತಿ 5 ವರ್ಷಕ್ಕೊಮ್ಮೆ, ಕೆಲವು ಬಾರಿ ಬೇರೆ ಬೇರೆ ಕಾರಣಗಳಿಂದ ಮುಂಚಿತವಾಗಿಯೂ ನಡೆದಿವೆ. ಆದರೆ ಭಾರತದ ಸಂದರ್ಭದಲ್ಲಿ ಬಿಜೆಪಿ ಮತ್ತದರ ದುಷ್ಟಕೂಟದ ಆಳ್ವಿಕೆ ತಂದಿಟ್ಟ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದೇಶದ ಭವಿಷ್ಯ ಮತ್ತು ಮಹಿಳೆಯರ ಹಕ್ಕುಗಳ ರಕ್ಷಣೆಯ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿ ಬೇರೆಯೇ ಆಗಿದೆ.

ಈ ಹಿನ್ನೆಲೆಯಲ್ಲಿ ಮತದಾರರು/ ಮಹಿಳಾ ಮತದಾರರು ವಹಿಸಬೇಕಾದ ಎಚ್ಚರಿಕೆಗೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

ಮಹಿಳೆಯರು ಬಿಜೆಪಿಗೆ ಏಕೆ ಮತ ನೀಡಬಾರದು?


ಉಳಿದೆಲ್ಲ ರಾಜಕೀಯ ಪಕ್ಷಗಳಿಗೂ ಬಿಜೆಪಿಗೂ ಇರುವ ವ್ಯತ್ಯಾಸವೆಂದರೆ ಬಿಜೆಪಿಗೆ ಆರ್‌ಎಸ್‌ಎಸ್ ಜತೆಗಿರುವ ನಂಟು ಮತ್ತು ಅವೆರಡರ ಗುರಿ ಹಿಂದೂ ರಾಷ್ಟ್ರ ಸ್ಥಾಪನೆ. ಇದು ಮಹಿಳೆಯರ ಮೇಲೆ ನಿರ್ದಿಷ್ಟ ಪ್ರಭಾವ ಬೀರುವುದರ ಜತೆಯಲ್ಲೇ ಭಾರತದಂತಹ ಬಹು ಸಂಸ್ಕೃತಿಯ ಸಮಾಜದ ಅಸ್ತಿತ್ವಕ್ಕೆ ಧಕ್ಕೆ ಉಂಟುಮಾಡುತ್ತದೆ. ಮೊದಲನೆಯದಾಗಿ, ಅನೇಕ ಆರ್‌ಎಸ್‌ಎಸ್ ಪ್ರಕಟಣೆಗಳಲ್ಲಿ ವಿವರಿಸಿದಂತೆ ಹಿಂದೂ ರಾಷ್ಟ್ರದ ಕಲ್ಪನೆಯಲ್ಲಿ ಮಹಿಳೆಯರಿಗೆ ಒಂದು ವಿಶಿಷ್ಟ ಸ್ಥಾನವನ್ನು ನೀಡಲಾಗಿದೆ. ಈ ತಿಳುವಳಿಕೆಯ ತಿರುಳೇನೆಂದರೆ ಮಹಿಳೆಯ ಪ್ರಥಮ ಪಾತ್ರ ಒದು ತಾಯಿಯದು, ಅದೂ ಗಂಡುಮಕ್ಕಳ ತಾಯಿಯದು. ಒಂದು ಮಾದರಿ ಹಿಂದೂ ಕುಟುಂಬವನ್ನು ಶಿವಪಾರ್ವತಿ ಮತ್ತು ಅವರಿಬ್ಬರ ಗಂಡು ಮಕ್ಕಳ ಕುಟುಂಬಕ್ಕೆ ಹೋಲಿಸಲಾಗಿದೆ. ಒಬ್ಬ ಕಾರ್ಮಿಕಳಾಗಿ, ಒಬ್ಬ ಸ್ವತಂತ್ರ ಮನೋಭಾವದ ನಾಗರಿಕಳಾಗಿ ಅವಳ ಪಾತ್ರವನ್ನು ನಿರಾಕರಿಸಲಾಗಿದೆ. ಈ ಧೋರಣೆ ಕೇವಲ ಸೈದ್ಧಾಂತಿಕ ಮಟ್ಟದಲ್ಲಿ ಮಾತ್ರ ಇಲ್ಲ. ಈ ಧೋರಣೆಯನ್ನು ಜಾರಿ ಮಾಡಲು ಅನೇಕ ರೀತಿಯಲ್ಲಿ ಬಿಜೆಪಿ ಪ್ರಯತ್ನ ಮಾಡಿದೆ.

'ಭಾರತ ಪ್ರಕಾಶಿಸುತ್ತಿದೆ' ಎಂಬ ಸುಳ್ಳು ಪ್ರಚಾರದಲ್ಲಿ ಕೂಡ ತಾವು ಮಹಿಳೆಯರಿಗೆ ಎಷ್ಟು ಹಿತ ಮಾಡಿದ್ದೇವೆ ಎನ್ನುವ ತಮ್ಮ ಹಿರಿಮೆಯನ್ನು ಹೇಳಿಕೊಂಡಿಲ್ಲ. ಏಕೆಂದರೆ ಲಿಂಗಾಧಾರಿತ ವಿಚಾರಗಳಲ್ಲಿ ಅವರ ಸಾಧನೆ ಅಷ್ಟು ನಾಚಿಕೆಗೇಡಿತನದ್ದಾಗಿದೆ.

ಕೋಮು ಹಿಂಸೆಗಳಲ್ಲಿ ಮಹಿಳೆಯೇ ಮುಖ್ಯ ಗುರಿ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಕೋಮುಹಿಂಸೆಯ ಸಾವಿರಾರು ಘಟನೆಗಳು ಆಗಿಹೋಗಿವೆ. ಆದರೆ ಮೋದಿಯ ಗುಜರಾತಿನಲ್ಲಿ ಹಿಂದೆಂದೂ ಕಂಡುಕೇಳರಿಯದ್ದು ನಡೆದಿದೆ. ಸತತವಾಗಿ ಎರಡು ತಿಂಗಳ ಕಾಲ ಸರ್ಕಾರವೇ ಮುಂದೆ ನಿಂತು ಮುತುವರ್ಜಿ ವಹಿಸಿ ಅತ್ಯಂತ ಕ್ರೂರ ಹಿಂಸೆಯನ್ನು ಅಲ್ಪಸಂಖ್ಯಾತ ಕೋಮಿನವರ ಮೇಲೆ ನಡೆಸಿದ್ದು ಮಾತ್ರ ಅಲ್ಲ. ಮಹಿಳೆಯರನ್ನು ಗುರಿಯಾಗಿಟ್ಟುಕೊಂಡು ಅವರು ನಡೆಸಿದ ಹತ್ಯೆಗಳು, ಲೈಂಗಿಕ ಅತ್ಯಾಚಾರ, ಬೆತ್ತಲೆಗೊಳಿಸುವುದು, ಹೊಡೆಯುವುದು/ ಥಳಿಸುವುದು, ಮತ್ತು ಸಾರ್ವಜನಿಕವಾಗಿ ಅವಮಾನಗೊಳಿಸಿದ್ದು ಹಿಂದೆಂದೂ ಆಗಿಲ್ಲ. ಮಹಿಳೆ ಯಾವುದೇ ಒಂದು ಕೋಮಿನ ಆಸ್ತಿ, "ಕುಲಗೌರವ"ದ ರಕ್ಷಕಿಯಾಗಿರುವುದರಿಂದ ಆ ಕೋಮನ್ನು ಅವಮಾನ ಮಾಡಬೇಕೆಂದರೆ ಮತ್ತು ಆ ಕೋಮಿಗೆ ತಕ್ಕ ಪಾಠ ಕಲಿಸಬೇಕೆಂದರೆ ಆ ಕೋಮಿನ ಮಹಿಳೆಯರ ಮೇಲೆ ಧಾಳಿ ಮಾಡಬೇಕು ಮತ್ತು ಅವಮಾನಿಸಬೇಕು ಎನ್ನುವ ತಿಳುವಳಿಕೆ ಸಂಘಪರಿವಾರ ಮತ್ತು ಅಂತಹ ಬಹುಪಾಲು ಮತಾಂಧ ಹಾಗೂ ಕೋಮುವಾದಿ ಶಕ್ತಿಗಳದ್ದಾಗಿರುತ್ತದೆ. ಮುಸ್ಲಿಮರ ವಿರುದ್ಧ ಕೋಮುದ್ವೇಷ ಎಬ್ಬಿಸಲು ಬಹುಸಂಖ್ಯಾತ ಕೋಮಿನ ಮಹಿಳೆಯರ ಮೇಲೆ ಧಾಳಿ ಮಾಡಿದ್ದಾರೆ ಎಂಬ ಹಸೀ ಸುಳ್ಳನ್ನು ಸಂಘಪರಿವಾರದವರು ಹಬ್ಬಿಸುತ್ತಾರೆ. ಹೀಗೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಮಹಿಳೆಯರನ್ನೇ ಗುರಿ ಮಾಡುತ್ತಾರೆ. ಮಹಿಳೆಯರ ಮೇಲೆ ನಡೆಸಿದ ಕೊಲೆ ಮತ್ತು ಅತ್ಯಾಚಾರಗಳ ಹಿಂದೆಯೇ, ಅವರಿಗೆ ನ್ಯಾಯ ಒದಗಿಸುವಲ್ಲಿ ಕೂಡ ಮೋದಿ ಸರ್ಕಾರ ಎಂತಹ ಹೇಯ ಕೃತ್ಯ ನಡೆಸಿದೆ ಎಂದರೆ ದೇಶದ ಸರ್ವೋಚ್ಚ ನ್ಯಾಯಾಲಯವು "ಕೊಲೆಗಾರರು ಮತ್ತು ಅತ್ಯಾಚಾರಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರ ರಾಜೀನಾಮೆ ಕೊಡಬೇಕು" ಎಂದು ಛೀಮಾರಿ ಹಾಕಿದೆ. ಆಗ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ಪಶ್ಚಿಮಬಂಗಾಳ ಮತ್ತು ಬಿಹಾರ ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ನೆಪದಲ್ಲಿ ಆ ರಾಜ್ಯಗಳಿಗೆ ತನಿಖಾ ತಂಡಗಳನ್ನು ಕಳಿಸುವ ಆತುರ ತೋರಿದ ಪ್ರಧಾನಮಂತ್ರಿ ಮತ್ತವರ ಸರ್ಕಾರ, ಮೋದಿ ಸರ್ಕಾರದ ರಕ್ಷಣೆಗೆ ಹೋಗಲು ತರಾತುರಿ ತೋರಿತು.

ಅಲ್ಪಸಂಖ್ಯಾತರ ಮೇಲಿನ ಧಾಳಿ ಕೇವಲ ಗುಜರಾತಿಗೆ ಸೀಮಿತವಾಗಿಲ್ಲ. ಉಮಾಭಾರತಿ ಅಧಿಕಾರಕ್ಕೆ ಬಂದ ಮೇಲೆ ಜಬುವಾ ಒಳಗೊಂಡಂತೆ ಮಧ್ಯಪ್ರದೇಶದ ಆದಿವಾಸಿ ಪ್ರದೇಶಗಳಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ಹಿಂಸಾತ್ಮಕ ಧಾಳಿ ಮಾಡಲಾಗಿದೆ. ತೀರ ಇತ್ತೀಚಿಗೆ ಓರಿಸ್ಸಾದಲ್ಲಿ, ಬಡ ದಲಿತ ಕ್ರಿಶ್ಚಿಯನ್ನರು ಬಜರಂಗದಳದವರು ಬಯಸಿದಂತೆ ಮತ್ತೆ ಹಿಂದೂ ಧರ್ಮಕ್ಕೆ ಮರುಮತಾಂತರಗೊಳ್ಳಲು ತಿರಸ್ಕರಿಸಿದ್ದಕ್ಕಾಗಿ ಏಳು ಮಹಿಳೆಯರ ತಲೆ ಬೋಳಿಸುವ ಹೇಯಕೃತ್ಯವನ್ನು ಭಜರಂಗಿಗಳು ಮಾಡಿದ್ದಾರೆ. ಇವಿಷ್ಟರಿಂದಲೇ ತೃಪ್ತಿಪಡದ ಈ ಮತಾಂಧರು, ಸಾಮಾಜಿಕ ಉನ್ನತಿಗಾಗಿ ಮಹಿಳೆಯರು ಒಂದಾಗುವುದನ್ನು ತಡೆಯಲು ಧರ್ಮದ ಹೆಸರಿನಲ್ಲಿ ಹಿಂದೂ ಮಹಿಳೆಯರನ್ನು ಅಲ್ಪಸಂಖ್ಯಾತ ಮಹಿಳೆಯರ ವಿರುದ್ಧ ಎತ್ತಿಕಟ್ಟುವ ಕೃತ್ಯವೆಸಗುತ್ತಾರೆ. ಇದು ಈಗಿರುವ ಸುಲಿಗೆಯ ಶೋಷಣಾಯುಕ್ತ ಆರ್ಥಿಕ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸಲು ಸಹಾಯಕವಾಗುತ್ತದೆ. ಹೀಗೆ, ಸಂಘಪರಿವಾರ ಕೃಪಾಪೋಷಿತ ಬಿಜೆಪಿಯ ಸಿದ್ಧಾಂತ, ನೀತಿಗಳು ಹಾಗೂ ಆಚರಣೆಗಳು ಮಹಿಳೆಯರ ಅಭಿವೃದ್ಧಿಗೆ ವಿರುದ್ಧವಾಗಿವೆ. ಅವರ ಇತ್ತೀಚಿಗಿನ ಮಹಿಳಾ ಸಬಲೀಕರಣದ ಯಾವ ಉದ್ದುದ್ದ ಮಾತುಗಳೂ, ಹೇಳಿಕೆಗಳಿಂದ ಈ ವಾಸ್ತವ/ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ.




ಮಹಿಳಾ ಕಾಳಜಿಯಿಲ್ಲದ ಬಜೆಟ್

ವಾಜಪೇಯಿ ಸರ್ಕಾರವು ತನ್ನ ಆಡಳಿತಾವಧಿಯಲ್ಲಿ ಮಂಡಿಸಿದ ಬಜೆಟ್‌ಗಳಲ್ಲಿ ಮಹಿಳಾ ಪರ ಕಾಳಜಿಯ ಕೊರತೆ ಎದ್ದುಕಾಣುತ್ತಿತ್ತು. ಜೀವನಾವಶ್ಯಕ ವಸ್ತುಗಳಾದ ಆಹಾರಧಾನ್ಯಗಳ, ಸಕ್ಕರೆಯ, ಅಡಿಗೆ ಎಣ್ಣೆ, ಗ್ಯಾಸ್ ಬೆಲೆ ಏರಿಕೆ ಹಾಗೆಯೇ ಬೇರೆಲ್ಲಾ ವಸ್ತುಗಳ ಬೆಲೆಗಳ ಮೇಲೆ ನೇರ ಪರಿಣಾಮ ಬೀರುವ ಡಿಸೇಲ್ ಬೆಲೆ ಏರಿಕೆಗಳು ಕುಟುಂಬಗಳ ಖರ್ಚು ವೆಚ್ಚಗಳನ್ನು ಬುಡಮೇಲು ಮಾಡಿವೆ. ಸಾಮಾಜಿಕ ಕ್ಷೇತ್ರದಲ್ಲಿನ ವೆಚ್ಚದ ಕಡಿತ ಹಾಗೂ ಖಾಸಗೀಕರಣ ಪ್ರವೃತ್ತಿ ಮಹಿಳೆಯರ ಮೇಲೆ ದುಷ್ಪರಿಣಾಮ ಬೀರಿವೆ. ನೀರು ಪೂರೈಕೆ, ನೈರ್ಮಲ್ಯ, ಆರೋಗ್ಯಸೇವೆಗಳು, ಶಿಕ್ಷಣಕ್ಕಾಗಿ ಹೆಚ್ಚಿನ ಹಣ ತೆರಬೇಕಾಗಿ ಬಂದಿದೆ. ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳ ಖಾಸಗೀಕರಣ ಅತ್ಯಂತ ಕೆಟ್ಟ ಪರಿಣಾಮ ಬೀರಿದೆ. ನಿರ್ದಿಷ್ಟವಾಗಿ ಮಹಿಳೆಯರಿಗಾಗಿಯೇ ಇರುವ ಯೋಜನೆಗಳಿಗೆ ನೀಡುವ ನಿಧಿಯನ್ನು ಸರ್ಕಾರದ ಬಜೆಟಿನಲ್ಲಿ ಕ್ರಮೇಣವಾಗಿ ಕಡಿಮೆಗೊಳಿಸಲಾಗುತ್ತಿದೆ. 1999 ರಿಂದ 2002 ರ ಮೂರು ವರ್ಷಗಳ ವಾಜಪೇಯಿ ಆಡಳಿತದಲ್ಲಿ ಮಹಿಳಾ ಯೋಜನೆಗಳಿಗೆ ಮಾಡುತ್ತಿದ್ದ ವೆಚ್ಚ ಒಟ್ಟು ಸಾರ್ವಜನಿಕ ವೆಚ್ಚದ ಶೇಕಡಾ 1.02 ನಿಂದ ಶೇಕಡಾ.0.94 ಹಾಗೂ ಕೊನೆಗೆ ಶೇಕಡಾ 0.87ಗೆ ಬಂದು ನಿಂತಿದೆ. ತನ್ನ ಸರ್ಕಾರದ ಸಾಧನೆಗಳ ಪ್ರಚಾರಕ್ಕೆ ಜಾಹಿರಾತು ಗಳಿಗಾಗಿ ರೂ.500 ಕೋಟಿಗೂ ಹೆಚ್ಚಿನ ಹಣ ಖರ್ಚು ಮಾಡುತ್ತಿರುವ ವಾಜಪೇಯಿ ಸರ್ಕಾರ, ಮಹಿಳೆಯರ ಆದಾಯ ಹೆಚ್ಚಿಸುವ ಯೋಜನೆಗಳಿಗೆ ಒಟ್ಟು ವೆಚ್ಚ ಕೇವಲ ರೂ.153.70 ಕೋಟಿಯಷ್ಟೆ. ಮಹಿಳಾ ಸಬಲೀಕರಣ ಮಾದರಿ ಯೋಜನೆಯೆಂದೇ ಪ್ರಚಲಿತವಾಗಿರುವ ರಾಷ್ಟ್ರೀಯ ಮಹಿಳಾ ಕೋಶದ ಬಜೆಟನ್ನು ಕೂಡ ತೀರ ಕಡಿಮೆಯ ಮೂರು ಕೋಟಿ ರೂಪಾಯಿಯಿಂದ ಒಂದು ಕೋಟಿ ರೂಪಾಯಿಗೆ ಇಳಿಸಲಾಗಿದೆ. ಅತ್ಯಂತ ನಾಚಿಕೆಗೇಡಿನ ಸಂಗತಿಯೆಂದರೆ ಮಕ್ಕಳಿಗೆ ಪೋಷಕಾಂಶ ಹೆಚ್ಚಿಸುವ ಮಧ್ಯಾಹ್ನದ ಊಟಕ್ಕೆ ಒಬ್ಬ ವಿದ್ಯಾರ್ಥಿಗೆ ನೀಡುತ್ತಿದ್ದ ಮೂಲ ರೂ.6 ನ್ನು ಇನ್ನೂ ಕಡಿಮೆ ಮಾಡಲಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಮಾಡುತ್ತಿದ್ದ ತಲಾವೆಚ್ಚವನ್ನು ಕಡಿಮೆ ಮಾಡಲಾಗಿದೆ. ಅದರಲ್ಲೂ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಿಗೆ ಕಡಿಮೆ ಹಣ ವೆಚ್ಚ ಮಾಡಲಾಗುತ್ತಿದೆ. ಯಾವುದಾದರೂ ಸಚಿವಾಲಯದಲ್ಲಿ ಹೆಚ್ಚು ಹಣ ವೆಚ್ಚ ಮಾಡೋ ಯೋಜನೆ ಯಾವುದಾದರೂ ಇದ್ದರೆ ಅದು ಕುಟುಂಬ ಯೋಜನಾ ಸಚಿವಾಲಯದಡಿ ಯಲ್ಲಿರುವ ಸರ್ಕಾರದ ಮಹಿಳಾ ವಿರೋಧಿ-ಬಲವಂತದ ಜನಸಂಖ್ಯಾ ನಿಯಂತ್ರಣ ನೀತಿಯನ್ನು ಉತ್ತೇಜಿಸುವ ಯೋಜನೆಯಾಗಿದೆ.

ಮಹಿಳೆಯರ ಆರ್ಥಿಕ ಹಕ್ಕುಗಳು ಹಾಗೂ ದುಡಿಯುವ ಮಹಿಳೆಯರ ಮೇಲೆ ಧಾಳಿ

ಮಹಿಳೆಯರ ಆರ್ಥಿಕ ಹಕ್ಕುಗಳ ಮೇಲೆ

ಕೆ.ಎಸ




ಮಹಿಳಾ ಮೀಸಲಾತಿ ಮಸೂದೆ

ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರದ ವಿಫಲತೆಗೆ ಎನ್‌ಡಿಎ ಸರ್ಕಾರ ಹಾಗೂ ವೈಯಕ್ತಿಕವಾಗಿ ಪ್ರಧಾನಮಂತ್ರಿಯೇ ಕಾರಣ. ಸಂಸತ್ತಿನ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಸರ್ಕಾರವು ಎಲ್ಲಾ ಪ್ರಮುಖ ವಿರೋಧ ಪಕ್ಷಗಳಿಗೆ ಪತ್ರ ಬರೆದು ಮಹಿಳಾ ಮೀಸಲಾತಿ ವಿಧೇಯಕಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಂಡಿತು. ಹೀಗಿದ್ದಾಗ್ಯೂ, ಪರ್ಯಾಯ ಎನಿಸುವ ಒಂದು ಅವಮಾನಕರ ಸೂತ್ರವನ್ನು ಮುಂದಿಟ್ಟು, ಆ ಮಸೂದೆಯನ್ನು ಮತಕ್ಕೆ ಹಾಕಲು ಸರ್ಕಾರ ತಿರಸ್ಕರಿಸಿತು. ಒಂದು ಲೋಕಸಭಾ ಕ್ಷೇತ್ರದ ನಿರ್ವಹಣೆಯನ್ನು ಮಹಿಳೆ ಸ್ವತಂತ್ರವಾಗಿ ನೋಡಿಕೊಳ್ಳುವುದು ಸಾಧ್ಯವೇ ಇಲ್ಲವೇನೋ ಎನ್ನುವ ಹಾಗೆ ಮಹಿಳೆಯರಿಗೆ ಮೀಸಲಿಡುವ 180 ಕ್ಷೇತ್ರಗಳನ್ನು ದ್ವಿಸದಸ್ಯ ಕ್ಷೇತ್ರಗಳನ್ನಾಗಿ ಪರಿವರ್ತಿಸಬೇಕೆಂದು ಸರ್ಕಾರ ಸಲಹೆ ಮಾಡಿದೆ. ಸರ್ವಸಮ್ಮತಿಯ ಕೊರತೆ ಹೆಸರಿನಲ್ಲಿ ಆಳುವ ಪಕ್ಷವು ಬೆರಳೆಣಿಕೆಯ ಸಂಸತ್ ಸದಸ್ಯರ ಪ್ರತಿರೋಧವನ್ನು ಬಳಸಿಕೊಂಡು ಆ ಮಸೂದೆಯನ್ನು ನಾಶ ಮಾಡಿತು. ಸರ್ಕಾರ ತರಾತುರಿಯಲ್ಲಿ ಅಂಗೀಕಾರ ಪಡೆದುಕೊಂಡ ಪೋಟಾ (POTA) ಅಥವಾ ಇನ್ನಿತರ ಕೆಲವು ವಿಧೇಯಕಗಳಿಗೂ ಸಹಮತವಿರಲಿಲ್ಲ. ಆದರೆ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಇಬ್ಬಗೆಯ ನೀತಿಯನ್ನು ಸರ್ಕಾರ ಅನುಸರಿಸಿತು. ಅನೇಕ ಸಂದರ್ಭಗಳಲ್ಲಿ, ಮಹಿಳಾ ಸಂಘಟನೆಗಳಿಗೆ ಹಾಗೂ ಮಹಿಳಾ ಸಂಸತ್ ಸದಸ್ಯೆಯರಿಗೆ ಪ್ರಧಾನಮಂತ್ರಿಗಳೇ ಸ್ವತಃ ಆ ವಿಧೇಯಕವನ್ನು ಮತಕ್ಕೆ ಹಾಕುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಅಂತಹ ಸಂದರ್ಭ ಒದಗಿ ಬಂದಾಗ ಪ್ರಧಾನ ಮಂತ್ರಿಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ವಿಧೇಯಕವನ್ನು ಮತಕ್ಕೆ ಹಾಕುವ ಹೊಣೆಯನ್ನು ಸಭಾಧ್ಯಕ್ಷರಿಗೆ ದಾಟಿಸಿಬಿಟ್ಟರು.

ಹೊಣೆ

ತೀವ್ರವಾಗಿ ಧಾಳಿ ಮಾಡುವುದರೊಂದಿಗೆ ಮಹಿಳೆಯರ ಸ್ಥಾನಮಾನವನ್ನು ಇನ್ನೂ ಅಧೋಗತಿಗೆ ತಳ್ಳುವ ಕೆಲಸ ವಾಜಪೇಯಿ ಸರ್ಕಾರದಡಿಯಲ್ಲಾಗಿದೆ. ಕಳೆದ ಒಂದು ದಶಕದಲ್ಲಿ ಮಹಿಳಾ ಉದ್ಯೋಗ ದರ ತೀಕ್ಷ್ಣಗತಿಯಲ್ಲಿ ಇಳಿದು ಶೇಕಡಾ 8 ರಿಂದ ಶೇಕಡಾ 2 ಕ್ಕೆ ಬಂದಿದೆ. ಕಳೆದ ಮೂರುವರ್ಷಗಳಲ್ಲಿ ಅದು ಮತ್ತೂ ಕೆಳಗೆ ಬಂದಿದೆ. ಮಾಹಿತಿ ತಂತ್ರಜ್ಞಾನ ಅಥವಾ ಸೇವಾ ಕ್ಷೇತ್ರಗಳಲ್ಲಿ ಒದಗಿಬಂದ ಕಡಿಮೆ ಪ್ರಮಾಣದ ಉದ್ಯೋಗ ಸ್ವಲ್ಪಮಟ್ಟಿನ ಪರಿಹಾರ ಒದಗಿಸಲು ಸಾಧ್ಯವಾಗಿದೆ



ಯಾದರೂ ಉದ್ಯೋಗ ಒದಗಿಸುತ್ತಿದ್ದ ಸರ್ಕಾರಿ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ದೊಡ್ಡ ಸಂಖ್ಯೆಯ ಉದ್ಯೋಗ ನಷ್ಟವಾಗಿದೆ. ನೇಮಕಾತಿಗಳ ಮೇಲೆ ನಿಷೇಧದ ಜತೆಯಲ್ಲೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸ್ವಯಂ (ಬಲವಂತ) ನಿವೃತ್ತಿ ಯೋಜನೆಯ ಹೆಸರಿನಲ್ಲಿ ಸರ್ಕಾರಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರು ಅನಿವಾರ್ಯವಾಗಿ ನಿವೃತ್ತಿ ಹೊಂದಬೇಕಾಗಿ ಬಂದಿದೆ. ಬ್ಯಾಂಕಿಂಗ್ ಉದ್ದಿಮೆಯೊಂದರಲ್ಲೇ 45 ಸಾವಿರಕ್ಕೂ ಹೆಚ್ಚು ಮಹಿಳೆಯರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ವಾಜಪೇಯಿ ಸರ್ಕಾರದಡಿಯಲ್ಲಿ ಅತ್ಯಂತ ಲಿಂಗ ಪಕ್ಷಪಾತದ ಯೋಜನೆಯನ್ನು ಜಾರಿ ಮಾಡಿ ಕಲ್ಲಿದ್ದಲು ಉದ್ದಿಮೆಯಲ್ಲಿ 9 ಸಾವಿರಕ್ಕೂ ಹೆಚ್ಚಿನ ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಸಿದ್ಧಉಡುಪು, ವಿದ್ಯುನ್ಮಾನ (electronic) ಹಾಗೂ ಆಹಾರ ಸಂಸ್ಕರಣಗಳಂತಹ ರಫ್ತು ಆಧಾರಿತ ಉದ್ದಿಮೆಗಳಲ್ಲಿ ವಾಜಪೇಯಿ ಸರ್ಕಾರ ಹೆಚ್ಚು ಕಡಿಮೆ ಕಾರ್ಮಿಕ ಕಾನೂನುಗಳನ್ನು ಅಮಾನತುಗೊಳಿಸಿರುವುದರಿಂದ ಹೆಚ್ಚು ಮಹಿಳೆಯರೇ ಕೆಲಸ ಮಾಡುವ ಆ ಉದ್ದಿಮೆಗಳಲ್ಲಿ ಮಹಿಳೆಯರ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಉದ್ಯೋಗನಿರತ ಹೆಣ್ಣುಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದಬ್ಬಾಳಿಕೆಯ ವಿರುದ್ಧ ದೇಶದ ಸರ್ವೋಚ್ಚ ನ್ಯಾಯಾಲಯವೇ ತೀರ್ಪು ನೀಡಿ ನೀತಿ ನಿರೂಪಣೆ ಮಾಡಿರುವಾಗ ಒಂದು ಸೂಕ್ತವಾದ ವಿಧೇಯಕವನ್ನು ಮಂಡಿಸಲು ಸರ್ಕಾರ ನಿರಾಕರಿಸುತ್ತಿದೆ.

ಬಹುಪಾಲು ದಲಿತ ಹಾಗೂ ಆದಿವಾಸಿ ಮಹಿಳೆಯರೇ ಇರುವ ಬಡ ಗ್ರಾಮೀಣ ಮಹಿಳೆಯರು ಮತ್ತು ಭೂಹೀನ ಮಹಿಳೆಯರೇ ಹೆಚ್ಚು ಹಾನಿಗೊಳಗಾಗಿದ್ದಾರೆ. ಹಸಿವು ಮತ್ತು ಹೆಚ್ಚಿದ ಬಡತನದಿಂದಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಮೈಮಾರಿಕೊಳ್ಳುವ ಸ್ಥಿತಿ ಹೆಚ್ಚಾಗುತ್ತಿದೆ. ಕೃಷಿರಂಗದಲ್ಲಿ ಉದ್ಯೋಗದ ತೀವ್ರ ಕಡಿತ ಮತ್ತು ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಒದಗಿಸುವಲ್ಲಿ ಸರ್ಕಾರದ ಸಂಪೂರ್ಣ ವಿಫಲತೆಗಳೇ ಇಂತಹ ದುಸ್ಥಿತಿಗೆ ಕಾರಣವಾಗಿವೆ. ಕೃಷಿ ಕಾರ್ಮಿಕರ ಸಮಗ್ರ ಮಸೂದೆಯನ್ನು ಅಂಗೀಕರಿಸಲು ವಾಜಪೇಯಿ ಸರ್ಕಾರ ನಿರಾಕರಿಸುತ್ತಿರುವುದರಿಂದಾಗಿ ಮಹಿಳೆಯರು ಅಸಮಾನ ಕೂಲಿ ಪಡೆದು ದುಡಿಯುವ ಅನಿವಾರ್ಯತೆ ಬಂದೊದಗಿದೆ. ದೇಶದ ಬಹುಭಾಗಗಳಲ್ಲಿ ಜಮೀನ್ದಾರರಿಂದ ಪಡೆಯುವ ಭಿಕ್ಷೆಯ ಕೂಲಿ ಒತ್ತಟ್ಟಿಗಿರಲಿ, ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಕೂಡ ಮಹಿಳೆಯರಿಗೆ ಕನಿಷ್ಠ ಕೂಲಿ ಸಿಗುತ್ತಿಲ್ಲ ಮತ್ತು ಸಮಾನ ಕೆಲಸಕ್ಕೆ

ಪುಟ 8ಕ್ಕೆ

ತಾಲಿಬಾನಿಗಳನ್ನೂ ಮೀರಿದ ವಿಕೃತಿ

ಮಹಿಳೆಯರನ್ನು ಪೂಜನೀಯ ದೇವತೆಗಳೆಂದೆಲ್ಲಾ ಸಮಾರಂಭಗಳಲ್ಲಿ ವೈಭವೀಕರಿಸುವ 'ಹಿಂದುತ್ವ'ವಾದಿ ಸಂಘ ಪರಿವಾರ, ಗುಜರಾತ್‌ನಲ್ಲಿ ಅದರ ನಿಜವಾದ ಫ್ಯಾಸಿಸ್ಟ್ ವಿಕೃತ ಮನೋಭಾವವನ್ನು ಅನಾವರಣಗೊಳಿಸಿತು. ವಾಸ್ತವದಲ್ಲಿ ಮಹಿಳೆಯರನ್ನು ಸ್ವಾತಂತ್ರ್ಯಕ್ಕೆ ಅನರ್ಹವಾದ, ಎರಡನೇ ದರ್ಜೆಯ ನಾಗರೀಕರಿಗಿಂತ ಕೀಳಾಗಿ ಕಾಣುವುದೇ ಈ ಮನುವಾದಿಗಳ ಮೂಲ ದೃಷ್ಟಿ. ಈ ಕೋಮುವಾದಿ ಫ್ಯಾಸಿಸ್ಟರು ಗುಜರಾತ್‌ನಲ್ಲಿ ವರ್ತಿಸಿದ ರೀತಿ ಅದರ ನಿಜ ಮುಖವನ್ನು ಬಯಲಿಗಿಟ್ಟಿದೆ.



ಅದರ ಒಂದು ನೋಟ ಇಲ್ಲಿದೆ.

ಮುಂಬರುವ ಲೋಕಸಭೆ- ವಿಧಾನ ಸಭೆ ಚುನಾವಣೆಗಳಲ್ಲಿ ಈ ಮತೀಯವಾದಿ ದುಷ್ಟರ ಕೂಟಕ್ಕೆ ತಕ್ಕ ಉತ್ತರವನ್ನು ಮಹಿಳೆಯರು ನೀಡಬೇಕಾಗಿದೆ.

- ಡಾ. ನಿ.ಮೂರಾರಿ ಬಲ್ಲಾಳ್

ಗುಜರಾತ್‌ನಲ್ಲಾದ ಕ್ರೌರ್ಯದ ಬಗ್ಗೆ ಹಲವು ಲೇಖನಗಳನ್ನು ಓದಿದ್ದೀರಿ. ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳ ಹಿಂಸೆಗಿಂತಲೂ ಭೀಕರ ರೂಪದಲ್ಲಿ ನಡೆದ ಈ ಹಿಂಸಾಕಾಂಡವು ಧರ್ಮದಲ್ಲಿ ನಂಬಿಕೆಯಿರುವ ನಮ್ಮಂಥ ಹಿಂದೂಗಳೆಲ್ಲರನ್ನೂ ತಲೆತಗ್ಗಿಸುವಂತೆ ಮಾಡಿದೆ.

"ಕೌಸರ್ ಬಾನು ಎಂಬ 9 ತಿಂಗಳು ತುಂಬಿದ ಗರ್ಭಿಣಿಯನ್ನು ಸಾವಿರಾರು ಮಂದಿಯ ಎದುರಲ್ಲೇ ಶ್ರೀರಾಮನ ಹೆಸರಲ್ಲಿ ಅಟ್ಟಿಸಿಕೊಂಡು ಹೋಗಿ ಆಕೆಯ ಗರ್ಭ ಸೀಳಿದ್ದಾರೆ. ಶಿಶುವಿನ ಭ್ರೂಣ ವನ್ನು ಖಡ್ಗದಿಂದ ಚುಚ್ಚಿ ಹೊರಗೆಳೆದು, ಆ ಖಡ್ಗವನ್ನು ಹಿಡಿದುಕೊಂಡು 'ಜೈ ಶ್ರೀರಾಮ್, ಜೈ ಶ್ರೀರಾಮ್' ಎಂದು ಅಟ್ಟಹಾಸದಿಂದ ನರ್ತಿಸುತ್ತಾ, ಬಳಿಕ ಆ ಭ್ರೂಣವನ್ನು ನಿಗಿನಿಗಿ ಬೆಂಕಿಯಲ್ಲಿ ಸುಟ್ಟಿದ್ದಾರೆ. ತಾಯಿಯನ್ನೂ ಅಮಾನುಷವಾಗಿ ಸುಟ್ಟು ಹಾಕಿದ್ದಾರೆ" (ಸಿದ್ಧಾರ್ಥ ವರದರಾಜನ್ : 'ದಿ ಮೇಕಿಂಗ್ ಆಫ್ ಟ್ರಾಜಿಡಿ' - ಪೆಂಗ್ವಿನ್ ಬುಕ್ಸ್, 2002) ಪುಟ 139).

"ಗೀತಾ ಬೆನ್ ಎಂಬ 28 ವರ್ಷ ಪ್ರಾಯದ ಹಿಂದೂ ಮಹಿಳೆ ತನ್ನ ಸಂಗಾತಿಯಾದ ಮುನ್ನಾಭಾಯ್ ಸಲೀಂ ಶೇಖ್ ಎಂಬ ಗಂಡಸಿನ ಜೊತೆ ಅಹಮದಾಬಾದಿನ (ಗುಪ್ತನಗರ) ಬೀದಿಯಲ್ಲಿ ಸ್ಕೂಟರಿನಲ್ಲಿ ಹೋಗುತ್ತಿರುವಾಗ, ಸ್ಕೂಟರ್ ಚಲಿಸುತ್ತಿರುವಂತೆಯೇ ಆತನ ರುಂಡ ಕತ್ತರಿಸಿದ್ದಾರೆ. ಅಷ್ಟುದೂರ ಹೋಗಿ ಸ್ಕೂಟರ್ ಬಿದ್ದಿದೆ. ಬಿದ್ದ ಸ್ಕೂಟರಿನಿಂದ ಎದ್ದ ಈ ಹೆಣ್ಣು ಮಗಳು ಹೆದರಿ ಓಡಲು ಆರಂಭಿಸಿದಾಗ ಆಕೆಯನ್ನು ಬೆನ್ನಟ್ಟಿಸಿಕೊಂಡು ಆ ಗುಂಪು ಹೋಗಿದೆ. ಅವರಲ್ಲೊಬ್ಬಾತ ಕೂಗಿ "ಆಕೆ ಹಿಂದೂ, ಆಕೆಯನ್ನು ಬಿಟ್ಟುಬಿಡಿ" ಎನ್ನುತ್ತಾನೆ. ಆಗ ಇನ್ನೊಬ್ಬಾತ "ಆಕೆ ಹಿಂದೂವಾದರೇನಂತೆ? ಮುಸ್ಲಿಮನ ಜೊತೆಗಿಲ್ಲವೇ?" ಎಂದು ಹೊಟ್ಟೆಗೆ ತಿವಿಯುತ್ತಾನೆ. ಧರೆಗುರುಳಿದ ಆಕೆಯನ್ನು ಮತ್ತೂ ಬಿಡದೆ ಬೆತ್ತಲೆ ಮಾಡಿ 'ಗ್ಯಾಂಗ್ ರೇಪ್' ಮಾಡಿದ್ದಾರೆ". (ಅದೇ ಪುಸ್ತಕ ಪುಟ 174-175)

ಈ ಮಹಾದುರಂತ ಕಥನದ ಭಾಗವಾದ ಇಂಥ ಕಥಾನಕಗಳು ಒಂದಲ್ಲ, ಎರಡಲ್ಲ, ಮಕ್ಕಳ ಎದುರೇ ಪ್ರಾಯಕ್ಕೆ ಬರುವ ಅಕ್ಕನನ್ನು, ತಾಯಿಯನ್ನು, ಅಜ್ಜಿಯನ್ನೂ ಬಿಡದೆ ರೇಪ್ ಮಾಡಿದ, ಕೊಂದ, ಸುಟ್ಟ ನೂರಾರು ಘಟನೆಗಳು ದಾಖಲಾಗಿವೆ. ದೆಹಲಿಯಲ್ಲಿ ಪ್ರಧಾನಿಯನ್ನು ಕಂಡು ತಮ್ಮ ಅಳಲನ್ನು ಹೇಳಿಕೊಳ್ಳಲು ಬಂದ ನಿರ್ಗತಿಕ ಮಕ್ಕಳು, ತಮ್ಮ ದುಗುಡ-ತಲ್ಲಣಗಳನ್ನು ಪತ್ರಿಕೆಗಳಿಗೆ ಹೇಳಿಕೊಂಡಿದ್ದಾರೆ. ಈ ನೊಂದ ಹೃದಯಗಳಿಗೆ ನ್ಯಾಯ-ಭದ್ರತೆಗಳು ದೊರಕದೆ ಕೇವಲ ಅಹಿಂಸೆಯ ಭಜನೆ ಫಲಕಾರಿಯಾದೀತೆ? ಇಂಥ ಕ್ರೌರ್ಯವನ್ನು ಪತ್ರಿಕೆಗಳಲ್ಲಷ್ಟೇ ಖಂಡಿಸಿದರೆ ಹಿಂಸೆ ನಿಲ್ಲುವುದಿಲ್ಲ. ಅದರ ಬಗ್ಗೆ ಮಾತನಾಡಲೇ ಬಾರದು, ಅದನ್ನು ಮತ್ತೆ ಮತ್ತೆ ನೆನಪಿಸಿ ಕೊಳ್ಳಬಾರದು, ವಿಶ್ಲೇಷಿಸಬಾರದು' ಎಂದರೆ ಆ ದುಃಖ-ದುಮ್ಮಾನಗಳನ್ನು ಬಲವಂತವಾಗಿ ತಾತ್ಕಾಲಿಕವಾಗಿ ಅದುಮಿ ಹಿಡಿದಂತೆ. ಇದರಿಂದ ಹಿಂಸೆ ಕೊನೆಗೊಳ್ಳುವುದಿಲ್ಲ. ಅದು ಮತ್ತೆ ಮತ್ತೆ ವಿಕಾರ ರೂಪದಲ್ಲಿ ಭುಗಿಲೇಳುತ್ತಲೇ ಇರುತ್ತದೆ. ಹಿಂಸೆಯ ಮೂಲವನ್ನೇ ತೀವ್ರವಾಗಿ ಶೋಧಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳದ ಹೊರತು ಹಿಂಸೆ ನಿಲ್ಲುವುದಿಲ್ಲ. ರಕ್ತ ಚಿಲ್ಲಿದಾಗ 'ರಕ್ತ ರಕ್ತ' ಎಂದು ಹೆದರಿ, ದುಃಖದಿಂದ ಓಡುವುದರಿಂದ ಹಿಂಸೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ರಕ್ತ ಚೆಲ್ಲುವ ಮೂಲಕ್ಕೇ ನೇರ ಕೈ ಹಾಕಿದಾಗ ಮಾತ್ರ ರಕ್ತ ಹರಿಯುವುದನ್ನು ತಡೆಯಬಹುದು. ಇದು ಬಹಳ ಮುಖ್ಯ.

ಮಹಿಳೆಯರು ಮತ್ತು ಮನುವಾದಿಗಳು

ತಾಲಿಬಾನಿಗಳೂ ಹೆಂಗಸರನ್ನು ಗುಂಡಿಕ್ಕಿ ಕೊಂದಿದ್ದಾರೆ. ಅದರೆ ಆ ಕೊಲೆಗಳು 'ಹೆಂಗಸರು ಬುರ್ಖಾ ಹಾಕುತ್ತಿಲ್ಲ', 'ಧರ್ಮದ ನೀತಿ-ನಿಯಮಗಳನ್ನು ಸರಿಯಾಗಿ ಪರಿಪಾಲಿಸುತ್ತಿಲ್ಲ' ಎಂಬೆಲ್ಲಾ ಧಾರ್ಮಿಕ ಕಾರಣಗಳಿಂದಾಗಿ ನಡೆದಿವೆ.



ತಾಲಿಬಾನಿಗಳು ಹೆಂಗಸರ ಜೊತೆ ವಿಕೃತ ಕಾಮಿಗಳಾಗಿ ವರ್ತಿಸಿದ್ದು ಕಡಿಮೆ. ಆದರೆ ಗುಜರಾತಿನಲ್ಲಿ ಧಾರ್ಮಿಕ ಕಾರಣಕ್ಕೂ ಮೀರಿ ಕಾಮಪ್ರೇರಿತ ವಿಕೃತ ಹಿಂಸಾರತಿ ವಿಜೃಂಭಿಸಿದೆ! ಇಂಥಲ್ಲಿ ಧಾರ್ಮಿಕತೆಯ ಲವಲೇಶವಾದರೂ ಇರಲು ಸಾಧ್ಯವೆ?

ಈ ಜನಾಂಗೀಯ ಹತ್ಯೆ, ಋಷಿಗಳ, ಸಂತರ ಉದಾರ ಪರಂಪರೆಯ ಬಗ್ಗೆ ಅಭಿಮಾನ ಪಡುವ ಕೋಟ್ಯಾಂತರ ಹಿಂದೂ ಧಾರ್ಮಿಕರ ಎದೆ ನಡುಗಿಸಿದೆ. ಗರ್ಭಕ್ಕೆ ಆಘಾತ ನೀಡಿದೆ; ಮಾತ್ರವಲ್ಲ, ಮರ್ಯಾದಾ ಪುರುಷೋತ್ತಮ ಶ್ರೀರಾಮ ಈ ಕ್ರೌರ್ಯ ಕಂಡು ಈ ದೇಶದ ನೆಲವನ್ನೇ ಇಂದು ತ್ಯಜಿಸಲಾರನೇ ಎಂಬ ಆತಂಕ ಅವರಲ್ಲಿ ಮೂಡಿಸಿದೆ.

ಕೋದಂಡ ಆಭರಣ ಶ್ರೀರಾಮನಿಗೆ

ಶ್ರೀರಾಮದೇವರ ಯಾವುದೇ ಪರಂಪರಾಗತ ಫೋಟೋ ನೋಡಿ. ಅದರಲ್ಲಿ ಶ್ರೀರಾಮ ಯಾವಾಗಲೂ ಸೀತಾಸಹಿತ, ಸೀತಾ ರಾಮನಾಗಿಯೇ ನೆಮ್ಮದಿ ಕಾಣಿಸಿಕೊಳ್ಳುತ್ತಾನೆ. ಕೊರಳಲ್ಲಿರುವ ಹಾರಗಳಂತೆ, ಭುಜದಲ್ಲಿರುವ ಕೋದಂಡವೂ ಕೇವಲ ಆಭರಣದಂತೆ ಆತನ ಮೈಯಲ್ಲಿ ಶೋಭಿಸುತ್ತಿರುತ್ತದೆ. ಸೌಮ್ಯ ಸ್ವರೂಪಿಯಾದ ಶ್ರೀರಾಮ ಎಂದೂ ತೋಳುಬ್ಬಿಸಿದ ರಾಮನಾಗಿ, ಕೋದಂಡ ಕೈಯಲ್ಲಿ ಹಿಡಿದು ಯುದ್ಧಕ್ಕೆ ಹೊರಟವನಂತೆ ಯಾವ ಚಿತ್ರದಲ್ಲೂ ಪ್ರತಿಬಿಂಬಿತವಾಗಿಲ್ಲ. ತೋಳ್ಬಲವನ್ನು ಪ್ರದರ್ಶಿಸುವ ರಾಮ ಹಿಂದೂ ಧಾರ್ಮಿಕರು ಉಪಾಸಿಸುವ ಶ್ರೀರಾಮಚಂದ್ರ ಪ್ರಭುವಲ್ಲ, ಶ್ರೀರಾಮನ ಸಂಕೇತವೂ ಮಲಿನಗೊಂಡಿದೆ.

ದೇವರ ಮುಂದೆ ಜ್ಯೋತಿ ಹಚ್ಚುವ ಕೈ ಜೀವಿಗಳಿಗೆ ಬೆಂಕಿ ಇಡಲು ಪ್ರಾರಂಭಿಸಿದರೆ, ರಕ್ತ ಚೆಲ್ಲುವುದೇ ದೇವರಿಗೆ ಬಿಡುವ ರಕ್ತತರ್ಪಣವೆಂದಾದರೆ, 'ಮನೆಮನೆಗಳಲ್ಲಿ ಖಡ್ಗ ಉಪಾಸನೆ ಮಾಡಿ ಮತ್ತು ಆ ಖಡ್ಗದಿಂದ ದಿನಾಲೂ ಇನ್ನೊಂದು ಕೋಮಿನವನ ರಕ್ತಹರಿಸಿ, ಅದನ್ನು ಹಣೆಯಲ್ಲಿ ತಿಲಕ ಇಟ್ಟುಕೊಳ್ಳಿ', 'ಚರ್ಚುಗಳನ್ನು ಸುಟ್ಟುಹಾಕಿ', 'ರಾಮ ಪಟ್ಟಕ್ಕೆ, ಅನ್ಯಕೋಮಿನ ದೇವರು ಚಟ್ಟಕ್ಕೆ', 'ನರಹಂತಕ ದಾರಾಸಿಂಗ್‌ನ ಫೋಟೋ ಮನೆಮನೆಗಳಲ್ಲಿಟ್ಟು ಪೂಜೆ ಮಾಡಿ' ಎಂಬುದೆಲ್ಲಾ ಹಿಂದೂ ಸಮಾಜೋತ್ಸವ ಗಳ (ಉಡುಪಿ) ಘೋಷಣೆಗಳಾದರೆ, ಹಿಂದೂ ಧರ್ಮದ ನಾಶಕ್ಕೆ ಅನ್ಯರು ಬೇಕೇ? ಜೀವ ಪಾವಿತ್ರ್ಯತೆಯ ಕಲ್ಪನೆಯೇ ಇಲ್ಲದ ಮಂದಿ ಧಾರ್ಮಿಕರಾದಾರೇ? ತಮ್ಮ ತಮ್ಮ ಧರ್ಮಕ್ಕೆ ಇವರು ಕಳಂಕಪ್ರಾಯರಲ್ಲವೆ? ಪಾವಿತ್ರ್ಯತೆಯ ಭಾವನೆ, ಎಲ್ಲ ಧರ್ಮಗಳ ಅಡಿಪಾಯ. ಈ ದೃಷ್ಟಿಯಲ್ಲಿ ಜೀವ ಹಿಂಸೆಯನ್ನು ಪ್ರಚೋದಿಸು ವಾಗ ಮೂಲಭೂತವಾದಿಯು ಧರ್ಮ ವಿರೋಧಿ ನಾಸ್ತಿಕನಾದಾನು. ಧರ್ಮವನ್ನೇ ಬದುಕಿನ ಉಸಿರನ್ನಾಗಿ ಮಾಡಿಕೊಂಡ ಅಸಂಖ್ಯ ಅಮಾಯಕ ಹಿಂದೂಗಳ ಬುದ್ಧಿಗೆ ಈ ಘೋರಪಾತಕಿಗಳ ಧರ್ಮಾಂಧತೆ ನಿಲುಕುವುದಿಲ್ಲ.

ಬಾಬ್ರಿ ಮಸೀದಿ ಕೆಡವಿದ್ದನ್ನು ಕೇಳಿ, "ಇನ್ನೊಬ್ಬರ ದೇವ ಮಂದಿರವನ್ನು ಹಾಳು ಮಾಡು ವುದು ಸರಿಯೇ? ನಮ್ಮಂತೆಯೇ ಅದು ಅವರ ಪವಿತ್ರ ಸ್ಥಳವಲ್ಲವೆ? ಇದು ದೇವರು ಮೆಚ್ಚುವ ಕೆಲಸವೆ? ಇಂಥವರು ಧಾರ್ಮಿಕರು ಹೇಗೆ ಆದಾರು? ಈ ದೇಶಕ್ಕೆ ಏನೋ ಕೇಡು ಕಾದಿದೆ" ಎಂದು ನೊಂದು ನುಡಿದ ನನ್ನ ಸಂಪ್ರದಾಯಸ್ಥ ಅಮ್ಮನ ಧರ್ಮ ನನ್ನದು. "ಮಸೀದಿಯ ಗುಮ್ಮಟಗಳು ಉರುಳಿದಾಗ, ವೇದಾಂತದ (ಉಪನಿಷತ್) ಗುಮ್ಮಟಗಳೇ ಕೆಳಗುರುಳಿದಂತೆ ನನಗನ್ನಿಸಿತು" ಎಂದು ದುಃಖದಿಂದ ಪತ್ರ ಬರೆದ ನನ್ನ ಆಧುನಿಕ ವಿದ್ಯಾವಂತ ತಮ್ಮನ ಧರ್ಮ ನನ್ನದು. 'ಹಿಂದೂತ್ವ'ದ ಧರ್ಮ ನನಗೆ ತಿಳಿಯುವುದಿಲ್ಲ.

- ಗೌರಿ ಲಂಕೇಶ್

ಧರ್ಮ

ಧರ್ಮ ಧರ್ಮ ಎಂಬವರ ಕೈಯಲ್ಲಿ ಇಂದಿವೆ
ಧರ್ಮಗಳು ಕೊಲೆಯಾಗಿ ಹೋದುದನು ಕಂಡೆ
ಮುಗ್ಧರನು ವಂಚಿಸಲು ಮಾತ್ರವೇ ನೋಡಿ
ಧರ್ಮ ಎಂದರಚುವರು ಕಪಟಿಗಳು ಕೂಡಿ

- ವಿಡಂಬಾರಿ

ಮಹಿಳಾ ವಿರೋಧಿ ಜನಸಂಖ್ಯಾ ನೀತಿಗಳು

ಮಹಿಳೆಯರ ಆರೋಗ್ಯ ಶಿಕ್ಷಣಗಳಿಗೆ ವೆಚ್ಚ ಮಾಡಲು ಹಣವಿಲ್ಲವೆನ್ನುವ ಸರ್ಕಾರ ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿ ವೆಚ್ಚವನ್ನು ಗಣನೀಯವಾಗಿ ಏರಿಸಿದೆ. ಮಹಿಳಾ ವಿರೋಧಿ ಜನಸಂಖ್ಯಾ ನಿಯಂತ್ರಣ ಯೋಜನೆಗಳ ವಿರುದ್ಧ ನಡೆಸಿದ ಹಲವು ಹೋರಾಟಗಳ ಫಲವಾಗಿ ರಾಷ್ಟ್ರೀಯ ಜನಸಂಖ್ಯಾನೀತಿಯನ್ನು ಜಾರಿಗೆ ತರಲಾಗಿತ್ತು. ಆದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ವಿಧಿಸಿದ ನಿಗದಿತ ಕೋಟಾ ಪಾಲಿಸಿಯ ಕಾರಣದಿಂದಾಗಿ ರಾಜ್ಯ ಸರ್ಕಾರಗಳು ಕೋಟಾಭರ್ತಿ ಮಾಡುವ ನಿಟ್ಟಿನಲ್ಲಿ ಬಡ ಜನರನ್ನು ಬಲವಂತವಾಗಿ ಜನಸಂಖ್ಯಾ ನಿಯಂತ್ರಣ ಸೂತ್ರದಡಿಯಲ್ಲಿ ತರುತ್ತಿವೆ. ಈ ಬಲವಂತ ನೀತಿಗೆ ಪುಷ್ಟಿಯಾಗಿ ಕೇಂದ್ರ ಸರ್ಕಾರ 3 ಕ್ಕಿಂತ ಹೆಚ್ಚು ಮಕ್ಕಳಿರುವವರಿಗೆ ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲವೆಂಬ ನೀತಿಯನ್ನು ಹರಿಬಿಟ್ಟಿದ್ದು ಹಲವು ರಾಜ್ಯಗಳಲ್ಲಿ ಅದನ್ನು ಅನುಷ್ಠಾನಕ್ಕೆ ತರಲಾಗಿದೆ. ಇದು ಮತ್ತೆ ಬಡಜನರಿಗೇ ಹೆಚ್ಚು ಸಂದರ್ಭದಲ್ಲಿ ಅನ್ವಯವಾಗುತ್ತದೆ. ಬಡತನದಿಂದ ನರಳುತ್ತಿರುವ ಜನ ವಿಭಾಗದಲ್ಲಿ ಮಕ್ಕಳ ಮರಣದ ಸಂಖ್ಯೆ 1000 ಕ್ಕೆ 82 ರಿಂದ 85 ಇದೆ ಎನ್ನುವುದನ್ನು ಕಡೆಗಣಿಸಲಾಗದು. ಒಟ್ಟು ಭಾರತದ ಸಂದರ್ಭದಲ್ಲಿ ಕೂಡ ಈ ಪರಿಮಾಣ 72 ರಷ್ಟಿದ್ದು ಇದೂ ಕೂಡ ಅತಿ ಹೆಚ್ಚಿನ ಪರಿಮಾಣ ಎಂಬುವುದನ್ನಿಲ್ಲಿ ಗಮನಿಸಬೇಕು, 0-6 ರ ವಯೋಮಾನದ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ ಎಂಬುದು ಕಳೆದ ಜನಗಣತಿಯ ಸಂಧರ್ಭದಲ್ಲಿ ಬೆಳಕಿಗೆ ಬಂದಿದೆ. 1991 ರಲ್ಲಿ 1000 ಪುರುಷರಿಗೆ 945 ಮಹಿಳೆಯರಿದ್ದರೆ ಅದರ ಪರಿಮಾಣ ಈಗ ಎಂದರೆ 2001 ರಲ್ಲಿ 927 ಕ್ಕೆ ಇಳಿದಿದೆ. ಅಂಕಿಅಂಶಗಳು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಗಂಟೆಯಾಗಿ ಪರಿಣಮಿಸಿ, ತಕ್ಷಣ ಈ ಆತಂಕಕಾರೀ ಬೆಳವಣಿಗೆಯನ್ನು ಗುರುತಿಸಿ ಅದನ್ನು ಸರಿಪಡಿಸುವತ್ತ ಗಂಭೀರ ಗಮನ ಹರಿಸುವ ಅವಶ್ಯಕತೆ ಇದೆ. ಅದಕ್ಕೆ ಬದಲಾಗಿ ಈಗ ತರುತ್ತಿರುವ ಜನಸಂಖ್ಯಾ ನೀತಿಗಳಿಂದ ಮತ್ತು ಬಹಳ ಹೇಳಿಕೊಳ್ಳಲ್ಪಡುತ್ತಿರುವ ಅಭಿವೃದ್ಧಿ ಯೋಜನೆಗಳು, ಲಿಂಗ ನ್ಯಾಯ ಒದಗಿಸುವ ಬದಲು ಸ್ತ್ರೀ ಭ್ರೂಣ ಹತ್ಯೆಗಳಂತಹ ಕ್ರಿಯೆಗಳು ಹೆಚ್ಚಾಗಿ ಹೆಣ್ಣುಮಕ್ಕಳ ಸಂಖ್ಯೆ ಇನ್ನಷ್ಟು ಕ್ಷೀಣಿಸಲು ಅವಕಾಶ ನೀಡಿದೆ.

ಇದೇ ಸಂದರ್ಭದಲ್ಲಿ ವಾಜಪೇಯಿಯವರ ಉದಾರೀಕೃತ ಆಡಳಿತದ ಅವಧಿಯಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ಅಪಾಯಕಾರಿ ಗರ್ಭನಿರೋಧಕಗಳನ್ನು ಸರ್ಕಾರಿ ಆರೋಗ್ಯವಲಯಗಳ ಮೂಲಕ ವ್ಯಾಪಕವಾಗಿ ಪ್ರೋತ್ಸಾಹಿಸಲಾಗುತ್ತದೆ. ಇದರ ಜೊತೆಯಲ್ಲಿ ಇನ್ನೊಂದು ಅತ್ಯಂತ ಕಳವಳಕಾರೀ ಅಂಶವೆಂದರೆ ವಾಜಪೇಯಿ ಸರ್ಕಾರವು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ಔಷಧಿಗಳನ್ನು ಭಾರತದ ಮಹಿಳೆಯರು ಮತ್ತು ಪುರುಷರ ಮೇಲೆ ಪ್ರಯೋಗಿಸಲು ಅವಕಾಶ ನೀಡಿದೆ' ಇದು ನಮ್ಮ ಜನರ ಆರೋಗ್ಯಕ್ಕೆ ಮಾರಕವಾಗಿದೆ.



ಮಹಿಳಾ ಮತದಾರರ ಹೊಣೆ....

ಪುಟ 7 ರಿಂದ

ಗಂಡಸರಿಗಿಂತ ಮೂರನೇ ಒಂದು ಭಾಗದಷ್ಟು ಕಡಿಮೆ ಕೂಲಿ ಪಡೆಯುತ್ತಿದ್ದಾರೆ. ಗ್ರಾಮೀಣ ಮಹಿಳೆಯರ ನಿರುದ್ಯೋಗ ಅಗಾಧವಾಗಿ ಬೆಳೆಯುತ್ತಿದೆ. ಸರ್ಕಾರಿ ಯೋಜನೆಗಳಲ್ಲಿ ಕೊನೆಯ ಪಕ್ಷ ಶೇಕಡಾ 30 ಉದ್ಯೋಗಗಳನ್ನು ಮಹಿಳೆಯರಿಗೆ ನೀಡುವಂತೆ ನೋಡಿಕೊಳ್ಳಬೇಕಾಗಿರುವಾಗ, ಸರ್ಕಾರದ ಅಂಕಿಅಂಶಗಳೇ/ ಅಂದಾಜುಗಳೇ ಅದು ಶೇಕಡಾ 15 ಗಿಂತಲೂ ಕಡಿಮೆ ಇದೆ ಎಂದು ಒಪ್ಪಿಕೊಳ್ಳುತ್ತವೆ. ಈ ರೀತಿಯ ನಿರುದ್ಯೋಗ ಮತ್ತು ಸರ್ಕಾರದ ದಿವಾಳಿಕೋರ ಆಹಾರ ನೀತಿಗಳ ಫಲವಾಗಿ ಉಂಟಾಗಿರುವ ಆಹಾರದ ಅಭದ್ರತೆ ಯಿಂದಾಗಿ ಗ್ರಾಮೀಣ ಮಹಿಳೆಯರ ಆರೋಗ್ಯ ಇನ್ನೂ ಹದಗೆಟ್ಟಿದೆ. ಸಂತಾನೋತ್ಪತ್ತಿ ವಯಸ್ಸಿನ ಗ್ರಾಮೀಣ ಭಾರತದ ಮಹಿಳೆಯರಲ್ಲಿ ಶೇಕಡಾ 80 ರಷ್ಟು ರಕ್ತ ಹೀನತೆ (ANEMIA) ಮತ್ತು ಶೇಕಡಾ 70 ರಷ್ಟು ಪೋಷಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ.

ಅಸಂಘಟಿತ ವಲಯದಲ್ಲಿ ಅಪಾರ ಸಂಖ್ಯೆಯ ಮಹಿಳೆಯರು ದುಡಿಯುತ್ತಿದ್ದಾಗ್ಯೂ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಯು ಶಿಫಾರಸು ಮಾಡಿದ್ದಾಗ್ಯೂ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಿಲಿಯಾಂತರ ಮಹಿಳೆಯರ ರಕ್ಷಣೆಗಾಗಿ ಏನನ್ನೂ ಮಾಡಲು ಸರ್ಕಾರ ನಿರಾಕರಿಸುತ್ತಿದೆ. ಸಂಘಟಿತವಲಯದಿಂದ ಹೊರದೂಡಲ್ಪಡುತ್ತಿರುವ ಹೆಚ್ಚಿನ ಸಂಖ್ಯೆಯ ಮಹಿಳೆಯರು ಕನಿಷ್ಠ ಕೂಲಿಯ ಭರವಸೆಯೂ ಇಲ್ಲದೆ ತಾತ್ಕಾಲಿಕ, ದಿನಗೂಲಿ ಅಥವಾ ಗೃಹಾಧಾರಿತ ಕೆಲಸಗಳತ್ತ ತಳ್ಳಲ್ಪಡುತ್ತಿದ್ದಾರೆ. ಬೀಡಿ, ಕೈಮಗ್ಗ ಮುಂತಾದ ಹಾಗೂ ಪರಂಪರಾಗತ ಕ್ಷೇತ್ರಗಳಲ್ಲಿನ ಕಾರ್ಮಿಕರಲ್ಲಿ ಬಹುಪಾಲು ಮಹಿಳೆಯರೇ ಆಗಿದ್ದಾರೆ. ಸರ್ಕಾರದ ಉದಾರೀಕರಣ ನೀತಿಯ ಫಲದಿಂದಾಗಿ ತೀವ್ರ ಬಿಕ್ಕಟ್ಟಿಗೆ ಈ ಕ್ಷೇತ್ರ ಸಿಲುಕಿರುವುದರಿಂದ ಮಹಿಳೆಯರು ಪರಿತಪಿಸುವಂತಾಗಿದೆ. ತನ್ನ ಈ ವಿಫಲತೆಯನ್ನು ಮುಚ್ಚಿಕೊಳ್ಳಲು ಬೇಕೋ ಬೇಡವೋ ಎನ್ನುವಂತೆ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಒಂದು ವಿಮಾ ಯೋಜನೆಯನ್ನು ಸರ್ಕಾರ ಘೋಷಿಸಿದೆ. ಆ ಯೋಜನೆಗೆ ಬೇಕಾದ ನಿಧಿಯ ಬಗ್ಗೆ ಆಯವ್ಯಯದಲ್ಲಿ ಒಂದು ಬಿಡಿಗಾಸನ್ನು ಮೀಸಲಾಗಿಟ್ಟಿಲ್ಲ ಹಾಗಾಗಿ ಅದೊಂದು ತುಟಿಗೆ ತುಪ್ಪ ಸವರುವ ಒಂದು ದೊಡ್ಡ ಮೋಸದ ಯೋಜನೆಯಷ್ಟೆ.

ಮಹಿಳೆಯರ ಮೇಲಿನ ಹಿಂಸೆಯ ಬಗ್ಗೆ ಧೋರಣೆ

ರಾಜಸ್ಥಾನದ ಸತಿ ಕೊಲೆ ಮೊಕದ್ದಮೆ (ರೂಪ್ ಕನ್ವರ್ ಮೊಕದ್ದಮೆ)ಯಂತಹ ಸಮಾಜವಿರೋಧಿ ಮಹಿಳಾ ವಿರೋಧಿ ಘಟನೆಗಳನ್ನು ಸಂಪ್ರದಾಯದ ಹೆಸರಿನಲ್ಲಿ ಬೆಂಬಲಿಸುವ ಬಿಜೆಪಿಯು ಅಂತಹ ಆಚರಣೆಗಳಿಗೆ ಮತ್ತು ಮಹಿಳೆಯರ ಮೇಲಿನ ಹಿಂಸೆಗೆ ಕುಮ್ಮಕ್ಕು ನೀಡುತ್ತಿದೆ. ಆ ಮೊಕದ್ದಮೆಯಲ್ಲಿ ಸತಿಪದ್ಧತಿಯನ್ನು ವೈಭವೀಕರಿಸಿದ್ದಾರೆಂಬ ಆಪಾದನೆಗೊಳಗಾಗಿರುವ ಬಿಜೆಪಿ ನಾಯಕರುಗಳು ಇತ್ತೀಚೆಗೆ ಚುನಾಯಿತರಾಗಿರುವ ವಿಧಾನಸಭಾ ಸದಸ್ಯರು ಹಾಗೂ ಬಿಜೆಪಿಯ ಯುವಮೋರ್ಚಾದ ನಾಯಕರಾಗಿದ್ದಾರೆ. ಎಲ್ಲಾ ಆಪಾದಿತರನ್ನು ಖುಲಾಸೆಗೊಳಿಸಿ ಸತಿವಿರೋಧಿ ಕಾನೂನಿನ ತಳಪಾಯವನ್ನೇ ಪ್ರಶ್ನಿಸಿದ ವಿಶೇಷ ನ್ಯಾಯಾಲಯ ಎನಿಸಿಕೊಂಡ ಕೋರ್ಟಿನ ಅತ್ಯಂತ ನಾಚಿಕೆಗೇಡಿನ ತೀರ್ಪಿನ ವಿರುದ್ಧ ಕೋರ್ಟಿಗೆ ಮೊರೆ ಹೋಗಲು ಕೂಡ ಈಗಿನ ರಾಜಸ್ಥಾನದ ಬಿಜೆಪಿ ಸರ್ಕಾರ ನಿರಾಕರಿಸುತ್ತಿದೆ. ಹಾಗೆ ಮಾಡುವುದರ ಮೂಲಕ ಅಂತಹ ಆರೋಪಿಗಳಿಗೆ ಉತ್ತೇಜನ ನೀಡುತ್ತಿದೆ. ಈ ರೀತಿಯಲ್ಲಿ ಈಗಿನ ಬಿಜೆಪಿ ನಾಯಕತ್ವವು ಸತಿ ಪದ್ಧತಿಯೆಂಬ ಸಂಪ್ರದಾಯದ ಹೆಸರಿನಲ್ಲಿ ವಿಧವೆಯರ ಹತ್ಯೆಗೆ ತನ್ನ ಸಮ್ಮತಿಯನ್ನು ನೀಡಿದೆ.

ಕಳೆದ ಐದು ವರ್ಷಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಬಹಳ ಮುಖ್ಯವಾಗಿ ಕೌಟುಂಬಿಕ ಹಿಂಸೆಗಳು - ಶೇಕಡಾ 15ರಷ್ಟು ಹೆಚ್ಚಾಗಿವೆ. ಹೀಗಿದ್ದಾಗ್ಯೂ, ಈ ಸರ್ಕಾರವು ಒಂದು ಮಸೂದೆಯನ್ನು ಮಂಡಿಸಿ, ಅದರಲ್ಲಿ ಕೌಟುಂಬಿಕ ಹಿಂಸೆ ತಡೆಯುವುದರ ಬದಲು ಆ ಹಿಂಸೆಯ ವಿವರಣೆಯ ಮೂಲಕ ಕೌಟುಂಬಿಕ ಹಿಂಸೆಯನ್ನು ಪೋಷಿಸುವ ಪ್ರಯತ್ನ ಮಾಡಿ, ಒಂದು ವಿಶ್ವದಾಖಲೆಯನ್ನೇ ಸೃಷ್ಟಿಸಿದೆ. ವಿಶ್ವದ ಏಕಮಾತ್ರ ಮಸೂದೆಯಾಗಿರುವ ಇದರಲ್ಲಿ ಸ್ವಯಂ ರಕ್ಷಣೆಯ ಹೆಸರಿನಲ್ಲಿ ಹಿಂಸೆ ನಡೆಸುವವರಿಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ದಾರಿಯನ್ನು ತೋರಲಾಗಿದೆ. ಹಿಂಸೆ ಪದೇ ಪದೇ ನಡೆದು ಅದೊಂದು ಅಭ್ಯಾಸವಾಗಿದ್ದರೆ ಮಾತ್ರ ಅದು ಕೌಟುಂಬಿಕ ಹಿಂಸೆಯಾಗುತ್ತದೆ ಎಂಬವಿವರಣೆ ಆ ಮಸೂದೆಯಲ್ಲಿದೆ. ಒಂದು ಮಾದರಿ 'ಹಿಂದೂ' ಕುಟುಂಬವನ್ನು ಸಂರಕ್ಷಿಸಲು ಹೊಡೆತ ಬಡೆತ ತಿಂದರೂ ಮಹಿಳೆ ಹೊಂದಿಕೊಳ್ಳಬೇಕು, ಅವಳು ತಗ್ಗಿಬಗ್ಗಿ ನಡೆಯಬೇಕು ಎಂಬ ಆರ್‌ಎಸ್‌ಎಸ್‌ನ ಸೈದ್ಧಾಂತಿಕ ತಿಳುವಳಿಕೆಗೆ ಅನುಗುಣವಾಗಿಯೇ ಇರುವ ಬಿಜೆಪಿಯ ಮನೋಭಾವವಿದಷ್ಟೆ. ಮಹಿಳಾ ಸಂಘಟನೆಗಳು ಹಾಗೂ ಎಡಪಕ್ಷಗಳ ಸಂಸದರ ಪ್ರಬಲ ಪ್ರತಿರೋಧದ ನಂತರ ಈ ವಿಧೇಯಕವನ್ನು ಪುನರ್‌ರಚಿಸಲು ಸಂಸತ್ತಿನ ಆಯ್ಕೆ ಸಮಿತಿಗೆ ಒಪ್ಪಿಸಲಾಗಿತ್ತು. ಆ ಸಮಿತಿಯು ನೀಡಿದ ಸಣ್ಣ ಶಿಫಾರಸನ್ನು ಸರ್ಕಾರ ಸ್ವೀಕರಿಸಲಿಲ್ಲ. ಅಷ್ಟೆ ಸಾಲದೆಂಬಂತೆ, ಕೌಟುಂಬಿಕ ಹಿಂಸೆಯನ್ನು ತಡೆಯಲು ಯಾವುದೇ ಕಾನೂನು ಮಾಡಲು ಮುಂದಾಗಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಮಹಿಳೆಯರ ಮಾನಸಿಕ ಹಾಗೂ ದೈಹಿಕ ಚಿತ್ರಹಿಂಸೆಯ ಕುರಿತಾದ ಒಂದು ಪ್ರಮುಖ ಕಾಯಿದೆಯಾಗಿರುವ ಸೆಕ್ಷನ್ 498ಎ ಯನ್ನು ದುರ್ಬಲಗೊಳಿಸುವ ಮಳಿಮತ್ ಸಮಿತಿ ಶಿಫಾರಸನ್ನು ಒಪ್ಪಿಕೊಳ್ಳುವ ಇಂಗಿತವನ್ನು ಸರ್ಕಾರ ವ್ಯಕ್ತಪಡಿಸಿದೆ. ಆದ್ದರಿಂದ ಕಾನೂನನ್ನು ಬಲಪಡಿಸುವ ಬದಲು, ಸರ್ಕಾರ ತದ್ವಿರುದ್ಧದ ಪ್ರಯತ್ನ ನಡೆಸಿದೆ.

ಲೈಂಗಿಕ ಹಿಂಸೆಯ ಅದರಲ್ಲೂ ಪ್ರಮುಖವಾಗಿ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಹಿಂಸೆಯ ಕುರಿತಾದ ಕಾನೂನನ್ನು ಸುಧಾರಿಸುವ ಅಗತ್ಯತೆಯನ್ನು ಎತ್ತಿ ತೋರಿಸಿದ ಕಾನೂನು ಆಯೋಗ ಅನೇಕ ಪ್ರಮುಖ ಶಿಫಾರಸ್ಸುಗಳನ್ನು ಮಾಡಿದೆ. ಇಂದು ಅತ್ಯಾಚಾರದ ಮೊಕದ್ದಮೆಗಳಲ್ಲಿ ಸುಮಾರು ಅರ್ಧಭಾಗ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟಿದ್ದರೂ ಭಾರತ ದಂತಹ ಕೆಲವೇ ದೇಶಗಳು ಮಾತ್ರ ಬಾಲಕಿಯರ ಮೇಲಿನ ದಿಗಿಲು ಹುಟ್ಟಿಸುವಂತಹ ಮೊಕದ್ದಮೆಗಳ ವಿಚಾರಣೆಗೆ ವಿಶೇಷ ಕಾನೂನುಗಳನ್ನು ಮಾಡಿಲ್ಲ. ಇಂತಹ ದೌರ್ಜನ್ಯಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಕಾನೂನು ಸುಧಾರಣೆಯ ಯಾವುದೇ ಕ್ರಮ ಕೈಗೊಳ್ಳಲು ಬಿಜೆಪಿ ಸರ್ಕಾರ ನಿರಾಕರಿಸುತ್ತಿದೆ. ಅದಕ್ಕೆ ಪ್ರತಿಯಾಗಿ, ಎಡಸಂಸದರು ಮಂಡಿಸಿದ್ದ ಖಾಸಗಿ ಸದಸ್ಯರ ಮಸೂದೆಯು ಯಾರ ಗಮನಕ್ಕೂ ಬಾರದೇ ಹೋಯಿತು.

ಮಾನವ ಸಂಪನ್ಮೂಲ ಇಲಾಖೆಯ ಇತ್ತೀಚಿನ ಕೆಲವು ಕ್ರಮಗಳು ಮಹಿಳೆಯರ ಬಗೆಗಿನ ಅವರ ಪ್ರಗತಿವಿರೋಧಿ ಮನೋಭಾವವನ್ನು ಇನ್ನಷ್ಟು ಸ್ಪಷ್ಟವಾಗಿ ಹೊರಹಾಕಿದೆ. ಪ್ರಮುಖ ಸಾಮಾಜಿಕ ಅಧ್ಯಯನ ಪಠ್ಯಕ್ರಮಗಳು ಮಹಿಳಾ ಅಧ್ಯಯನ ಯೋಜನೆಗಳ ಮೂಲೆಗುಂಪಾಗಿದ್ದ ಸ್ಥಿತಿಯನ್ನು ಬದಲಿಸಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯ ಗಳು ಪ್ರಾರಂಭಿಸಿದ್ದ ಮಹಿಳಾ ಅಧ್ಯಯನ ಪಠ್ಯಕ್ರಮಗಳು ನಿಜಕ್ಕೂ ಶಿಕ್ಷಣ ರಂಗದಲ್ಲಿ ಒಂದು ಒಳ್ಳೆಯ ಸಂಪ್ರದಾಯವನ್ನು ಹುಟ್ಟುಹಾಕಿದವು. ಈಗ ಅದಕ್ಕೆ ಕಲ್ಲು ಹಾಕುವ ಕೆಲಸವನ್ನು ಮಾನವ ಸಂಪನ್ಮೂಲ ಇಲಾಖೆ ಮಾಡಿದೆ. ಮಹಿಳೆಯರಿಗೆ ಒಂದು ಸ್ವತಂತ್ರ ಅಸ್ತಿತ್ವವನ್ನೇ ನಿರಾಕರಿಸುವ ತಮ್ಮ ಪ್ರತಿಗಾಮಿ ಧೋರಣೆಯನ್ನು ಮುಂದುವರಿಸುವ ಭಾಗವಾಗಿ, ಮಹಿಳಾ ಅಧ್ಯಯನವನ್ನು ಕುಟುಂಬ ಅಧ್ಯಯನ ಎಂದು ಮರುನಾಮಕರಣ ಮಾಡುವ ಪ್ರಸ್ತಾಪ ಮುಂದಿಟ್ಟಿದೆ. ಈ ಕ್ರಮದಿಂದ, ಲಿಂಗಾಧಾರಿತ ತಾರತಮ್ಯದ ವಿಶ್ಲೇಷಣೆಯಿಂದ ಅಧ್ಯಯನವನ್ನು ವಿಮುಖಗೊಳಿಸುವುದೇ ಅದರ ಉದ್ದೇಶವಾಗಿದೆ. ಮತ್ತೊಂದು ಉದಾಹರಣೆ ಯೆಂದರೆ, ಮಹಿಳೆಯರಿಗೆ ನ್ಯಾಯಯುತ ಹಕ್ಕುಗಳನ್ನು ನೀಡಿದರೆ ಕುಟುಂಬಗಳು ನುಚ್ಚು ನೂರಾಗುತ್ತವೆ ಎಂಬ ಅತಿರೇಕದ ವಿಚಾರಗಳನ್ನು ಸಮಾಜವಿಜ್ಞಾನ ಪಠ್ಯಪುಸ್ತಕಗಳಲ್ಲಿ ಸೇರಿಸುವ ಕೆಲಸ ಆರಂಭ ಮಾಡಲಾಗಿದೆ. ಉತ್ತರಪ್ರದೇಶದಲ್ಲಿ ಬಿಜೆಪಿ ನೇಮಿಸಿದ ಕೆಲವು ಬರಗಹಾರರು ಇಂತಹ ಪ್ರಸ್ತಾಪಗಳನ್ನು ಮುಂದಿಟ್ಟಿದ್ದಾರೆ.

ಪರಿಸಮಾಪ್ತಿ

ಈ ಎಲ್ಲ ಅಂಶಗಳ ಆಧಾರದಲ್ಲಿ ಈ ಹಿಂದಿನ ಬಂಡವಾಳಶಾಹೀ ಆಳ್ವಿಕೆಯಲ್ಲಿ ಮಹಿಳೆಯರು ಬಹಳ ಉಪಕೃತರಾಗಿದ್ದರೆಂಬುದೇನೂ ಅರ್ಥವಲ್ಲ. ಆದರೆ ಭಾರತೀಯ ಜನತಾ ಪಕ್ಷದ ಕಳೆದ 6 ವರ್ಷಗಳ ಆಳ್ವಿಕೆಯಲ್ಲಿ ಹಿಂದಿನ ಆಡಳಿತದ ಶೋಷಣೆ ದಬ್ಬಾಳಿಕೆಗಳು ಮುಂದುವರೆದಿವೆ ಮಾತ್ರವಲ್ಲದೇ ಇವರ ಕೋಮುವಾದೀ ಮತಾಂಧತೆಯ ಅಟ್ಟಹಾಸದ ದಳ್ಳುರಿ ಮಹಿಳೆಯರ ಬದುಕನ್ನು ಅತ್ಯಂತ ದುರ್ಭರಗೊಳಿಸಿದೆ. ಈ ಪರಿಸ್ಥಿತಿಯಲ್ಲಿ ಸಮಾಜಘಾತುಕ, ವಿಚ್ಛಿದ್ರಕಾರೀ ಶಕ್ತಿಗಳಿಗೆ ಇನ್ನಷ್ಟು ಕುಮ್ಮಕ್ಕು ದೊರೆಯುತ್ತಿದ್ದು ಅವರ ಉಪಟಳ ಮೇರೆ ಮೀರಿದೆ ಮತ್ತು ಮಹಿಳೆಯರ ಸುರಕ್ಷಿತ ಬದುಕಿಗೆ ಆಸ್ಪದವೇ ಇಲ್ಲದಂತಾಗಿದೆ.

ಕಳೆದ 6 ವರ್ಷಗಳ ಬಾ.ಜ.ಪ ದ ಆಡಳಿತ ಮಹಿಳೆಯರ ಹಕ್ಕುಗಳ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರಿ ಅವರನ್ನು ಇನ್ನಷ್ಟು ದುರ್ಬಲಗೊಳಿಸಿದ್ದು ನಿಚ್ಚಳವಾಗಿದೆ. ಈ ಸಂದರ್ಭದಲ್ಲಿ ಚುನಾವಣೆಯು ಮಹಿಳೆಯರಿಗೆ ಒಂದು ಉತ್ತಮ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಈ ಅವಕಾಶವನ್ನು ದೇಶದ ಎಲ್ಲಾ ಮಹಿಳೆಯರೂ ಸಮರ್ಥವಾಗಿ ಬಳಸಿಕೊಂಡು ತಮ್ಮ ಬದುಕಿನ ಬರ್ಭರತೆಗೆ ಕಾರಣರಾದ, ತಮ್ಮದೇ ಭಾಷೆ, ಭರವಸೆಗಳನ್ನು ಉಳಿಸಿಕೊಳ್ಳದ ಭಾಜಪ ಮತ್ತದರ ಮಿತ್ರಪಕ್ಷಗಳ ವಿರುದ್ಧ ಮತ ಚಲಾಯಿಸಿ ಅವರನ್ನು ಸೋಲಿಸುವ ಮೂಲಕ ಅವರ ತಪ್ಪುಗಳಿಗೆ ಶಿಕ್ಷೆ ವಿಧಿಸಬೇಕು.

ಕಿಡ್ನಿ ಮಾರುತ್ತೇನೆ ಕೊಳ್ಳುವಿರಾ?

ಕೆ.ಎಸ್.ರವಿಕುಮಾರ್, ಹಾಸನ

ತನ್ನ ವಿರುದ್ಧದ ಟೀಕೆಗಳನ್ನು ಪ್ರಚಾರದ ಮಾಧ್ಯಮವಾಗಿ ಮಾರ್ಪಡಿಸಿಕೊಳ್ಳುವ ಜಾಣ್ಮೆ ಮತ್ತು ಛಂದತನ ಎರಡೂ ಬಿಜೆಪಿ ನಾಯಕರಿಗಿದೆ. ಆದರೂ ಕಟುಸತ್ಯಗಳು ಎದುರಿಗಿರುವಾಗ ಟೀಕಿಸದೆ ಇರಲು ಸಾಧ್ಯವಿಲ್ಲ. ಮೌನವಾಗಿದ್ದು ಆತ್ಮವಂಚನೆ ಮಾಡಿಕೊಳ್ಳುವುದಕ್ಕಿಂತ ಮಾತನಾಡಿ ನಿಷ್ಠೂರವಾಗುವುದೇ ಮೇಲು.

"ಭಾರತ ಪ್ರಕಾಶಿಸುತ್ತಿದೆ" ಜಾಹೀರಾತುಗಳು ಅವ್ಯಾಹತವಾಗಿ ನಾಲ್ಕು ತಿಂಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಪ್ರಕಾಶಿಸಿದವು. ಚುನಾವಣಾ ಆಯೋಗ ಲೋಕಸಭಾ ಚುನಾವಣೆಗಳಿಗೆ ದಿನಾಂಕಗಳನ್ನು ಗೊತ್ತುಪಡಿಸಿದ ಕೂಡಲೆ ಈ ಜಾಹೀರಾತುಗಳ ಪ್ರಕಟಣೆ ನಿಂತಿಂತು. 'ಭಾರತ ಪ್ರಕಾಶಿಸುತ್ತಿದೆ' ಎಂಬ ಜಾಹೀರಾತುಗಳಿಗೆ 5 ಹಂತಗಳಲ್ಲಿ ಕೇಂದ್ರ ಸರ್ಕಾರ ಹಣ ಖರ್ಚು ಮಾಡಿದೆ.

ಮೊದಲ ಹಂತ ಡಿಸೆಂಬರ್ ಒಳಗೆ ಮುಗಿದು ಹೋಯಿತು. ಈ ಹಂತಕ್ಕೆ 34 ಕೋಟಿ ರೂಪಾಯಿ ವೆಚ್ಚವಾಯಿತು. ಎರಡನೇ ಹಂತ ಫೆಬ್ರವರಿಯಲ್ಲಿ ಮುಗಿದುಹೋಯಿತು. ಈ ಹಂತಕ್ಕೆ 250 ಕೋಟಿ ವೆಚ್ಚವಾಯಿತು. ಮೂರನೇ ಹಂತದಲ್ಲಿ 100 ಕೋಟಿ ರೂಗಳನ್ನು ಬೇರೆ ಬೇರೆ ಮಿನಿಸ್ಟ್ರಿಗಳು, ಅವುಗಳ ಕೆಳಗೆ ಬರುವ ಇಲಾಖೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಾಧನೆಗಳನ್ನು ಬಿಂಬಿಸಿಕೊಳ್ಳಲು ನೀಡಲಾಯಿತು. ನಾಲ್ಕನೇ ಹಂತದಲ್ಲಿ ವಾಜಪೇಯಿ ಸರ್ಕಾರದ ಸಾಧನೆಗಳ ಬಗ್ಗೆ 70 ಪುಟದ ಪುಸ್ತಕಗಳನ್ನು ಮುದ್ರಿಸಲಾಗುತ್ತಿದೆ. ಈ ಯೋಜನೆಗೆ 16.75 ಕೋಟಿ ರೂಗಳನ್ನು ಮೀಸಲಿಡಲಾಗಿದೆ. 8.5 ಲಕ್ಷ ಪುಸ್ತಕಗಳನ್ನು ಮುದ್ರಿಸಲಾಗುತ್ತಿದೆ. ಐದನೇ ಹಂತದಲ್ಲಿ ಹಿಂದಿಯೂ ಸೇರಿದಂತೆ ಹದಿಮೂರು ರಾಷ್ಟ್ರಭಾಷೆಗಳಲ್ಲಿ ವಾಜಪೇಯಿ ಆಡಳಿತ ಕುರಿತು 50 ಬೇರೆ ಬೇರೆ ವಿಷಯವಿರುವ ಪುಟ್ಟ ಪುಟ್ಟ ಪುಸ್ತಿಕೆಗಳನ್ನು ಮುದ್ರಿಸಲಾಗುವುದು. ಈ ಯೋಜನೆಗೆ 50 ಕೋಟಿ ವೆಚ್ಚವಾಗುತ್ತಿದೆ. ಚುನಾವಣಾ ಪ್ರಚಾರ ಮುಗಿದ ವೇಳೆಗೆ ಈ ಎಲ್ಲ ಹಂತಗಳು ಕೊನೆಗೊಂಡಿರಬೇಕು. ಒಟ್ಟಾರೆ ಭಾರತ ಪ್ರಕಾಶಿಸಿ ಕತ್ತಲಾವರಿಸುವ ಹೊತ್ತಿಗೆ ಕೇಂದ್ರ ಸರ್ಕಾರ 450.75 ಕೋಟಿ ರೂಗಳನ್ನು ಖರ್ಚು ಮಾಡಿರುತ್ತದೆ.

'ಭಾರತ ಪ್ರಕಾಶಿಸುತ್ತಿದೆ' ಮಿಥ್ಯಾ ಸಾಧನೆಯ ಜಾಹೀರಾತುಗಳಿಂದ ಭಾರತ ಸರ್ಕಾರದ ಬೊಕ್ಕಸಕ್ಕಂತೂ ಮೂರು ಕಾಸಿನ ಪ್ರಯೋಜನವಿಲ್ಲ. ಭಾರತೀಯರಿಗೂ ಇಲ್ಲ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಇಷ್ಟೊಂದು ಪ್ರಜ್ಞಾಪೂರ್ವಕವಾಗಿ, ಸ್ವಾರ್ಥಹಿತವಾಗಿ, ನಿರ್ಲಜ್ಜತೆಯಿಂದ ಹಣ ಪೋಲು ಮಾಡಿದ ಉದಾಹರಣೆ ಇದೇ ಮೊದಲೆಂದು ಕಾಣುತ್ತದೆ. ಈ ವಿಚಾರದಲ್ಲೂ ವಾಜಪೇಯಿ ಸರ್ಕಾರ ಅಪೂರ್ವ ಸಾಧನೆ ಮಾಡಿದೆ! ಕಳೆದ ಐದು ವರ್ಷಗಳಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಭಾರತ ಹೇಗೆ ಪ್ರಕಾಶಿಸುತ್ತ ಬಂದಿದೆ, ನೋಡೋಣವೆ?

ಬೇಸಾಯದ ಅವಸಾನ: 'ಭಾರತ ಪ್ರಕಾಶಿಸುತ್ತಿದೆ' ಜಾಹೀರಾತುಗಳ ಒಂದು ಕಂತಿನಲ್ಲಿ ಓರ್ವ ರೈತ ಚೇತೋಹಾರಿ ಮುಗುಳು ನಗೆಯಿಂದ ಕಲಂಗೊಳಿಸುತ್ತಿದ್ದಾನೆ. ಪಕ್ಕದಲ್ಲಿ ಘೋಷಣೆಗಳು "ಕಾಲ ಅನುದೋನ್ಮಾದದಲ್ಲಿದೆ. ಹಳ್ಳಿಗಳು ಪ್ರಗತಿಯ ದಾರಿಯಲ್ಲಿವೆ. ಕಣ್ಣುಗಳು ಮಿನುಗುತ್ತಿವೆ. ಪ್ರಕಾಶಮಾನವಾಗಿ ಹೊಳೆಯುವ ಕಾಲವನ್ನು ನೀವೆಂದೂ ನೋಡಿರಲಿಲ್ಲ". ಹಳ್ಳಿಗಳು ಹೊಳೆಯಲು ಭಾರತ ಸರ್ಕಾರ ಕಳೆದ ಐದು ವರ್ಷದಲ್ಲಿ ಏನು ಮಾಡಿತು? ಹಳ್ಳಿಹಳ್ಳಿಗಳಲ್ಲೂ ಟೆಲಿಫೋನ್, ಮೊಬೈಲ್‌ಗಳು ಕಂಡುಬಂದವು. ಮೂಲಭೂತ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಲಾಯಿತು. ಹಳ್ಳಿಯ ಮನೆ ಮನೆಗಳಲ್ಲೂ ಟಿ.ವಿ., ರೇಡಿಯೋಗಳೂ ಕಂಡುಬಂದವು. ಹಳ್ಳಿಗಳಲ್ಲಿ ಸುಸಜ್ಜಿತ ರಸ್ತೆಗಳು ಸಂಪರ್ಕ ಒದಗಿಸಿದವು. ಇವಿಷ್ಟು ಕೇಂದ್ರ ಸರ್ಕಾರದ ಸಾಧನೆಗಳು (ಜಾಹೀರಾತಿನ ಪ್ರಕಾರ).

ಇಂಟರ್‌ನೆಟ್ ಕೂಡ ಹಳ್ಳಿಗಳನ್ನು ಬೆಳಗಿಸಿದೆ ಎಂಬ ಹಸಿ ಸುಳ್ಳಿಗೂ ಈ ಜಾಹೀರಾತಿನಲ್ಲಿ ಜಾಗವಿದೆ (ಹೆಚ್ಚಿನ ಮಾಹಿತಿಗೆ www. indiashining.com ಎಂಬ ಭಾರತ ಸರ್ಕಾರದ ವೆಬ್‌ಸೈಟನ್ನು ನೀವು ನೋಡಬಹುದು). ಸದರಿ ಜಾಹೀರಾತಿನಲ್ಲಿ ರೈತರಿಗೆ ಏನು ಮಾಡಲಾಗಿದೆ, ರೈತರೇನಾಗಿದ್ದಾರೆ ಎಂಬ ಅಂಶಗಳಿಲ್ಲ. ಹಳ್ಳಿಗಳ ಕುರಿತ ಭಾರತ ಸರ್ಕಾರದ ಈ ಜಾಹೀರಾತು ಎಷ್ಟು ಟೊಳ್ಳು ಎಂದು ವಿವರಿಸಬೇಕಿಲ್ಲ.

ಹಳ್ಳಿಗಳೆಂದರೆ ರೈತರ ಕಾಯಕದ ಕ್ಷೇತ್ರ. ಕೃಷಿ ಪ್ರಧಾನ ವ್ಯವಸ್ಥೆ ಇರುವ ಕ್ಷೇತ್ರ. ವಾಜಪೇಯಿ ಅಧಿಕಾರಾವಧಿಯಲ್ಲಿ ರೈತರೇನಾಗಿದ್ದಾರೆ? ಕೆಲವು ಅಂಕಿ ಅಂಶಗಳ ಕಡೆ ನೋಡೋಣ. ಇದೇ ಮೊದಲ ಬಾರಿಗೆ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ 'ಕೃಷಿ ಅಭಿವೃದ್ಧಿಯ ಮೂಲಾಧಾರ ಕ್ಷೇತ್ರ' ಎಂಬ ಚಿತ್ರಣವನ್ನು ಬದಲಾಯಿಸಿ ಅದೊಂದು 'ಲಾಭ ನಷ್ಟಗಳ ಉದ್ದಿಮೆ' ಎಂದು ಪರಿಗಣಿಸಿತು. ಕೃಷಿ ಕ್ಷೇತ್ರದ ಯಾವುದೇ ಏರಿಳಿತಗಳಿಗೆ ಸರ್ಕಾರ ಸಹಭಾಗಿಯಾಗುವುದಿಲ್ಲ, ರೈತರೇ ಅವಕ್ಕೆ ಹೊಣೆ ಎಂದು ತೀರ್ಮಾನಿಸಲಾಯಿತು. ಆ ಮೂಲಕ ರೈತರ ವರ್ಗವನ್ನು ನಡುನೀರಿನಲ್ಲಿ ಕೈಬಿಡಲಾಯಿತು.

ಈಗ ಕೃಷಿ ಉತ್ಪನ್ನಗಳ ರಫ್ತಿಗಿಂತ ಆಮದಿನ ಕೈಮೇಲಾಗಿದೆ. ಸಬ್ಸಿಡಿಗಳನ್ನು ಸತತ ಕಡಿತ ಮಾಡುತ್ತ ಬರಲಾಗಿದೆ. ಬರಗಾಲದ ದವಡೆಗೆ ರೈತರು ಸಿಲುಕಿದಾಗ ಅವರ ರಕ್ಷಣೆಗೆ ಸರ್ಕಾರಗಳು ಸಕಾಲದಲ್ಲಿ ಧಾವಿಸಿಲ್ಲ (ಬಹಳಷ್ಟು ವೇಳೆ ನೆರವನ್ನೇ ನೀಡಿಲ್ಲ). ಚಹಾ, ಕಾಫಿ, ಕಬ್ಬು, ಹತ್ತಿ, ಗೋಧಿ, ಅಡಿಕೆ, ತೆಂಗು ಬೆಳೆಗಾರರು ಆಮದಿನಿಂದ ತತ್ತರಿಸಿದಾಗ ಸರ್ಕಾರಗಳು ಮೌನವಹಿಸಿದ್ದವು. ಬೆಳೆ ನಷ್ಟ, ಬರಗಾಲ, ಬ್ಯಾಂಕ್ ಹಾಗೂ ಕೈಸಾಲಗಳ ಸುಳಿಯಲ್ಲಿ ರೈತರು ಸಿಲುಕಿದ ತೀವ್ರತೆ ಹಿಂದೆಂದಿಗಿಂತಲೂ ಹೆಚ್ಚಾಗಿತ್ತು. ಕಳೆದ 200 ವರ್ಷಗಳಲ್ಲೇ ಭಾರತೀಯ ರೈತರನ್ನು ಇದೇ ಮೊದಲ ಬಾರಿಗೆ ಭಯಾನಕ ಅಸ್ಥಿರತೆ ಮತ್ತು ಅಭದ್ರತೆಗಳು ಕಾಡಿವೆ ಎಂದು ಕೃಷಿತಜ್ಞರು ಹೇಳುತ್ತಾರೆ. ಕೃಷಿ ಭೂಮಿ ನಿಭಾಯಿಸುವುದೇ ಈಗ ಆತ್ಮಹತ್ಯೆಗೆ ಸಮಾನವಾದ ಕೆಲಸವಾಗಿದೆ. ಹೀಗಾಗಿ ರೈತರು ಆತ್ಮಹತ್ಯೆಗೆ ಮೊರೆ ಹೋಗಿದ್ದಾರೆ. ಕಳೆದೈದು ವರ್ಷಗಳಲ್ಲಿ ಪಂಜಾಬಿನಲ್ಲಿ ಗೋದಿ ಬೆಳೆಗಾರರು, ಮಹರಾಷ್ಟ್ರದಲ್ಲಿ ಹತ್ತಿ ಬೆಳೆಗಾರರು, ಉತ್ತರ ಪ್ರದೇಶದಲ್ಲಿ ಕಬ್ಬಿನ ಬೆಳೆಗಾರರು, ಆಂಧ್ರ ಹಾಗೂ ಕರ್ನಾಟಕದಲ್ಲಿ ವಿವಿಧ ಬಗೆಯ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡರು. ಆತ್ಮಹತ್ಯೆಗೆ ಸಿಂಹಪಾಲು ಕಾರಣ ಬೆಳೆ ನಷ್ಟದಿಂದ ಸಾಲ ತೀರಿಸಲಾಗದಿದ್ದುದು. ಒಟ್ಟು 9 ಸಾವಿರ ರೈತರ ಆತ್ಮಹತ್ಯೆ ಈ ತನಕ ವರದಿಯಾಗಿದೆ. ರೈತರ ಆತ್ಮಹತ್ಯೆ ಒಂದು ರಾಷ್ಟ್ರೀಯ ಚರ್ಚೆಯ ರೂಪ ಪಡೆಯಲೇ ಇಲ್ಲ (ಆದರೆ ಪ್ರಧಾನಿ ವಾಜಪೇಯಿ ಮತಾಂತರದ ಕುರಿತು ರಾಷ್ಟ್ರೀಯ ಚರ್ಚೆಗೆ ಕರೆ ನೀಡಿದರು).

1950-51ರಲ್ಲಿ ದೇಶದ ಜಿ.ಡಿ.ಪಿ. ಬೆಳವಣಿಗೆಗೆ ಕೃಷಿ ಕ್ಷೇತ್ರದ ಕೊಡುಗೆ ಶೇಕಡ.61 ಇತ್ತು. ಆದೀಗ ಶೇಕಡ 24ಕ್ಕೆ ಇಳಿದಿದೆ. 1981ರಲ್ಲಿ ಶೇಕಡ 25 ಇದ್ದ ಭೂರಹಿತ ಕೃಷಿಕರ ಸಂಖ್ಯೆ ಈಗ ಶೇಕಡ 40ಕ್ಕೆ ಏರಿದೆ. ಇದೇ ಅವಧಿಯಲ್ಲಿ ಕೃಷಿ ಕಾರ್ಮಿಕರ ದುಡಿಮೆಯ ಸರಾಸರಿ ಅವಧಿ ವರ್ಷಕ್ಕೆ 123 ದಿನಗಳಿಂದ 72 ದಿನಗಳಿಗಿಳಿದಿದೆ. 1996-97ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 199.4 ಮಿಲಿಯನ್ ಟನ್ ಇತ್ತು. ಅದೀಗ 183.2 ಮಿಲಿಯನ್ ಟನ್ನಿಗಿಳಿದಿದೆ. ಕೇಂದ್ರ ಸರ್ಕಾರ 'ಹೊಸ ವಿದ್ಯುತ್ ಬಿಲ್-2003'ರ ಮೂಲಕ ವಿದ್ಯುತ್ ಬಳಕೆಗೆ ನೀಡುತ್ತಿದ್ದ ಸಬ್ಸಿಡಿಯನ್ನು ಹಿಂತೆಗೆದುಕೊಂಡಿತು, ಪರಿಣಾಮ ಕೃಷಿ ಬಳಕೆಯ ವಿದ್ಯುತ್ ಬೆಲೆ ಶೇಕಡ 73ಕ್ಕೆ ಏರಿದೆ. ವಿದ್ಯುತ್ ಇಲ್ಲದಾಗ ಡೀಸಲ್ ಜನರೇಟರ್ ಬಳಸಲಾಗುತ್ತಿದೆ. ಡೀಸಲ್ ಈಗಾಗಲೆ 5 ವರ್ಷದಲ್ಲಿ ಶೇಕಡ 108ಕ್ಕೆ ಏರಿದೆ. ಒಂದೆಡೆ ವಿದ್ಯುತ್ ಮತ್ತು ಡೀಸಲ್ ದುಬಾರಿಯಾಗಿವೆ. ಇನ್ನೊಂದೆಡೆ ಬೆಳೆಗೆ ಆಂತರಿಕ ಮಾರುಕಟ್ಟೆ ನರಳುತ್ತಿದೆ. ರೈತರು ಬೆಳೆವ ಅಕ್ಕಿ ಮತ್ತು ಗೋಧಿಯನ್ನು ಹಿಂದೆಲ್ಲ ಕೇಂದ್ರ ಸರ್ಕಾರಗಳೇ ಗಣನೀಯ ಪ್ರಮಾಣದಲ್ಲಿ ಖರೀದಿಸುತ್ತಿದ್ದವು, ಸಾರ್ವಜನಿಕ ಪಡಿತರ ವಿತರಣೆಗೆಂದು. ಆದರೀಗ ಪಡಿತರ ವ್ಯವಸ್ಥೆ ಕುಸಿದುಬಿದ್ದಿದೆ. 1991ರಲ್ಲಿ 20.8 ಮಿಲಿಯನ್ ಟನ್ ಆಹಾರ ಧಾನ್ಯವನ್ನು ಪಡಿತರ ವ್ಯವಸ್ಥೆಗೆಂದು ಕೊಳ್ಳಲಾಗಿತ್ತು. ಈಗ ಆ ಪ್ರಮಾಣ 10.9 ಮಿಲಿಯನ್ ಟನ್ನಿಗಿಳಿದಿದೆ.



ಚಳಿಗಾಲದ ಅಧಿವೇಶನದಲ್ಲಿ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ ಸದಸ್ಯರೊಬ್ಬರು ಕೇಂದ್ರ ಕೃಷಿ ಮಂತ್ರಿ ರಾಜನಾಥ್ ಸಿಂಗ್‌ರ ಗಮನ ಸೆಳೆದರು. ರಾಜನಾಥ್ ಸಿಂಗ್ ಹೇಳಿದರು "ನನಗೆ ಈ ತನಕ ಆತ್ಮಹತ್ಯೆಗಳ ಕುರಿತು ಅಧಿಕೃತ ವಿವರಗಳು ಬಂದಿಲ್ಲ". ಇಂಟರ್‌ನೆಟ್, ಮೊಬೈಲ್, ಟಿವಿ, ಎಲ್ಲೆಲ್ಲೂ ಟೆಲಿಫೋನ್ ಕ್ರಾಂತಿ ಸಂಭವಿಸಿರುವಾಗಲೂ ಕೇಂದ್ರ ಕೃಷಿ ಮಂತ್ರಿಗೆ ರೈತರ ಆತ್ಮಹತ್ಯೆಯ ಮಾಹಿತಿಯಿಲ್ಲವೆಂದರೆ ಕೃಷಿಗೆ ವಾಜಪೇಯಿ ಸರ್ಕಾರ ನೀಡಿದ ಮನ್ನಣೆ ಎಷ್ಟು ಎಂದು ತಿಳಿಯುತ್ತದೆ.

ದುಡಿಯುವ ಕೈಗಳಿಗೆ ಕೆಲಸವಿಲ್ಲ: 1991ರಲ್ಲಿ ಪಿ.ವಿ.ನರಸಿಂಹರಾವ್ ಹೊಸ ಆರ್ಥಿಕ ನೀತಿ ಆರಂಭಿಸಿದರು. ಅದನ್ನು ಬಹಳ ಉಠಾವುರಿಯಿಂದ ಮುಂದುವರಿಸಿ ಈ ದೇಶದ ದುಡಿಯುವ ವರ್ಗವನ್ನು ನಿರ್ನಾಮ ಮಾಡಲು ಟೊಂಕ ಕಟ್ಟಿದ್ದು ಮಾತ್ರ ವಾಜಪೇಯಿ ಸರ್ಕಾರ. ಬೇಕಿರಲಿ, ಬೇಕಿಲ್ಲದಿರಲಿ ವಿಶ್ವ ವ್ಯಾಪಾರ ಸಂಸ್ಥೆಯ ಷರತ್ತುಗಳಿಗೆ ಶಿರಬಾಗಿ ಆಮದಿಗೆ ಮಣೆ ಹಾಕಿದ ಪರಿಣಾಮ ಈ ತನಕ 20 ಲಕ್ಷ ಸಣ್ಣ ಉದ್ದಿಮೆಗಳು ಮುಚ್ಚಿ ಹೋಗಿವೆ. ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂಪಡೆತಕ್ಕೆಂದೇ ಒಂದು ಮಿನಿಸ್ಟ್ರಿ ಭಾರತದಲ್ಲಿದೆ (ಅಮೇರಿಕಾದಂತಹ ಬಂಡವಾಳಶಾಹಿ ದೇಶದಲ್ಲೂ ಇಂತಹದೊಂದು ಮಿನಿಸ್ಟ್ರಿಯಿಲ್ಲ). ಇದನ್ನು ಆರಂಭಿಸಿದ (ಅಪ)ಕೀರ್ತಿ ವಾಜಪೇಯಿ ಸರ್ಕಾರಕ್ಕೇ ಸಲ್ಲಬೇಕು. ಬಂಡವಾಳ ಹಿಂಪಡೆತದಿಂದ ಸಾರ್ವಜನಿಕ ಉದ್ದಿಮೆಗಳನ್ನು ಕಂಡ ಕಂಡವರಿಗೆ ಮಾರಿ ತನ್ನ ಆದಾಯಕ್ಕೆ ಜೋಡಿಸಿ ಮಾಡಿಕೊಳ್ಳುವುದೂ ಅಭಿವೃದ್ಧಿಯ ಮಾನದಂಡ ಎಂದು ವಾಜಪೇಯಿ ಸರ್ಕಾರ ಭಾವಿಸಿದೆ. ಹಿಂಪಡೆತ ನೀತಿ ಮತ್ತು ಮುಚ್ಚಿಹೋದ ಉದ್ದಿಮೆಗಳಿಂದ ಸಂಘಟಿತ ವಲಯದಲ್ಲೇ 9 ಲಕ್ಷ ಮಂದಿ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ನಿನ್ನೆಯವರೆಗೆ ಹೆಸರಾಂತ ಕಂಪನಿಯಲ್ಲಿದ್ದು ಇವತ್ತು ಅಬ್ಬೇಪಾರಿಗಳಾಗಬೇಕಾದ ದುಃಸ್ಥಿತಿ ಕಾರ್ಮಿಕರದ್ದು. ಬೆಂಗಳೂರಿನ ಎನ್.ಜಿ.ಇ.ಎಫ್. ಕಂಪೆನಿಯ ಮೆಕ್ಯಾನಿಕ್ ಒಬ್ಬರು ಕಡಲೆಕಾಯಿ ಮಾರುತ್ತಿರುವ ಉದಾಹರಣೆ. ಹರಿಹರದಲ್ಲಿ ಕಿರ್ಲೋಸ್ಕರ್ ಕಂಪೆನಿ ಮುಚ್ಚಿ ಕಾರ್ಮಿಕರು ರಸ್ತೆ ಬದಿ ಇಡ್ಲಿ ಮಾರುತ್ತಿರುವ ಉದಾಹರಣೆ ಪ್ರಕಾಶಿಸುವ ಭಾರತದಲ್ಲಿ ಅಲ್ಲದೆ ಇನ್ನೆಲ್ಲಿ ಕಾಣಬರಬೇಕು?

ಗುಜರಾತಿನ ವಡೋದರಾದಲ್ಲಿ ಫ್ಯಾಕ್ಟರಿ ಯೊಂದು ದಿವಾಳಿಯೆದ್ದಿತು. ಕಾರ್ಮಿಕರು ಅತಂತ್ರರಾದರು. ಅವರಲ್ಲಿ ಒಬ್ಬರು ರಮೇಶ್ ಬಾಯಿ ವಾಸವಾ ಹೆಂಡತಿಯ ಚಿಕಿತ್ಸೆಗೆ, ಮಕ್ಕಳ ಫೀಸಿಗೆ, ವಿದ್ಯುತ್ ಬಿಲ್ ಕಟ್ಟಲೆಂದು ಅವರು ವರ್ಷಕ್ಕೆ 60 ಶೇಕಡಾ ಬಡ್ಡಿದರದಲ್ಲಿ ಕೈಸಾಲ ಮಾಡಿದರು. ಈಗವರ ಸ್ಥಿತಿ ಚಿಂತಾಜನಕವಾಗಿದೆ. ಕುಟುಂಬ ನಿರ್ವಹಣೆಗೆ, ಕೈಸಾಲ ತೀರಿಸಲಿಕ್ಕಾಗಿ ಈಗವರು ತಮ್ಮ ಒಂದು ಕಿಡ್ನಿಯನ್ನು ಮಾರಲು ಮುಂದಾಗಿದ್ದಾರೆ ಗುಜರಾತಿನಲ್ಲಿ ಎರಡು ವರ್ಷಗಳ ಹಿಂದೆ ಜರುಗಿದ ಬಹುಕೋಟಿ ಸಹಕಾರಿ ಬ್ಯಾಂಕ್ ಹಗರಣದಲ್ಲಿ ರಮೇಶ್ ತಮ್ಮ ಸ್ವಲ್ಪ ಉಳಿತಾಯದ ಹಣವನ್ನೂ ಕಳೆದುಕೊಂಡರು. ಭಾರತ ಪ್ರಕಾಶಿಸುತ್ತಿದೆಯೆ ಎಂದು ರಮೇಶ್‌ಗೆ ಕೇಳಿದರೆ ಅವರು ವಿಷಣ್ಣವದನರಾಗಿ ಹೇಳುತ್ತಾರೆ, "ಎಲ್ಲಿ ಪ್ರಕಾಶಿಸುತ್ತಿದೆ, ನಮ್ಮ ರಾಜಕಾರಣಿಗಳ ಮುಖ ಪ್ರಕಾಶಮಾನವಾಗಿದೆ, ನಮ್ಮ ನಾಯಕರು ಪ್ರಕಾಶಮಾನರಾಗಿದ್ದಾರೆ".

ದೇಶದಲ್ಲೀಗ ಕೆಲಸ ಕಳೆದುಕೊಂಡವರ ಜೊತೆ ಕೆಲಸ ಸಿಕ್ಕದವರ ಸಂಖ್ಯೆಯೂ ಹೆಚ್ಚುತ್ತಿದೆ. ದೇಶದ ಜನಸಂಖ್ಯೆಯ ಶೇಕಡಾ 50ರಷ್ಟು ಜನ 25ರ ವಯೋಮಾನದವರು ಮತ್ತು ಇದಕ್ಕಿಂತ ಕಮ್ಮಿ ವಯಸ್ಸಿನವರಾಗಿದ್ದಾರೆ. ಈ ವಯೋಮಾನದವರಿಗೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವಲ್ಲಿ ಕೇಂದ್ರ ಸರ್ಕಾರಕ್ಕೆ ಅಷ್ಟೇನು ಆಸಕ್ತಿಯಿರಲಿಲ್ಲವೆಂಬುದು ಕಳೆದ 5 ವರ್ಷದಲ್ಲಿ ಸ್ಪಷ್ಟವಾಗಿದೆ. 1993ರಿಂದ ಸರ್ಕಾರದ ವತಿಯಿಂದ ನೇಮಕಾತಿಗಳೇ ಜರುಗಿಲ್ಲ. ಈ ತನಕ ನಾಲ್ಕು ಕೋಟಿ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿದ್ದಾರೆ. ಇನ್ನೂ ಬಹಳಷ್ಟು ಜನ ಕೆಲಸ ಸಿಕ್ಕುವುದಿಲ್ಲ ಎಂಬ ಹತಾಶೆಯಿಂದ ನೋಂದಾಯಿಸಲೂ ಮನಸ್ಸು ಮಾಡಿಲ್ಲ. ಭಾರತವೀಗ ಕಡಿಮೆ ಉದ್ಯೋಗಾವಕಾಶದ ಬೆಳವಣಿಗೆ ಯಿಂದ ಉದ್ಯೋಗ ನಷ್ಟ ಬೆಳವಣಿಗೆಯ ಕಡೆ ಸಾಗುತ್ತಿದೆ. ನಿರುದ್ಯೋಗದ ಸಮಸ್ಯೆಯು ಭಯೋತ್ಪಾದನೆ, ನಕ್ಸಲೀಯ ಚಟುವಟಿಕೆ, ಪ್ರತ್ಯೇಕತಾ ಚಳುವಳಿ, ಪ್ರಾದೇಶಿಕ ಸಂಕುಚಿತತೆ, ಗೂಂಡಾಗಿರಿ, ಕೋಮು ಸಂಘರ್ಷದಂತಹ ಸಾಮಾಜಿಕ ಅಶಾಂತಿಗಳನ್ನು ಇನ್ನಷ್ಟು ಹೆಚ್ಚಿಸಿದರೆ ಅಚ್ಚರಿಯಿಲ್ಲ.

ಹಸಿವು ಮತ್ತು ಅಪೌಷ್ಟಿಕತೆ: ಮಾನವ ಅಭಿವೃದ್ಧಿಯ ಕ್ಷೇತ್ರದಲ್ಲಿ ಭಾರತವೀಗ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ UNDP ಗಳ ಪಟ್ಟಿಯಲ್ಲಿ 124ನೇ ಸ್ಥಾನದಿಂದ 127ನೇ ಸ್ಥಾನಕ್ಕೆ ಜಾರಿದೆ. ಪ್ರಪಂಚದ ಜನಸಂಖ್ಯೆಯಲ್ಲಿ ಶೇಕಡಾ.50 ರಷ್ಟು ಹಸಿವಿನಿಂದ ಬಳಲುತ್ತಿರುವವರು ಭಾರತದಲ್ಲೇ

ಪುಟ 11 ಕ್ಕೆ






'ನಾನೇನು ಮಹಾ' ಎಂದು ಹಲವಾರು ಬಾರಿ ಯೋಚಿಸಿದ್ದೇನೆ. ನನ್ನ ಬದುಕು ಅದು ಹೇಗೆ ಮುಖ್ಯವಾಗುತ್ತದೆ ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡಿದ್ದೇನೆ. ಈ ಜಗತ್ತಿನಲ್ಲಿ ತನ್ನ ಜೀವನದ ಯಾವುದೇ ದಾಖಲೆಯನ್ನು ಉಳಿಸಿ ಹೋಗದ ಅನೇಕ ಜನರಿದ್ದಾರೆ. ಅವರಲ್ಲಿ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿದವರೂ ಇದ್ದಾರೆ. ಅವರ ಬದುಕಿನ ದಾಖಲೆಗಳು ಇಂದು ಉಳಿದಿದ್ದರೆ ಅವು ಇತರರಿಗೆ ಹೆಚ್ಚಿನ ಸಾಧನೆಗೆ ಪ್ರೇರಣೆ ಆಗುತ್ತಿದ್ದವೇನೋ.....

ಹೀಗೆಂದು ತನ್ನ ನಿಸ್ವಾರ್ಥ ಬದುಕನ್ನು ಕುರಿತು ತೋಡಿಕೊಂಡವರು ಅಡ್ದೂರು ಶಿವಶಂಕರ ರಾಯರು.. ಅವರ ಜೀವನ ಚರಿತ್ರೆಯನ್ನು ತೆರೆದಿಡುವ 'ಎಂಭತ್ತರ ಕೊಯ್ಲಿನ ಕಾಳುಗಳು' ಪುಸ್ತಕದಲ್ಲಿ.

ಕಮ್ಯೂನಿಸ್ಟರಾಗಿ, ನಂತರ ಕೃಷಿಕರಾಗಿ ಜೀವನ ನಡೆಸಿದ ಶಿವಶಂಕರರಾಯರನ್ನು ಪರಿಚಯಿಸುವ ಈ ಪುಸ್ತಕದಿಂದ ಬ್ರಿಟಿಷರ ಕಾಲದಲ್ಲಿ ಎಲ್ಲಾ ಕಷ್ಟ-ನಷ್ಟಗಳ ನಡುವೆ ಕಮ್ಯೂನಿಸ್ಟರು ನಡೆಸಿದ ಹೋರಾಟಗಳ ತಮ್ಮ ಕಿರುಪರಿಚಯ ಸಿಗುತ್ತದೆ. ಅಲ್ಲದೆ ಶಿವಶಂಕರರಾಯರು ತಮ್ಮ ಬಾಲ್ಯವನ್ನು ಕಳೆದ ತಂಜಾವೂರು, ವಿದ್ಯಾರ್ಥಿ ದೆಸೆ ಪೂರ್ಣಗೊಳಿಸಿದ ಮಂಗಳೂರು ಹಾಗೂ ಪಕ್ಷದ ಕರೆಗ ಓಗೊಟ್ಟು ಕಾರ್ಮಿಕರ ನಡುವೆ ಭೂಗತರಾಗಿ ಕೆಲಸ ಮಾಡಿದ ದಾವಣಗೆರೆ ಮುಂತಾದ ಪ್ರದೇಶಗಳ ಪರಿಚಯವಾಗುತ್ತದೆ. ಕಮ್ಯೂನಿಸ್ಟ್ ಚಳುವಳಿ ದುರ್ಬಲವಾಗಿರುವ ಕರ್ನಾಟಕದಲ್ಲಿ ಅಲ್ಲಲ್ಲಿ ನಡೆದ ಅಂದಿನ ಹೋರಾಟಗಳ ಪರಿಚಯ ಇಂದಿನ ಕಾರ್ಯಕರ್ತರಿಗೆ ಸ್ಫೂರ್ತಿಯ ಸೆಲೆಯಾಗುತ್ತದೆ.

1940 ರಲ್ಲೇ ಮಂಗಳೂರಿನಲ್ಲಿ ವಿದ್ಯಾರ್ಥಿ ಸಮ್ಮೇಳನ ನಡೆಸಿದುದನ್ನು ನೆನಪಿಸಿಕೊಳ್ಳುವ ಶಿವಶಂಕರರಾಯರು ಸಾಹಿತ್ಯ ಮಾರಾಟ, ಗುಂಪುಚರ್ಚೆ, ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತನಾದುದರ ಬಗ್ಗೆ ವಿವರಿಸುತ್ತಾರೆ. ಆ ಸಂದರ್ಭದಲ್ಲಿ ಬಿ.ವಿ.ಕಕ್ಕಿಲ್ಲಾಯರು ವಿದ್ಯಾರ್ಥಿ ಯೂನಿಯನ್ನಿನ ಕಾರ್ಯದರ್ಶಿಯಾಗಿದ್ದರು. 1943 ರಲ್ಲೇ ಮಂಗಳೂರಿನ ಹಂಚಿನ ಕಾರ್ಖಾನೆ ಕಾರ್ಮಿಕರು ಸಂಘಟಿತರಾಗಿ 3 ತಿಂಗಳ



ಭೋನಸ್‌ಗಾಗಿ ಒತ್ತಾಯಿಸಿ ಹೋರಾಟ ಮಾಡಿದ್ದು, ಕಾಳಸಂತೆಯಲ್ಲಿ ಅಕ್ಕಿ ಮಾರಾಟ ಮಾಡುತ್ತಿದ್ದುದನ್ನು ವಿರೋಧಿಸಿ, ನ್ಯಾಯಬೆಲೆಯಲ್ಲಿ ಅಕ್ಕಿ ನೀಡಬೇಕೆಂದು ಒತ್ತಾಯಿಸಿ ಮಾಡಿದ ಹೋರಾಟದಲ್ಲಿ ಯಶಸ್ವಿಯಾದುದನ್ನು ನೆನಪಿಸಿಕೊಳ್ಳುತ್ತಾರೆ.

ಪಕ್ಷವು ತಿಂಗಳಿಗೆ ನೀಡುತ್ತಿದ್ದ 25 ರೂಪಾಯಿಯಲ್ಲಿ ಜೀವನ. ಜೊತೆಗೆ ಪತ್ರಿಕೆ ಮಾರಾಟ, ಸರಿಯಾಗಿ ಹಣ ವಸೂಲಿಯಾಗುತ್ತಿರಲಿಲ್ಲ. ಆದರೆ ಛಲ ಬಿಟ್ಟಿರಲಿಲ್ಲ. ಪಕ್ಷದ ಕರೆಯಂತೆ ದಾವಣಗೆರೆಯಲ್ಲಿ ಹತ್ತಿಗಿರಣಿ ಕಾರ್ಮಿಕರ ನಡುವೆ ಕೆಲಸ.

1947 ರಲ್ಲಿ ಮೈಸೂರು ಜವಾಬ್ದಾರಿ ಸರಕಾರಕ್ಕಾಗಿ ನಡೆದ ಹೋರಾಟ ಕಾರ್ಮಿಕರಲ್ಲಿ ಹೊಸ ಹುರುಪು ತಂದಿತ್ತು. ಇದರಿಂದ ದಾವಣಗೆರೆಯ ಕಾಟನ್‌ಮಿಲ್ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸಿದರು. ಆದರೆ ಆಡಳಿತವರ್ಗ ಗಲಭೆಯನ್ನು ಸೃಷ್ಟಿಸಿ, ಕಾರ್ಮಿಕ ಸಂಘಟನೆಯ ಮುಖಂಡರನ್ನು ಬಂಧಿಸುವಂತೆ ಮಾಡಿತು. ಅಂತೆಯೇ ಸಂಘದ ಉಪಾಧ್ಯಕ್ಷರಾದ ಶಿವಶಂಕರರಾಯರು ಜೈಲುವಾಸ ಅನುಭವಿಸಬೇಕಾಯಿತು.

ಜೈಲಿನಲ್ಲಿ ಕಾರ್ಮಿಕರು ಹಾಗೂ ಇತರೆ ಜೈಲುವಾಸಿಗಳ ನಡುವೆ ರಾಜಕೀಯ ಚರ್ಚೆಗಳು ನಡೆಯುತ್ತಿದ್ದ ಸಮಯದಲ್ಲಿ 'ಡಾಕು ಶಿವು' ಅವನ ಮನ ಪರಿವರ್ತನೆಗೆ ನಡೆದ ಪ್ರಯತ್ನಗಳನ್ನು ಶಿವಶಂಕರರಾಯರು ವಿವರಿಸುತ್ತಾರೆ.

ಮುಂದೆ 1952 ರಲ್ಲಿ ಮದುವೆ ಆದ ನಂತರ ಕುಟುಂಬದ ಒತ್ತಡದಿಂದಾಗಿ ಅವರು ಕಮ್ಯೂನಿಸ್ಟ್ ಚಳುವಳಿಯಿಂದ ಹಿಂದೆ ಸರಿಯಬೇಕಾಯ್ತು. ಮಡದಿ ಬಿ.ಸುಶೀಲ ವೃತ್ತಿಯಲ್ಲಿ ಮಂಗಳೂರು ಹೈಸ್ಕೂಲೊಂದರಲ್ಲಿ ಅಧ್ಯಾಪಕಿಯಾಗಿದ್ದು 1981ರಲ್ಲಿ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದರು. ಹಿರಿಯರು 'ಶಂಭೂರಿನಲ್ಲಿರುವ ಜಮೀನಿನಲ್ಲಿ ಸಾಗುವಳಿ ಮಾಡು' ಎಂದು ಆದೇಶಿಸಿದಾಗ, 'ಅಲ್ಲಿ ಕಮ್ಯುನಿಸ್ಟ್ ಬೀಜವನ್ನು ಬಿತ್ತಿದವನೇ ನಾನು! ಅಲ್ಲಿನ ಗೇಣಿದಾರರನ್ನು ಒಕ್ಕಲೆಬ್ಬಿಸುವುದು ಹೇಗೆ' ಎಂದು ಶಿವಶಂಕರರಾಯರು ಅಡ್ದೂರಿನಲ್ಲಿ ನೆಲೆಸಿ ಕೃಷಿಯಲ್ಲಿ ತೊಡಗುತ್ತಾರೆ.

ಕೃಷಿಯಲ್ಲಿ ತೊಡಗಿದ್ದಾಗಲೂ ಹೊಸ ತಳಿಗಳ ಮೂಲಕ, ವೈಜ್ಞಾನಿಕ ವಿಧಾನದ ಮೂಲಕ ಹೆಚ್ಚು ಇಳುವರಿಯನ್ನು ಪಡೆಯಲೆತ್ನಿಸುತ್ತಾ ತಾನು ಪಡೆದ ಮಾಹಿತಿ ಮತ್ತು ಅನುಭವವನ್ನು ಇತರೆ ಕೃಷಿಕರೊಂದಿಗೆ ಹಂಚಿಕೊಂಡು ಅವರ ಅಭಿವೃದ್ಧಿಗೂ ಕಾರಣರಾಗುತ್ತಾರೆ. ಹೀಗೆ ಸಮಾಜದ ಅಭಿವೃದ್ಧಿಯಿಂದ ತನ್ನ ಅಭಿವೃದ್ಧಿಯೂ ಸಾಧ್ಯ ಎಂದು ಕಂಡುಕೊಂಡರು. ಕೃಷಿಕರಾಗಿ ಕಮ್ಯುನಿಸ್ಟ್ ಚಳುವಳಿಯಿಂದ ದೂರ ಸರಿದ ನಂತರವೂ ಓದುವ ಹವ್ಯಾಸವನ್ನು ಬಿಟ್ಟಿರಲಿಲ್ಲ. ಕೃಷಿ ಮತ್ತಿತರ ವಿಷಯಗಳಿಗೆ ಸಂಬಂಧಪಟ್ಟು ದೇಶವಿದೇಶಗಳ 22 ನಿಯತ ಕಾಲಿಕಗಳನ್ನು ತರಿಸಿ ಓದುತ್ತಿದ್ದರು.

ಎಂಬತ್ತರ ಕೊಯ್ಲಿನ ಕಾಳುಗಳು

ಬೆಲೆ ರೂ. 40

ಹಕ್ಕುಗಳು : ಅಡ್ದೂರು ಕೃಷ್ಣಾರಾವ್

ಪ್ರಕಾಶಕರು : ಮಿತ್ರಮಾಧ್ಯಮ,
ಬಸವೇಶ್ವರನಗರ
ಬೆಂಗಳೂರು -79

ಪುಸ್ತಕ ದೊರೆಯುವ ಸ್ಥಳ :
ಐಕ್ಯರಂಗ ಕಛೇರಿ, ಬೆಂಗಳೂರು

ಆದರ್ಶವಾದಿ

ಶಿವಶಂಕರರಾಯರು ಕಮ್ಯೂನಿಸ್ಟ್ ಚಳುವಳಿಗೆ ಆಕರ್ಷಿತರಾದರೂ ಅವರು ಆದರ್ಶವಾದಿಯಾಗಿದ್ದರೇ ಹೊರತು ಮಾರ್ಕ್ಸ್‌ವಾದಿಯಾಗಲು ಸಾಧ್ಯವಾಗಲಿಲ್ಲ ಎಂದೇ ನನ್ನ ಅಭಿಪ್ರಾಯ. ಅವರು ಮಾರ್ಕ್ಸ್‌ವಾದಿ ಆಗುವ ಹಂತಕ್ಕೆ ತಲುಪಿದ್ದರೆ, ಚಳುವಳಿಯಿಂದ ದೂರ ಸರಿಯುತ್ತಿರಲಿಲ್ಲ. ಭೂಗತರಾಗಿ ಕೆಲಸ ಮಾಡಿದ ವ್ಯಕ್ತಿ, ಪಕ್ಷ ಇಬ್ಭಾಗವಾದೊಡನೆ ಕೃಷಿ ಕೆಲಸಕ್ಕೆ ಕೈಹಾಕಿದರೂ ಚಳುವಳಿಯಿಂದ ಹೊರಗೆ ಉಳಿಯುತ್ತಿರಲಿಲ್ಲ. ತನ್ನ ತಿಳುವಳಿಕೆಗೆ ಅನುಗುಣವಾಗಿ ಯಾವುದಾದರೊಂದು ಕಮ್ಯೂನಿಸ್ಟ್ ಪಕ್ಷದಲ್ಲಿದ್ದು ಕಮ್ಯೂನಿಸ್ಟ್ ಚಳುವಳಿಯನ್ನು ಮುಂದುವರಿಸುತ್ತಿದ್ದರು. ಮುಂದೆ ಯಾವ ಕಮ್ಯುನಿಸ್ಟ್ ಪಕ್ಷದ ನಿಲುವು ಸರಿ ಎಂಬುದು ನಿರ್ಧಾರವಾಗುತ್ತಿತ್ತು. ತನ್ನ ಕ್ರಾಂತಿಕಾರಿ ತಿಳುವಳಿಕೆಯನ್ನು ಕಾಲಕಾಲಕ್ಕೆ ಹೆಚ್ಚಿಸಿಕೊಳ್ಳುತ್ತಾ ಹೋಗದೇ ಇದ್ದಲ್ಲಿ ಕೌಟುಂಬಿಕ, ರಾಜಕೀಯ, ಆರ್ಥಿಕ ಒತ್ತಡಗಳು ಬಂದಾಗ ಅದಕ್ಕೆ ಮಣಿದು ದೂರ ಸರಿಯುವಂತಾಗುತ್ತದೆ ಎಂಬುದಕ್ಕೆ ಶಿವಶಂಕರರಾಯರು ಒಂದು ಉದಾಹರಣೆ.

ಇಲ್ಲಿ ಇನ್ನೊಂದು ವಿಪರ್ಯಾಸವನ್ನು ಕಾಣುತ್ತೇವೆ. ಶಿವಶಂಕರರಾಯರು ಸಹೋದರ ಎ.ಸುಬ್ಬರಾವ್, ಕಮ್ಯೂನಿಸ್ಟ್ ತತ್ವ ಸರಿಯಿಲ್ಲವೆಂದು ಅಣ್ಣನೊಡನೆ ವಾದಿಸಿದವರು, ಮುಂದೆ ಕಮ್ಯೂನಿಸ್ಟ್ ಪಕ್ಷ ಸೇರಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಕೇರಳದ ನಂಬೂದರಿಪಾಡ್ ಸರಕಾರದಲ್ಲಿ ಮಂತ್ರಿಗಳಾದರು. ಆದರೆ ಒಂದು ಹಂತದವರೆಗೆ ಕ್ರಾಂತಿಕಾರಿ ಜೀವನ ನಡೆಸಿದ ಶಿವಶಂಕರರಾಯರು ಕೊನೆಯಲ್ಲಿ ಚಳುವಳಿಯಿಂದ ದೂರ ಉಳಿದರು.


ಪುಸ್ತಕದ ಅಂಗಡಿ ತೆರೆದು ಲಾಭವಾಗದೆ ಮುಚ್ಚಬೇಕಾದುದು, ಮುದ್ರಣಾಲಯದಲ್ಲಿ ಕೆಲಸಕ್ಕೆ ಸೇರಿದ್ದು, ವಾಚನಾಲಯ ತೆರೆದಿದ್ದು, ಯಾವುದೂ ಸರಿ ಹೊಂದದೆ ಕೊನೆಗೆ ಕುಟುಂಬದ ಜಮೀನಿನಲ್ಲಿ ಬೇಸಾಯಕ್ಕೆ ಇಳಿದದ್ದು, ಪಕ್ಷದ ಚಟುವಟಿಕೆಗಳಿಂದ ದೂರ ಸರಿದದ್ದು ಯಾಕೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಏನೇ ಆಗಲಿ, 82 ನೇ ವಯಸ್ಸಿನಲ್ಲಿ ಕಮ್ಯೂನಿಸ್ಟ್ ಆದರ್ಶಗಳನ್ನು ಪಸರಿಸುತ್ತಿರುವ ಶಿವಶಂಕರರಾಯರ ಜೀವನ ಚರಿತ್ರೆ, ಕರ್ನಾಟದಲ್ಲಿ ಕಮ್ಯೂನಿಸ್ಟ್ ಚಳುವಳಿ ದುರ್ಬಲವಾಗಿದ್ದರೂ ಇದು ಬರಡಲ್ಲ ಎಂಬುದನ್ನು ಇಂದಿನ ಕಾರ್ಯಕರ್ತರಿಗೆ ನೆನಪಿಸುತ್ತದೆ.

'ಪುಸ್ತಕದ ನಂಟು' ಸುಖ ಜೀವನಕ್ಕೆ ದಾರಿ ಎಂದು ಅವರೇ ಹೇಳಿಕೊಂಡಿದ್ದಾರೆ. ಆದ್ದರಿಂದ ಈ ಪುಸ್ತಕವನ್ನು ಓದುವುದು ಅಗತ್ಯ. ಶಿವಶಂಕರರಾಯರ ಮಗ ಅಡ್ದೂರು ಕೃಷ್ಣರಾವ್ ನಿರೂಪಿಸಿದ ಪುಸ್ತಕವನ್ನು ನಾ.ಕಾರಂತ ಪೆರಾಜೆ ಸಂಪಾದಿಸಿರುತ್ತಾರೆ. ಬರಹದ ಶೈಲಿ ಉತ್ತಮವಾಗಿದೆ. ಪುಸ್ತಕವನ್ನು 3 ಭಾಗಗಳನ್ನಾಗಿ ಓದಬಹುದು. ಕಮ್ಯೂನಿಸ್ಟ್ ಕಾರ್ಯಕರ್ತನಾಗಿ, ಕೃಷಿಕನಾಗಿ, ವ್ಯಕ್ತಿಗಳ ಪರಿಚಯ.

ಒಂದೊಂದು ವಿಷಯವೂ ವಿಭಿನ್ನವಾಗಿದ್ದು ವಿಷಯಾಸಕ್ತಿ ಇರುವವರಿಗೆ ಓದಿಸಿಕೊಂಡು ಹೋಗುವಂತಿದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಉಪಯೋಗಿಸಲು ಯೋಗ್ಯವಲ್ಲದ ಔಷಧಿಗಳು

ಅಸಮಂಜಸ ಔಷಧಿಗಳು

ಫೀನೈಲ್ ಪ್ರೊಪಿಲಮಿನ್

ಈ ವರದಿಯನ್ನು ಆಧರಿಸಿ ಅನೇಕ ದೇಶಗಳು ಫೀನೈಲ್ ಪ್ರೊಫಿಲಮಿನ್ ಔಷಧಿಯ ಉಪಯೋಗವನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿವೆ.

ಅಮೇರಿಕಾದಲ್ಲಿ ಕೆಮ್ಮು ಹಾಗೂ ನೆಗಡಿಗೆ ಉಪಯೋಗಿಸುವ ಔಷಧಿಗಳಲ್ಲಿ ಫೀನೈಲ್ ಪ್ರೋಪಿಲಮಿನ್ ಬಳಕೆಯನ್ನು ನಿಷೇಧಿಸಲಾಗಿದೆ.

ಕೆನಡಾದಲ್ಲೂ ಈ ಔಷಧಿಯನ್ನು ಉಪಯೋಗಿಸದಂತೆ ಜನರಿಗೆ ಮಾಹಿತಿಯನ್ನು ಕೊಡಲಾಗುತ್ತಿದೆ.

ಬ್ರಿಟನಲ್ಲಿಯೂ ಜನರಿಗೆ ಈ ಔಷಧಿ ಅಪಾಯದ ಬಗ್ಗೆ ಮಾಹಿತಿ ಕೊಡಲಾಗಿದೆ. ರಕ್ತದ ಏರೊತ್ತಡ ಹಾಗೂ ಹೃದಯದ ರೋಗ ಇರುವವರೂ ಈ ಔಷಧಿಯನ್ನು ಉಪಯೋಗಿಸಬಾರದೆಂದು ಕೇಳಿಕೊಳ್ಳಲಾಗುತ್ತಿದೆ.

ಭಾರತದಲ್ಲೇನು ಪರಿಸ್ಥಿತಿ?

ಫೀನೈಲ್ ಪ್ರೊಪಿಲಮಿನ್ ಒಂದು ಅಪಾಯಕಾರಿ ಔಷಧಿ ಎಂಬ ವಿಷಯ ಭಾರತ ಸರಕಾರಕ್ಕೂ ಗೊತ್ತಿದೆ. ಆದರೆ ಭಾರತ ಸರ್ಕಾರ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಈ ಔಷಧಿ (ನೆಗಡಿ ಔಷಧಿಯನ್ನು) ಯಾವ ಆದೇಶ ಚೀಟಿ ಇಲ್ಲದೆಯೇ ಮಾರಾಟ ಮಾಡಲಾಗುತ್ತಿದೆ! ವೈದ್ಯರೂ ಇವುಗಳನ್ನು ಬರೆದುಕೊಡುತ್ತಿದ್ದಾರೆ. ರಕ್ತದ ಏರೊತ್ತಡ ಇರುವವರೂ ಈ ಔಷಧಿಯನ್ನು ಉಪಯೋಗಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕನಿಷ್ಟ ಪಕ್ಷ ವೈದ್ಯರಾದವರೂ ಈ ಔಷಧಿ ಅಡ್ಡಪರಿಣಾಮದ ಬಗ್ಗೆ ಜನರಿಗೆ ಮಾಹಿತಿ ಕೊಡಬಾರದೆ?

ಈ ಔಷಧಿಗಳಲ್ಲಿ ಫೀನೈಲ್ ಪ್ರೊಪಿಲಮಿನ್ ಜೊತೆಗೆ ಇತರೇ ಔಷಧಿಗಳನ್ನು ಸೇರಿಸಲಾಗಿದೆ. ಇವುಗಳು ಸಮಿಶ್ರ ಔಷಧಿಗಳು. ಈ ಔಷಧಿ ಕಂಪನಿ ತಮ್ಮ ಬ್ರಾಂಡ್ (brand) ಸ್ಥಾಪಿಸಿ ಲಾಭ ಮಾಡುವ ಪ್ರಯತ್ನವಿದು. ಈ ಔಷಧಿಯನ್ನು ಅತಿಹೆಚ್ಚು ಜನರು ಉಪಯೋಗಿಸುತ್ತಾರೆ. ಕೆಮ್ಮಿನ ಸಿರಫ್‌ಗಳಲ್ಲೂ ಈ ಔಷಧಿ ಇರುತ್ತದೆ. ನೆಗಡಿ ಶೀತ ಸಾಮಾನ್ಯ ತೊಂದರೆ, ಎಲ್ಲರಿಗೂ ಗೊತ್ತಿದ್ದ ವಿಷಯ. "ವೈದ್ಯರ ಹತ್ತಿರ ಹೊದರೂ ಅವರೂ ಇದೇ ಔಷಧಿಯನ್ನು ಬರೆದುಕೊಡುತ್ತಾರೆ, ನಾವೇ ನೇರವಾಗಿ ಔಷಧಿ ಅಂಗಡಿಗಳಿಂದ ಈ ಔಷಧಿಗಳನ್ನು ತೆಗೆದುಕೊಳ್ಳಬಹುದಲ್ಲ" ಎಂದು ಉಮೇಶ್ ವಾದಿಸುತ್ತಾರೆ. ಸಾಮಾನ್ಯ ನೆಗಡಿ ಶೀತಕ್ಕೆ ಯಾವ ಔಷಧವೂ ಪ್ರಯೋಜಕವಲ್ಲ. ಅದು ತಂತಾನೇ ಕಡಿಮೆಯಾಗುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಮಾರುಕಟ್ಟೆಯಲ್ಲಿ ದೊರಕುವ ಔಷಧಿಗಳು :

ಆಕ್ಟಿಫೆಡ್ ಪ್ಲಸ್, ಡ್ರಾಪ್ಸ್,
ಜೇಟ್ ಎಕ್ಸ್‌ಪೆಕ್ಟೋರೆಂಟ್
ಟಸ್ಕ್ ಟ್ಯಾಬ್ಲೆಟ ಅಲರ್‌ನಿಲ್ ಡಿಸಿ
ಡ್ರಾಪ್ಸ್ ಎಕ್ಸಪೆಕ್ಟೋರೆಂಟ್
ಅಲೆಕ್ಸ್ ಸಿರಪ್‌ಚೆರಿಕಾಫ್ ಸಾಫ್‌ಜೆಲ್ಸ್
ಕೋಲ್ಡ್ ಆಕ್ಟ್ ಸಿರಪ್‌ಕೋಲ್ಡ್ ಆಕ್ಟ್ ಪ್ಲಸ್
ಕ್ಯಾಪ್ಸೂಲ್ಸ್‌ಟ್ಯಾಬ್ಲೆಟ್ಸ, ಡ್ರಾಪ್ಸ್ ಲಿಕ್ವಿಡ್
ಕೋಲ್ಡ್ ಆಕ್ಟ್‌ಕಾಂಟ್ಯಾಕ್ ಟ್ಯುಬ್ಯೂಲ್ಸ್
ಕೋಲ್‌ಜಿನ್ ಪ್ಲಸ್‌ಡಿಲಿಟಸ್ ಟ್ಯಾಬ್ಲೆಟ್ಸ್
ಟಿ.ಆರ್.ಕ್ಯಾಪ್ಸ್ಯೂಲ್ಸ್‌ಟ್ಯಾಬ್ಲೆಟ್ಸ್
ಎಫಿಡ್ರೆಕ್ಸ್ ಕ್ಯಾಪ್ಸ್ಯೂಲ್ಸ್‌ಎಸ್ಕೋಲ್ಡ್ ಫೆಬ್ರೆಕ್ಸ್
ಪ್ಲಸ್‌ಸೈನಾರೆಸ್ಟ್ ಟ್ಯಾಬ್ಲೆಟ್ಸ್
ಸ್ಪಾಸ್ಯೂಲ್ಸ್ ಟ್ಯಾಬ್ಲೆಟ್ಸ್
ಟೆಕ್ಸಿಲಿಕ್ಸ್ ಲಿಕ್ವಿಡ್‌ಟ್ರೈಯಾಮಿನಿಕ್ ಸಿರಪ್

ಔಷಧಿ ನಿಯಂತ್ರಣ ಈ ಔಷಧಿಯನ್ನು ನಿಷೇಧಿಸಲು ಜನರ ಒತ್ತಡ ಅಗತ್ಯವಿಲ್ಲವೆ?

ಮಾರ್ಚ್ 20 : ಇರಾಕ್ ಯುದ್ಧದ ವಾರ್ಷಿಕ ಯುದ್ಧ-ವಿರೋಧಿ ರ್‍ಯಾಲಿಗಳು

ಮಾರ್ಚ್ 20 ಇರಾಕ್ ಮೇಲೆ ಅಮೆರಿಕ ಯುದ್ಧ ಆರಂಭದ ವಾರ್ಷಿಕ. ಮುಂಬಯಿಯಲ್ಲಿ ಸೇರಿದ್ದ ವಿಶ್ವಸಾಮಾಜಿಕ ವೇದಿಕೆಯಲ್ಲಿ ಜಗತ್ತಿನ ಯುದ್ಧ-ವಿರೋಧಿ ಚಳುವಳಿಗಳು ಅಂದು ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ ಯುದ್ಧವಿರೋಧಿ ರ್‍ಯಾಲಿಗಳನ್ನು ನಡೆಸಬೇಕೆಂದು ಕರೆ ಇತ್ತಿತ್ತು. 45 ದೇಶಗಳಲ್ಲಿ ಲಕ್ಷಾಂತರ ಜನ ಇಂತಹ ರ್‍ಯಾಲಿಗಳಲ್ಲಿ ಭಾಗವಹಿಸಿದ ವರದಿಗಳು ಬಂದಿವೆ. ಮಾರ್ಚ್ 20 ಜಪಾನಿನಲ್ಲಿ ಸೂರ್ಯ ಉದಯಿಸಿದಾಗಿನಿಂದ, ಟೋಕ್ಯೋದಲ್ಲಿ ಆರಂಭಾಗಿ ಅಮೆರಿಕದ ಪಶ್ಚಿಮ ಕರಾವಳಿಯ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸೂರ್ಯ ಮುಳುಗುವ ವರೆಗೆ, ಯುದ್ಧ-ವಿರೋಧಿ ರ್‍ಯಾಲಿಗಳು ಸೂರ್ಯನ ಹಿಂದೆ ಅಲೆಗಳಂತೆ ಹಿಂಬಾಲಿಸಿದವು.

ಇಟಲಿಯ ರೋಮ್‌ನಲ್ಲಿ ಐದು ಲಕ್ಷಕ್ಕೂ ಹೆಚ್ಚು ಜನರ ರ್‍ಯಾಲಿ, ನ್ಯೂಯಾರ್ಕ್‌ನಲ್ಲಿ ನಡೆದ ಒಂದು ಲಕ್ಷ ಜನರ ರ್‍ಯಾಲಿ, ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ 50 ಸಾವಿರ ಜನರ ರ್‍ಯಾಲಿ, ಸ್ಪೈನಿನ ರ್‍ಯಾಲಿ ಅತ್ಯಂತ ದೊಡ್ಡ ರ್‍ಯಾಲಿಗಳು ಎಂದು ವರದಿಯಾಗಿವೆ.

ಅಮೆರಿಕದಲ್ಲೇ 250 ನಗರಗಳಲ್ಲಿ ರ್‍ಯಾಲಿಗಳು ನಡೆದ ವರದಿಗಳು ಬಂದಿವೆ. ಇರಾಕ್‌ಗೆ ಸೈನ್ಯ ಕಳಿಸಿರುವ ದೇಶಗಳಲ್ಲಿ ಸೈನ್ಯ ವಾಪಸು ಕರೆಸುವುದು ರ್‍ಯಾಲಿಗಳ ಪ್ರಮುಖ ಒತ್ತಾಯಗಳಲ್ಲಿ ಒಂದಾಗಿತ್ತು. ನಮ್ಮ ಸರ್ಕಾರಗಳು ನಮಗೆ ಸುಳ್ಳು ಹೇಳಿವೆ. 'ಸತ್ಯಕ್ಕಿದು ಸಮಯ' ಎಂಬುದು - ಇಂತಹ ದೇಶಗಳಲ್ಲಿ ಇನ್ನೊಂದು ಪ್ರಮುಖ ಒತ್ತಾಯವಾಗಿತ್ತು. ಸ್ಪೈನ್‌ನಲ್ಲಿ ಇರಾಕ್ ಯುದ್ಧ ಸರ್ಕಾರ ಉರುಳಿಸಿದ ನಂತರ, ಇಂತಹ ಪ್ರತಿಭಟನೆಗಳನ್ನು ಸರ್ಕಾರಗಳು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಲು ಆರಂಭಿಸಿವೆ.

ಸತ್ಯಕ್ಕಿದು ಸಮಯ

ಲಂಡನ್‌ನಲ್ಲಿ ಪ್ರಸಿದ್ಧ 'ಬಿಗ್‌ಬೆನ್' ಗಡಿಯಾರಕ್ಕೆ ಇಬ್ಬರು ಪ್ರತಿಭಟನಾಕಾರರು ಹತ್ತಿ 'ಸತ್ಯಕ್ಕಿದು ಸಮಯ' ಎಂಬ ಬ್ಯಾನರ್ ತಗಲಿಸಿದರು. ಕೆಲವು ಪ್ರಮುಖ ರ್‍ಯಾಲಿಗಳ ಚಿತ್ರಗಳು



1. ಲಂಡನ್ : ಪ್ರಸಿದ್ಧ ಬಿಗ್‌ಬೆನ್ ಗಡಿಯಾರದ ಮೇಲೆ 'ಸತ್ಯಕ್ಕಿದು ಸಮಯ' ಬ್ಯಾನರ್



AP

2. ಮನಿಲಾ: ಫಿಲಿಫೈನ್ಸ್ ರಾಜಧಾನಿ ಮನಿಲಾದಲ್ಲಿ ಜಲಫಿರಂಗಿ ಧಾಳಿ ಲೆಕ್ಕಿಸದೆ ಪ್ರದರ್ಶನ ಮುಂದುವರಿಸಿದರು.



3. ನ್ಯೂಯಾರ್ಕ್: ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ ರ್‍ಯಾಲಿ

ಕಿಡ್ನಿ ಮಾರುತ್ತೇನೆ...............

ಪುಟ 9 ರಿಂದ

ಇದ್ದಾರೆ. 260 ಮಿಲಿಯನ್ ಜನ ಹಸಿದ ಹೊಟ್ಟೆಯಲ್ಲೇ ರಾತ್ರಿ ಮಲಗಲು ತೆರಳುತ್ತಾರೆ. ಯುನಿಸೆಫ್ ವರದಿಯ ಪ್ರಕಾರ ಭಾರತದಲ್ಲಿ 10 ಕೋಟಿ ಬಾಲಕಾರ್ಮಿಕರಿದ್ದಾರೆ. 2001ರ ಸೆನ್ಸಸ್ ಪ್ರಕಾರ ಜನಸಂಖ್ಯೆಯ ಶೇಕಡ.48 ಮಂದಿಗೆ ವಾಸಿಸಲು ಮನೆಯಿಲ್ಲ. ಶೇಕಡ 44ರಷ್ಟು ಮನೆಗಳಿಗೆ ವಿದ್ಯುತ್ ಇಲ್ಲ (ಭಾರತ ಇಷ್ಟಾಗಿಯೂ ಪ್ರಕಾಶಿಸುತ್ತದೆ!) ಶೇಕಡ 62ರಷ್ಟು ಮನೆಗಳಿಗೆ ನೀರಿನ ಸರಬರಾಜು ಇಲ್ಲ. ಈ ಕೊರತೆಗಳ ನಡುವೆ ಉಣ್ಣಲೂ ಆಸರೆಯಿಲ್ಲ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO)ಯ ವರದಿಯ ಪ್ರಕಾರ ಭಾರತದಲ್ಲಿ ಅಂದಾಜು 500 ಮಿಲಿಯನ್ ಜನ ಆಹಾರದ ಕೊರತೆಯನ್ನು ಎದುರಿಸುತ್ತಿದ್ದಾರೆ. ವಿಪರ್ಯಾಸವೆಂದರೆ ದೇಶದಾದ್ಯಂತ ಸರ್ಕಾರದ ಗೋದಾಮುಗಳಲ್ಲಿ ಆಹಾರ ಧಾನ್ಯದ ಸಂಗ್ರಹಣೆ ಯಥೇಚ್ಛವಾಗಿಯೆ ಇದೆ(ಆಹಾರವನ್ನು ಪಡೆಯುವ ಸಾಮರ್ಥ್ಯವಿದ್ದವರ ಸಾಮರ್ಥ್ಯ ಕೂಡ ಈಗ ಕುಸಿಯುತ್ತಿದೆ. 1995-96ರಲ್ಲಿ ತಲಾವಾರು ಆಹಾರಧಾನ್ಯದ ಲಭ್ಯತೆ 174 ಕೆ.ಜಿ.ಯಿಂದ 156 ಕೆ.ಜಿ.ಗಿಳಿದಿದೆ).

ವಾಜಪೇಯಿ ಸರ್ಕಾರ ಎಸಗಿದ ಒಂದು ಜನದ್ರೋಹದ ಕೆಲಸ ಹೆಚ್ಚು ಪ್ರಚಾರ ಪಡೆಯಲಿಲ್ಲ. ಭಾರತದ ಅಗಾಧ ಜನಸಂಖ್ಯೆ ಹಸಿವಿನಿಂದ ಬಳಲುವಾಗ ವಾಜಪೇಯಿ ಸರ್ಕಾರ ಗೋದಾಮುಗಳಲ್ಲಿ ಕೊಳೆಯುತ್ತಿದ್ದ ಆಹಾರ ಧಾನ್ಯವನ್ನು ಜೂನ್ 2002- ಜೂನ್ 2003ರ ಅವಧಿಯಲ್ಲಿ 12.4 ಮಿಲಿಯನ್ ಟನ್ನಿನಷ್ಟು ರಫ್ತು ಮಾಡಿತು (ಈ ಅವಧಿಯಲ್ಲಿ ದೇಶದಾದ್ಯಂತ ಭೀಕರ ಬರವಿತ್ತು ಎಂಬುದನ್ನು ನಾವು ಮರೆಯಕೂಡದು). ಇನ್ನೊಂದು ಬಾರಿ ಅಂದರೆ ಸೆಪ್ಟೆಂಬರ್ 2003ರ ಹೊತ್ತಿಗೆ ಇನ್ನೂ 17 ಮಿಲಿಯನ್ ಟನ್ನಿನಷ್ಟು ಆಹಾರ ಧಾನ್ಯವನ್ನು ರಫ್ತು ಮಾಡಲಾಯಿತು. ತನ್ನ ಮನೆಯಲ್ಲೇ ಹಸಿದುಕೊಂಡಿರುವವರಿಗೆ ಊಟ ಕೊಡಲಾಗದ ವಾಜಪೇಯಿ ಸರ್ಕಾರ ಆಹಾರ ಮಾರಿ ಹಣಮಾಡಿದ್ದು ಜನದ್ರೋಹವಲ್ಲದೆ ಮತ್ತೇನು?

ಆಹಾರದ ಕೊರತೆಯನ್ನು ಅಪೌಷ್ಟಿಕತೆ ಹಿಂಬಾಲಿಸುವುದು ಸಹಜವೆ. ಪ್ರತಿ ಹತ್ತರಲ್ಲಿ ಒಂಬತ್ತು ಮಂದಿ ಭಾರತೀಯ ಗರ್ಭಿಣಿಯರು (15-49 ವಯಸ್ಸಿನ ನಡುವಿನವರು) ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ನರಳುತ್ತಾರೆ. ಅಪೌಷ್ಟಿಕತೆಯಿಂದ ನರಳುವ ಮಕ್ಕಳ ಸಂಖ್ಯೆ ಜಗತ್ತಿನಲ್ಲೇ ಅತಿಹೆಚ್ಚು. ಭಾರತೀಯ ಮಕ್ಕಳಲ್ಲಿ ಶೇ.50 (5 ವರ್ಷ ಒಳಗಿನವರು) ಮಕ್ಕಳು ಪೋಷಕಾಂಶಗಳ ಕೊರತೆಯನ್ನು ಎದುರಿಸುತ್ತಿವೆ. ಹಸಿವು, ಬಡತನ, ಅನಾರೋಗ್ಯ ಲಾಗಾಯ್ತಿನಿಂದ ಭಾರತದಲ್ಲಿ ಇದೆ. ಅವುಗಳ ಬಗ್ಗೆ ನಾವು ಸಂದೇಹನಾಶೀಲತೆ ಕಳೆದುಕೊಳ್ಳುವಂತೆ ಮಾಡಿದ್ದೆ ವಾಜಪೇಯಿ ಸರ್ಕಾರದ ಸಾಧನೆ.

ಬದುಕು ಹುಡುಕಿ ಹೊರಟರು

ಬರಗಾಲ ಹಾಗೂ ಬಡತನ ಮನುಷ್ಯನನ್ನು ವಲಸೆ ಹೋಗಲು ಪ್ರೇರೇಪಿಸುತ್ತದೆ. 2000-2003ರಲ್ಲಿ ಭಾರತ ಭೀಕರ ಬರಗಾಲವನ್ನು ಕಾಣಬೇಕಾಯಿತು. ಸರ್ಕಾರಗಳ ಕೃಷಿ ನೀತಿಯಿಂದ ತತ್ತರಿಸಿ ಹೋಗಿದ್ದ ರೈತಾಪಿ ವರ್ಗ ಮತ್ತು ಕೃಷಿ ಕಾರ್ಮಿಕರು ಇನ್ನಷ್ಟು ಕುಗ್ಗಿ ಹೋದರು. ಒಂದು ಹೊತ್ತಿನ ಊಟ ಮತ್ತು ಕುಟುಂಬ ನಿರ್ವಹಣೆಗಿಷ್ಟು ಆದಾಯವನ್ನು ಹುಡುಕಿಕೊಂಡು ಗ್ರಾಮೀಣ ಪ್ರದೇಶದಿಂದ ವಲಸೆ ಹೋದವರ ಸಂಖ್ಯೆ ಹಿಂದೆಂದಿಗಿಂತಲೂ ಹೆಚ್ಚಿತ್ತು. ಉದಾಹರಣೆಗೆ ಆಂಧ್ರ ಪ್ರದೇಶದ ಮೆಹಬೂಬ್‌ನಗರ ಜಿಲ್ಲೆ ಬರಗಾಲ ಹಾಗೂ ಬೆಳೆ ನಷ್ಟದಿಂದ ಜಿಲ್ಲೆಯ ಜನಸಂಖ್ಯೆಯ ಮೂರನೇ ಒಂದು ಭಾಗ ಜನ ವಲಸೆ ಹೋದರು. ಉದ್ದಿಮೆಗಳು ಮುಚ್ಚಿ ಕೆಲಸ ಕಳೆದುಕೊಂಡ ಕಾರ್ಮಿಕರ ಜೊತೆ ಈಗ ರೈತ ವರ್ಗವೂ ತನ್ನ ಜಮೀನಿಗೆ ವಿದಾಯ ಹೇಳಿ ವಲಸೆ ಹೋಗುವ ಪ್ರವೃತ್ತಿ ಆತಂಕಕಾರಿ ವಿಚಾರವಾಗಿದೆ. ಕರ್ನಾಟಕ, ಆಂಧ್ರ ಪ್ರದೇಶ, ಒರಿಸ್ಸಾ, ಬಿಹಾರ್, ಗುಜರಾತ್, ಮಧ್ಯ ಪ್ರದೇಶ, ರಾಜಸ್ಥಾನ, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಈ ವಲಸೆ ಪ್ರಮಾಣ ಹೆಚ್ಚಿದೆ. ಎಷ್ಟೋ ಕಡೆ ಚುನಾವಣಾ ಪ್ರಚಾರದ ವೇಳೆ ಸೇರಲು ಹಳ್ಳಿಗಳಲ್ಲಿ ಜನರೇ ಇಲ್ಲ ಎಂದು ವಿವಿಧ ರಾಜಕೀಯ ಪಕ್ಷಗಳ ಜನ ಗೋಳು ಹೇಳಿಕೊಳ್ಳುತ್ತಾರೆ.

ರೈತಾಪಿ ವರ್ಗದ ವಲಸೆ ಇನ್ನೊಂದು ಸಾಮಾಜಿಕ ಸಮಸ್ಯೆಯನ್ನು ಸೃಷ್ಟಿಸಿದೆ. ದುಡಿಯುವ ಸಾಮರ್ಥ್ಯವಿರುವ ಯುವ ಹಾಗೂ ಮಧ್ಯವಯಸ್ಸಿನ ಗಂಡಸರು/ಹೆಂಗಸರು ಕೆಲಸ ಹುಡುಕಿ ಊರು ಬಿಟ್ಟು ಹೋಗುತ್ತಾರೆ. ವಯಸ್ಸಾದವರು ಮತ್ತು ಮಕ್ಕಳು ಮಾತ್ರ ಮನೆಯಲ್ಲಿ ಉಳಿಯುತ್ತಾರೆ. ಅವರನ್ನು ನೋಡಿಕೊಳ್ಳುವವರಿಲ್ಲದೆ ಕಾಯಿಲೆ-ಕಸಾಲೆಯಿಂದ ಸಾಯುವವರ ಸಂಖ್ಯೆಯು ಹೆಚ್ಚಿದೆ.


ರೈತರು ಹಾಗೂ ಕೃಷಿ ಕಾರ್ಮಿಕರ ಸಾಮೂಹಿಕ ವಲಸೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಳ್ಳುತ್ತವೆ. ಜೊತೆಗೆ ಕೃಷಿ ಆಧಾರಿತ ಇತರ ಉದ್ಯಮಗಳೂ, ವ್ಯವಹಾರಗಳೂ ನಲುಗುತ್ತವೆ. 1998ರಿಂದ ದೇಶದಲ್ಲಿ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಮಾರಾಟ ಉದ್ಯಮ ಹಿನ್ನಡೆ ಕಾಣುತ್ತ ಬಂದಿದೆ. ಬಟ್ಟೆ ವ್ಯಾಪಾರಗಳು, ನರ್ಸಿಂಗ್ ಹೋಮ್‌ಗಳು, ಹೋಟೆಲ್‌ಗಳಲ್ಲಿ ಬಿಸಿನೆಸ್ ಕಡಿಮೆಯಾಗಿರುವುದನ್ನು ಗುರುತಿಸಬಹುದು. ಬ್ಯಾಂಕ್‌ಗಳ, ಠೇವಣಿ ಪ್ರಮಾಣದಲ್ಲಿ ಕುಸಿತ, ವಿಮಾ ಕಂಪೆನಿಗಳಲ್ಲಿ ಪಾಲಿಸಿಗಳ ಸರೆಂಡರ್ ಹೆಚ್ಚಿರುವುದನ್ನು ಕಾಣಬಹುದು.

ಆಹಾರ, ನೌಕರಿ ಮತ್ತು ಆರೋಗ್ಯದ ಭದ್ರತೆಗಳ ಪ್ರಶ್ನೆಯೇ ಎಲ್ಲ ಕಾಲಕ್ಕೂ ಪ್ರಸ್ತುತವೆಂಬ ವಿಚಾರವನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಷ್ಟಲ್ಲದೆ ಪುರಂದರ ದಾಸರು ಹಾಡಿದರೆ "ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ......"

'ವಿಕಾಸಪುರುಷ' ವಾಜಪೇಯಿಯವರಿಗೆ ಕೇಳಬಹುದೆ ನಮ್ಮ ಮೊರೆ?

ಹಮಾಸ್ ಹಿರಿಯ ನಾಯಕನ ಕೊಲೆ

ಪಶ್ಚಿಮ ಏಶ್ಯಾದಲ್ಲಿ ಶಾಂತಿಗೆ ದೊಡ್ಡ ಹೊಡೆತ




ಇಸ್ರೇಲಿ ಯುದ್ಧ ವಿಮಾನಗಳು ಹಮಾಸ್ ಹಿರಿಯ ನಾಯಕ 67 ವರ್ಷದ ಗಾಲಿ ಕುರ್ಚಿಯಲ್ಲೇ ಓಡಾಡುವ ಶೇಕ್ ಅಹ್ಮದ್ ಯಾಸಿನ್ ಮೇಲೆ ಬಾಂಬ್ ದಾಳಿ ನಡೆಸಿ ಕೊಂದಿವೆ. ಹಮಾಸ್ ಅರಬ್ ಪ್ರದೇಶದ ಇಸ್ಲಾಮಿಕ್ ಉಗ್ರಗಾಮಿಗಳ ತಂಡ. ಇಸ್ರೇಲ್‌ನ ಭಯೋತ್ಪಾದಕ ದಮನಕ್ಕೆ ಹಿಂಸಾತ್ಮಕ ಉತ್ತರ ಕೊಡುವುದರಲ್ಲಿ ನಂಬಿರುವ ಸಂಘಟನೆ. ಹಾಡು ಹಗಲಲ್ಲೇ ಈ ಕಗ್ಗೊಲೆಯಿಂದ ಇಸ್ರೇಲ್ ಸರ್ಕಾರ ಮತ್ತು ಅದಕ್ಕೆ ಸದಾ ಕುಮ್ಮಕ್ಕು ಕೊಡುವ ಅಮೆರಿಕನ್ ಸರ್ಕಾರಗಳು, ಜಗತ್ತಿನಲ್ಲೇ ಅತ್ಯಂತ ಅಪಾಯಕಾರಿ ಭಯೋತ್ಪಾದಕರು ಎಂದು ಮತ್ತೊಮ್ಮೆ ರುಜುವಾತು ಪಡಿಸಿವೆ - ಯಾರಿಗಾದರೂ ಈಗ ಅದರ ಬಗ್ಗೆ ಅನುಮಾನ ಇದ್ದರೆ. ಇಸ್ರೇಲ್ ಪ್ರಧಾನಿ ಶರೂನ್, ಇತರ ಹಮಾಸ್ ಹಿರಿಯ ನಾಯಕರನ್ನು ಹೀಗೆ ಕೊಲ್ಲುವುದಾಗಿ ಹೇಳಿ ಅದನ್ನು ದೃಢಪಡಿಸಿದ್ದಾರೆ. ಭದ್ರತಾ ಸಮಿತಿಯಲ್ಲಿ ಇಸ್ರೇಲಿನ ಈ ಕೃತ್ಯವನ್ನು ಖಂಡಿಸುವ ನಿರ್ಣಯವನ್ನು ಅಮೆರಿಕ ತನ್ನ ವಿಟೋ ಬಳಸಿ ತಡೆದಿದೆ.


ಹಮಾಸ್ ನಾಯಕ ಯಾಸಿನ್, ಬಿಸಿರಕ್ತದ ಗೆರಿಲ್ಲಾ ತರುಣರನ್ನು ಹದುಬಸ್ತಿನಲ್ಲಿಡಬಹುದಾದ ನಾಯಕ ಎಂದು ಹಲವು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಯಾಸಿನ್ ಕೊಲೆಯಿಂದ ಒಂದು ಕಡೆ ಪ್ರತೀಕಾರದ ಕೂಗು ಎದ್ದರೆ, ಇನ್ನೊಂದು ಕಡೆ ತಾಳ್ಮೆ ಹೇಳುವ ನಾಯಕನ ಅಭಾವ ಇಲ್ಲದೆ- ಪಶ್ಚಿಮ ಏಶ್ಯಾ ಹಿಂಸಾತ್ಮಕ ಕೃತ್ಯಗಳ ಸರಣಿ ಆರಂಭಿಸುವುದು. ಪ್ಯಾಲೆಸ್ಟೈನ್ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸುವ ಯಾವುದೇ ಸಾಧ್ಯತೆಯನ್ನು ಈ ಕೊಲೆ ಇಲ್ಲವಾಗಿಸಿದೆ.

ಬುಶ್‌ನ 'ಜೂನಿಯರ್ ಪಾರ್ಟನರ್' ವಾಜಪೇಯಿ ಸಹ ತನ್ನ ಬಾಸ್‌ನ ನೀತಿಯನ್ನು ಯಥಾಪ್ರಕಾರ ಅನುಸರಿಸಿದ್ದಾರೆ. ಇಸ್ರೇಲಿ ಕೃತ್ಯವನ್ನು ಬಲವಾಗಿ ಖಂಡಿಸಿ, ಇಸ್ರೇಲಿ ಝಿಯೋನಿಸಂನ ವಿರುದ್ಧ ಇಡೀ ಜಗತ್ತಿನ ವಿರೋಧಕ್ಕೆ ನಾಯಕತ್ವ ಕೊಡುವ ಮುತ್ಸದಿತನ ಇವರಿಂದ ನಿರೀಕ್ಷಿಸುವುದು ಹೇಗೆ? ಬಾಸ್ 'ಬುಶ್' ನಂತೆ ಎರಡೂ ಕಡೆ ತಾಳ್ಮೆವಹಿಸಬೇಕು ಎಂಬ ಎಡಬಿಡಂಗಿ ಹೇಳಿಕೆ ನೀಡಿದೆ. ಜಗತ್ತಿನಲ್ಲಿ ಭಾರತದ ಫ್ಯಾಸಿಸ್ಟ್‌ಗೆ ಕುಂದು ತರುವ ಈ ಸರ್ಕಾರ ಕಿತ್ತುಹಾಕದೆ ವಿಧಿಯಿಲ್ಲ.

ಗುಜರಾತ್ ಪ್ರಯೋಗಶಾಲೆ ಮಾತ್ರ !

- ಎರಡು ಸಾವಿರ ಕೊಲೆ
- ನೂರಾರು ಮಹಿಳೆಯರ ಸಾಮೂಹಿಕ ಮಾನಭಂಗ
- ಎರಡು ಲಕ್ಷ ನಿರಾಶ್ರಿತರು
- 3800 ಕೋಟ್ಯಾಂತರ ರೂ. ಆಸ್ತಿಪಾಸ್ತಿ ನಷ್ಟ











- ಸಂಘಪರಿವಾರ - ಸರ್ಕಾರದ ಜಂಟಿ ಕಾರ್ಯಾಚರಣೆ
- ನೊಂದವರಿಗೆ ಪರಿಹಾರ ಇಲ್ಲ
- ನಿರಾಶ್ರಿತರಿಗೆ ಪುನರ್ವಸತಿ ಇಲ್ಲ
- ಅಪರಾಧಿಗಳಿಗೆ ಶಿಕ್ಷೆ ಇಲ್ಲ

ಬಿಜೆಪಿ ದುಷ್ಟಕೂಟಕ್ಕೆ ಮತದಾನ ?







ಫ್ಯಾಸಿಸ್ಟ್ - ಹಿಂದೂರಾಷ್ಟ್ರಕ್ಕೆ ಆಹ್ವಾನ !

ಬಾಬಾಬುಡನ್‌ಗಿರಿ ಅಯೋಧ್ಯೆ ಆಗುವುದು ಬೇಡ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Comm